ಗುರುವಾರ, ಜೂನ್ 26, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 176 | ಪುಟ 14

prajavani.net prajavani ● www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಈಜು: ದಿನಿಧಿ ದಾಖಲೆ



ಕರ್ನಾಟಕದ ದಿನಿಧಿ ದೇಸಿಂಗು ಅವರು ಒಡಿಶಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಈಜುಕೂಟದ ಮಹಿಳೆಯರ 100 ಮೀ ಫ್ರೀಸ್ಟೈಲ್ ವಿಭಾಗದಲ್ಲಿ ದಾಖಲೆ ನಿರ್ಮಿಸಿದರು

ಬಹುಹಂತದ ಭದ್ರತೆ



ಅಮರನಾಥ ಯಾತ್ರೆಯನ್ನು ಯಶಸ್ವಿಯಾಗಿಸುವ ನಿಟ್ಟನಲ್ಲಿ ಬಹುಹಂತದ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ

ಸೆನ್ಸೆಕ್ಸ್ 82,755 | ನಿಫ್ಟಿ 25,244 | $/₹ 86.08 | ಚಿನ್ನ (Std. 10g) ₹1.02 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.12 ಲಕ್ಷ (ಬೆಂಗಳೂರು)

‘ಕೈ’, ‘ಕಮಲ’ದೊಳಗೆ ಅಸಮಾಧಾನ, ತಳಮಳ

ಕರ್ನಾಟಕದ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷ ಬಿಜೆಪಿಯೊಳಗಿನ ಅತೃಪ್ತಿ ಬೆಳೆಯುತ್ತಲೇ ಇದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಬದಲಾಯಿಸಬೇಕು ಎಂಬ ಆಗ್ರಹ ಹೆಚ್ಚುತ್ತಲೇ ಇದೆ. ಕಾಂಗ್ರೆಸ್‌ನಲ್ಲಿ ಸರ್ಕಾರದ ಕಾರ್ಯವೈಖರಿ ಕುರಿತು ಅತೃಪ್ತಿಯ ಮಾತು ನಿಲ್ಲುತ್ತಲೇ ಇಲ್ಲ. ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರು ಮುಖಂಡರ ಅಹವಾಲು ಕೇಳುತ್ತಿಲ್ಲ ಎಂಬ ಆಕ್ರೋಶವೂ ಕೆಲವರಲ್ಲಿ ಈಗ ಇದೆ

ಸುನಿಲ್ ಪರ ತಟಸ್ಥ-ಭಿನ್ನರ ಲಾಬಿ

ಪ್ರಜಾವಾಣಿ ವಾರ್ತೆ




ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಕಾರ್ಕಳ ಶಾಸಕ ವಿ.ಸುನಿಲ್ ಕುಮಾರ್ ಅವರನ್ನು ನೇಮಿಸಬೇಕು ಎಂದು ಪಕ್ಷದ ತಟಸ್ಥ ಬಣ ಹಾಗೂ ಭಿನ್ನರ ಬಣ ಪ್ರಬಲ ಲಾಬಿ ನಡೆಸಿವೆ.

‘ಸುನಿಲ್ ಯುವ ನಾಯಕ. ಪ್ರಖರ ಹಿಂದುತ್ವವಾದಿ. ಸಂಘದ ಜತೆಗೆ ಉತ್ತಮ ನಂಟು ಹೊಂದಿದ್ದಾರೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ತೀರ್ಮಾನ ತೆಗೆದುಕೊಳ್ಳಬೇಕು’ ಎಂಬುದು ತಟಸ್ಥ ಬಣದ ವಾದ. ‘ಲಿಂಗಾಯತ ಸಮುದಾಯದ ಬಿ.ವೈ. ವಿಜಯೇಂದ್ರ ಅವರನ್ನು ಇಳಿಸಿದರೆ ಸಮುದಾಯಕ್ಕೆ ತಪ್ಪು ಸಂದೇಶ ನೀಡಿದಂತಾಗುತ್ತದೆ. ಯಡಿಯೂರಪ್ಪ ಅವರ ಕೋಪ ತಾಪ ಎದುರಿಸಬೇಕಾಗುತ್ತದೆ’ ಎಂಬ ಆತಂಕವೂ ರಾಷ್ಟ್ರೀಯ ನಾಯಕರನ್ನು ಕಾಡುತ್ತಿದೆ. ‘ಲಿಂಗಾಯತ ಸಮುದಾಯದವರು ದಶಕಗಳಿಂದ ಬಿಜೆಪಿಗೆ ನಿಷ್ಠರು. ಯಡಿಯೂರಪ್ಪ ಅವರು ಸಮುದಾಯದ ಪ್ರಬಲ ನಾಯಕ. ಅದೇ ಮಾತನ್ನು ವಿಜಯೇಂದ್ರ ಅವರಿಗೆ ಹೇಳಲು ಸಾಧ್ಯವಿಲ್ಲ. ರಾಜ್ಯದಲ್ಲಿ ಪಕ್ಷ ಪುಟಿದೇಳಬೇಕಾದರೆ ಕಠಿಣ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈ ವಿಷಯವನ್ನು ವರಿಷ್ಠರ ಗಮನಕ್ಕೆ ತಂದಿದ್ದೇವೆ’ ಎಂದು ಹಿರಿಯ ನಾಯಕರೊಬ್ಬರು ತಿಳಿಸಿದರು.

ಈ ನಡುವೆ, ‘ನಾನು ರಾಜ್ಯ ಘಟಕದ ಅಧ್ಯಕ್ಷನಾದ ಬಳಿಕ ಸುನಿಲ್ ಅವರನ್ನು ಪಕ್ಷದ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿದೆ. ಕೆಲವೇ ಸಮಯದಲ್ಲಿ ಸಕಾರಣವಿಲ್ಲದೆ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಅವರಿಗೆ ನಾನೇನೂ ಅನ್ಯಾಯ ಮಾಡಿಲ್ಲ’ ಎಂದು ವಿಜಯೇಂದ್ರ ಅವರು ಆಪ್ತರಲ್ಲಿ ಬೇಸರ ತೋಡಿಕೊಂಡಿದ್ದಾರೆ.

▶ 9

ಸುರ್ಜೇವಾಲಾ ವಿರುದ್ಧ ‘ಕೈ’ ಶಾಸಕರ ಮುನಿಸು



ನವದೆಹಲಿ: ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯಕ್ಕೆ ‘ಅಪರೂಪ’ವಾಗಿರುವ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ವಿರುದ್ಧ ‘ಕೈ’ ಶಾಸಕರು ಅಸಮಾಧಾನ ಹೊರ ಹಾಕಿದ್ದಾರೆ.

‘ರಾಜ್ಯ ಸರ್ಕಾರದ ಕೆಲವು ಸಚಿವರ ಧೋರಣೆ, ಲಂಚ ಹಾಗೂ ಕಾರ್ಯವೈಖರಿ ಬಗ್ಗೆ ಸ್ವಪಕ್ಷೀಯ ಶಾಸಕರೇ ಧ್ವನಿ ಎತ್ತಿದ್ದಾರೆ. ಈ ರೀತಿ ಧ್ವನಿ ಎತ್ತುತ್ತಿರುವುದು ಇದೇ ಮೊದಲಲ್ಲ. ಶಾಸಕರ ಅಹವಾಲು ಆಲಿಸಿ ಸಮಸ್ಯೆಗೆ ತಾರ್ಕಿಕ ಅಂತ್ಯ ಕಂಡುಹಿಡಿಯಲು ಪಕ್ಷದ ರಾಜ್ಯ ಉಸ್ತುವಾರಿ ಮುಂದಾಗಬೇಕಿತ್ತು. ಅವರು ರಾಜ್ಯಕ್ಕೆ ಬರುವುದೇ ಅಪರೂಪವಾಗಿದೆ. ನಾವು ನಮ್ಮ ಸಮಸ್ಯೆಯನ್ನು ಹೇಳಿಕೊಳ್ಳುವುದು ಯಾರಲ್ಲಿ’ ಎಂದು ಹಿರಿಯ ಶಾಸಕರೊಬ್ಬರು ಅಳಲು ತೋಡಿಕೊಂಡರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮುಕ್ತವಾಗಿ ನಮ್ಮ ಸಮಸ್ಯೆ ಹೇಳಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಇದೆ. ಮುಖ್ಯಮಂತ್ರಿ ಸುತ್ತ ಆಪ್ತ ಸಚಿವರು ಹಾಗೂ ಶಾಸಕರೇ ಇರುತ್ತಾರೆ. ನಮ್ಮ ಕಷ್ಟವನ್ನು ಈ ನಾಯಕರು ಅರ್ಥ ಮಾಡಿಕೊಳ್ಳುವುದೂ ಇಲ್ಲ. ಉಸ್ತುವಾರಿ ಅವರಲ್ಲಿ ನೋವು ತೋಡಿಕೊಳ್ಳೋಣ ಎಂದರೆ ಅವರೂ ಕೈಗೆ ಸಿಗುತ್ತಿಲ್ಲ’ ಎಂದು ಮತ್ತೊಬ್ಬ ಶಾಸಕರು ಬೇಸರ ವ್ಯಕ್ತಪಡಿಸಿದರು.

▶ 9

ಬಾಹ್ಯಾಕಾಶ: ಶುಭಾಂಶು ಶುಭಾರಂಭ

41 ವರ್ಷಗಳ ಬಳಿಕ ಭಾರತದ ಮತ್ತೊಬ್ಬ ಗಗನಯಾನಿ ಅಂತರಿಕ್ಷಕ್ಕೆ ● ಯಶಸ್ವಿಯಾಗಿ ಚಿಮ್ಮಿದ ‘ಆಕ್ಸಿಯಂ–4’



ನವದೆಹಲಿ (ಪಿಟಿಐ/ಎಎಫ್‌ಪಿ): ‘ಆಕ್ಸಿಯಂ–4’ ಅಂತರಿಕ್ಷ ಕಾರ್ಯಕ್ರಮದ ಭಾಗವಾಗಿ ಭಾರತದ ಗಗನಯಾನಿ ಶುಭಾಂಶು ಶುಕ್ಲಾ, ಹಂಗರಿ, ಪೋಲೆಂಡ್‌ನ ಗಗನಯಾತ್ರಿಗಳು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದತ್ತ (ಐಎಸ್‌ಎಸ್) ಬುಧವಾರ ಯಶಸ್ವಿಯಾಗಿ ಪ್ರಯಾಣ ಬೆಳೆಸಿದರು.

ಗಗನಯಾತ್ರಿಗಳಿರುವ ‘ಡ್ರ್ಯಾಗನ್’ ಬಾಹ್ಯಾಕಾಶ ಕೋಶವನ್ನು ಹೊತ್ತ ಸ್ಪೇಸ್‌ಎಕ್ಸ್‌ನ ‘ಫಾಲ್ಕನ್–9’ ರಾಕೆಟ್ ಫ್ಲಾರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ನಭಕ್ಕೆ ಮಧ್ಯಾಹ್ನ 12.01ಕ್ಕೆ (ಭಾರತೀಯ ಕಾಲಮಾನ) ಯಶಸ್ವಿಯಾಗಿ ಚಿಮ್ಮಿತು. ಅದು ಸುಮಾರು 28 ಗಂಟೆಗಳ ಬಳಿಕ, ಅಂದರೆ ಗುರುವಾರ ಸಂಜೆ 4.30ಕ್ಕೆ ಐಎಸ್‌ಎಸ್‌ನೊಂದಿಗೆ ಜೋಡಣೆಯಾಗುವ (ಡಾಕಿಂಗ್) ನಿರೀಕ್ಷೆಯಿದೆ.

ಶುಕ್ಲಾ ಅವರೊಂದಿಗೆ, ಅಮೆರಿಕದ ಕಮಾಂಡರ್ ಪೆಗ್ಗಿ ವಿಟ್ಸನ್, ಹಂಗರಿಯ ಟಿಬೊರ್ ಕಾಪು ಹಾಗೂ ಪೋಲೆಂಡ್‌ನ ಸ್ವವೋಶ್ ಓಜ್ನೈನ್‌ಸ್ಕಿ ವೀಶ್ನೀವುಫ್‌ಸ್ಕಿ ಪ್ರಯಾಣ ಕೈಗೊಂಡಿದ್ದಾರೆ. 14 ದಿನಗಳವರೆಗೆ ಐಎಸ್‌ಎಸ್‌ನಲ್ಲಿರುವ ಈ ಗಗನಯಾನಿಗಳು ವಿಜ್ಞಾನದ ಕುರಿತು 60ಕ್ಕೂ ಹೆಚ್ಚು ಪ್ರಯೋಗಗಳನ್ನು ಕೈಗೊಳ್ಳಲಿದ್ದಾರೆ. ವಿವಿಧ ತಾಂತ್ರಿಕ ಕಾರಣಗಳಿಂದ ಈ ಯೋಜನೆಯ ಉಡ್ಡಯನ ಆರು ಬಾರಿ ಮುಂದಕ್ಕೆ ಹೋಗಿತ್ತು.

▶ 3B

140 ಕೋಟಿ ಭಾರತೀಯರ ಆಕಾಂಕ್ಷೆಗಳಿವೆ: ಪ್ರಧಾನಿ



ನವದೆಹಲಿ (ಪಿಟಿಐ): ‘ಆಕ್ಸಿಯಂ–4’ ಯಶಸ್ವಿಯಾಗಿ ಉಡಾವಣೆ ಆಗಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ‘ಗಗನಯಾನಿ ಶುಭಾಂಶು ಶುಕ್ಲಾ ಅವರು ಭಾರತದ 140 ಕೋಟಿ ಜನರ ಆಶಯ, ಆಕಾಂಕ್ಷೆ ಮತ್ತು ಭರವಸೆಗಳನ್ನು ಹೊತ್ತು ತೆರಳಿದ್ದಾರೆ. ಭಾರತ, ಹಂಗರಿ, ಪೋಲೆಂಡ್‌ನ ಗಗನಯಾನಿಗಳು ಕೈಗೊಂಡಿರುವ ಈ ಪ್ರಯಾಣ ಯಶಸ್ವಿಯಾಗಲಿ’ ಎಂದು ಹಾರೈಸಿದ್ದಾರೆ.

‘ತಂಡದ ಕ್ಯಾಪ್ಟನ್ ಶುಕ್ಲಾ ಅವರು ಐಎಸ್‌ಎಸ್‌ಗೆ ತೆರಳುತ್ತಿರುವ ಮೊದಲ ಭಾರತೀಯರಾಗುವ ಹಾದಿಯಲ್ಲಿ ಇದ್ದಾರೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಕೇಂದ್ರ ಸಂಪುಟ ಸಹ ಶುಭ ಕೋರಿದೆ.

ರಾಕೆಟ್ ಉಡ್ಡಯನದ ಸಮಯ	ಐಎಸ್‌ಎಸ್ ಜತೆ ಜೋಡಣೆಯಾಗುವ ಸಮಯ	ಐಎಸ್‌ಎಸ್‌ನಲ್ಲಿ ಈ ಗಗನಯಾನಿಗಳು ಇರುವ ಅವಧಿ	ನಡೆಸಲಿರುವ ವಿಜ್ಞಾನದ ಪ್ರಯೋಗಗಳು
ಮಧ್ಯಾಹ್ನ 12.01 (ಬುಧವಾರ)	ಸಂಜೆ 4.30 (ಗುರುವಾರ)	14 ದಿನಗಳು	60

ಯೋಜನೆಯ ಉದ್ದೇಶಗಳು

60 ಬಗೆಯ ಅಧ್ಯಯನ

ಕೆಳ ಭೂ ಕಕ್ಷೆಯಲ್ಲಿರುವ ಸೂಕ್ಷ್ಮ ಗುರುತ್ವಾಕರ್ಷಣೆ ವಾತಾವರಣದಲ್ಲಿ ಪ್ರಯೋಗ

ಮಾನವ ಸಂಶೋಧನೆಗಳ ಬಗ್ಗೆ ಜಾಗತಿಕ ಜ್ಞಾನವೃದ್ಧಿ ಮತ್ತು ಭೂ ಗ್ರಹದ ಪರಿಶೀಲನೆ

6 ಬಾರಿ ವಿವಿಧ ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದ್ದ ಯೋಜನೆ



ಭಾರತದ ಶುಭಾಂಶು ಶುಕ್ಲಾ, ಪೈಲಟ್



ಅಮೆರಿಕದ ಪೆಗ್ಗಿ ವಿಟ್ಸನ್, ಕಮಾಂಡರ್



ಪೋಲೆಂಡ್‌ನ ಸ್ವವೋಶ್ ಓಜ್ನೈನ್‌ಸ್ಕಿ ವೀಶ್ನೀವುಫ್‌ಸ್ಕಿ, ಯೋಜನಾ ತಜ್ಞ



ಹಂಗರಿಯ ಟಿಬೊರ್ ಕಾಪು, ಯೋಜನಾ ತಜ್ಞ

‘ಕಮಾಲ್ ಕಿ ರೈಡ್’: ಶುಕ್ಲಾ ಸಂದೇಶ

‘ಕ್ಯಾ ಕಮಾಲ್ ಕಿ ರೈಡ್ ಥಿ’... (ಇದು ಉತ್ತಮ ಸವಾರಿಯಾಗಿತ್ತು), ಇದು ನಭಕ್ಕೆ ಉಡಾವಣೆಯಾದ 10 ನಿಮಿಷದಲ್ಲಿ ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರು ಕಳುಹಿಸಿದ ಸಂದೇಶ.

ಬಾಹ್ಯಾಕಾಶ ನೌಕೆಯು ಭೂಮಿಯಿಂದ 200 ಕಿ.ಮೀ ಎತ್ತರದಲ್ಲಿನ ಕಕ್ಷೆ ತಲುಪಿದ ಬಳಿಕ ಮಾತನಾಡಿರುವ ಅವರು, ‘ನನ್ನ ಆತ್ಮೀಯ ದೇಶವಾಸಿಗಳಿಗೆ ನಮಸ್ಕಾರ. ಕ್ಯಾ ಕಮಾಲ್ ಕಿ ರೈಡ್ ಥಿ... 41 ವರ್ಷಗಳ ಬಳಿಕ ಮಾನವ ಸಹಿತ ಬಾಹ್ಯಾಕಾಶ ಯಾನಕ್ಕೆ ಭಾರತ ಮರಳಿದೆ’ ಎಂದು ಹೇಳಿದ್ದಾರೆ. ‘ಭೂಮಿಯನ್ನು ನಾವು ಸೆಕೆಂಡಿಗೆ 7.5 ಕಿ.ಮೀ ವೇಗದಲ್ಲಿ ಸುತ್ತುತ್ತಿದ್ದೇವೆ. ಭಾರತದ ತ್ರಿವರ್ಣ ಧ್ವಜ ನನ್ನ ಭುಜದ ಮೇಲಿದೆ. ನಿಮ್ಮೆಲ್ಲರ ಪರವಾಗಿ ನಾನಿಲ್ಲಿದ್ದೇನೆ’ ಎಂದಿದ್ದಾರೆ.

‘ಈಗ ಐಎಸ್‌ಎಸ್‌ಗೆ ನನ್ನ ಪ್ರಯಾಣದ ಆರಂಭದ ಜತೆಗೆ, ಭಾರತದ ಮಾನವ ಸಹಿತ ಬಾಹ್ಯಾಕಾಶ ಹಾರಾಟದ ಆರಂಭವೂ ಆಗಿದೆ. ಭಾರತೀಯರೆಲ್ಲರೂ ಈ ಪ್ರಯಾಣದ ಭಾಗವಾಗಬೇಕು ಎಂದು ನಾನು ಬಯಸುತ್ತೇನೆ. ನಾವೆಲ್ಲರೂ ಒಟ್ಟಿಗೆ ಈ ಕಾರ್ಯಕ್ರಮದಲ್ಲಿ ಭಾಗಿಯಾಗೋಣ’ ಎಂದು ಅವರು ಹೇಳಿದ್ದಾರೆ.

ಕಕ್ಷೆ ಪ್ರವೇಶಿಸಿದ ಕ್ಯಾಪ್ಸೂಲ್‌ಗೆ ಗಗನಯಾನಿಗಳು ‘ಗ್ರೇಸ್’ ಎಂದು ಹೆಸರಿಟ್ಟಿದ್ದಾರೆ ಎಂಬುದಾಗಿ ‘ಸ್ಪೇಸ್‌ಎಕ್ಸ್’ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

18 ಕಡೆ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಸೀಟ್ ಬ್ಲಾಕಿಂಗ್

ಬೆಂಗಳೂರು: ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್ ಪ್ರಕರಣದಲ್ಲಿ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಆಕಾಶ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಮತ್ತು ನ್ಯೂ ಹೊರೈಜಾನ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಕಚೇರಿಗಳು ಸೇರಿ ನಗರದ 18 ಕಡೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಶೋಧಕಾರ್ಯ ನಡೆಸಿದ್ದಾರೆ.

2024–25ನೇ ಸಾಲಿನ ಸಿಇಟಿಯಲ್ಲಿ ಸರ್ಕಾರಿ ಕೋಟಾದಡಿ ಈ ಕಾಲೇಜುಗಳಿಗೆ ಹಂಚಿಕೆಯಾಗಿದ್ದ ಎಂಜಿನಿಯರಿಂಗ್ ಸೀಟುಗಳನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡಿಕೊಂಡಿದ್ದಾರೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಪೊಲೀಸರಿಗೆ ದೂರು ನೀಡಿತ್ತು. ಇ.ಡಿ ಸಹ ಪ್ರಕರಣ ದಾಖಲಿಸಿಕೊಂಡಿತ್ತು.

ಬಿಎಂಎಸ್, ಆಕಾಶ್ ಮತ್ತು ನ್ಯೂ ಹೊರೈಜಾನ್ ಕಾಲೇಜಿನ ಕ್ಯಾಂಪಸ್‌ಗಳ ಮೇಲೆ ಬುಧವಾರ ಬೆಳಿಗ್ಗೆ ದಿಢೀರ್ ದಾಳಿ ನಡೆಸಿದ ಇ.ಡಿ ಅಧಿಕಾರಿಗಳು ಸಂಜೆಯವರೆಗೂ ಶೋಧ ನಡೆಸಿದರು. ಬಿಎಂಎಸ್ ಶೈಕ್ಷಣಿಕ ಸಂಸ್ಥೆಗಳ ಟ್ರಸ್ಟಿಗಳ ಕಚೇರಿ, ಮನೆ ಮತ್ತು ಆಪ್ತರ ಮನೆಗಳಲ್ಲಿ ಶೋಧಕಾರ್ಯವು, ರಾತ್ರಿಯೂ ಮುಂದುವರಿದಿತ್ತು.

‘ಸೀಟ್ ಬ್ಲಾಕಿಂಗ್ ಹಲವು ವರ್ಷಗಳಿಂದ ನಡೆಯುತ್ತಿರುವ ಬಗ್ಗೆ ಅನುಮಾನವಿದ್ದು, ನಾಲ್ಕು ವರ್ಷಗಳ ದಾಖಲಾತಿ ವಿವರಗಳನ್ನು ಕಲೆಹಾಕಲಾಗಿದೆ. ಕೆಇಎಯಿಂದಲೂ ಸರ್ಕಾರಿ ಕೋಟಾದ ಸೀಟುಗಳ ವಿವರ ಪಡೆದುಕೊಂಡಿದ್ದು, ಕಾಲೇಜಿನ ದಾಖಲಾತಿಗಳನ್ನು ತಾಳೆ ನೋಡಲಾಗುತ್ತಿದೆ. ಈ ನಾಲ್ಕು ವರ್ಷದಲ್ಲೂ ಸಾವಿರಾರು ಸೀಟುಗಳನ್ನು, ಸೀಟ್ ಬ್ಲಾಕಿಂಗ್ ಮೂಲಕ ಮಾರಾಟ ಮಾಡಿರುವ ಸುಳಿವು ದೊರೆತಿದೆ’ ಎಂದು ಇ.ಡಿ ಮೂಲಗಳು ಖಚಿತಪಡಿಸಿವೆ.

‘ಬಿಎಂಎಸ್ ಶಿಕ್ಷಣ ಸಂಸ್ಥೆಗಳ ಜತೆಗೆ ನಿಕಟ ವ್ಯವಹಾರ ಹೊಂದಿದ್ದ ಮಧ್ಯವರ್ತಿಗಳ ಕಚೇರಿ ಮತ್ತು ಮನೆಗಳಲ್ಲಿ ಶೋಧ ನಡೆಸಲಾಗಿದ್ದು, ಅವರು ಉತ್ತರ ಭಾರತದ ಹಲವು ಕೋಚಿಂಗ್ ಸೆಂಟರ್‌ಗಳ ಜತೆ ನಿರಂತರವಾಗಿ ಸಂಪರ್ಕ ಹೊಂದಿದ್ದದ್ದು ಪತ್ತೆಯಾಗಿದೆ. ಜತೆಗೆ ಆ ಕೋಚಿಂಗ್ ಸೆಂಟರ್‌ಗಳ ವಿದ್ಯಾರ್ಥಿಗಳಿಗೆ, ಈ ಮೂರು ಕಾಲೇಜುಗಳಲ್ಲಿ ಸೀಟು ಕೊಡಿಸಿರುವ ದಾಖಲೆಗಳು ಸಿಕ್ಕಿವೆ’ ಎಂದು ಮಾಹಿತಿ ನೀಡಿವೆ.


‘ತುಮಕೂರಿನ ಎಂಜಿನಿಯರಿಂಗ್ ಕಾಲೇಜೊಂದರ ಇಬ್ಬರು ವಿದ್ಯಾರ್ಥಿಗಳ ಮನೆಯಲ್ಲಿ ಶೋಧ ನಡೆಸಲಾಗಿದೆ. ಕೆಇಎ ಪೋರ್ಟಲ್‌ನಲ್ಲಿ ಈ ವಿದ್ಯಾರ್ಥಿಗಳು ನೂರಕ್ಕೂ ಹೆಚ್ಚು ಬಾರಿ ಬೇರೆ-ಬೇರೆ ವಿದ್ಯಾರ್ಥಿಗಳ ಹೆಸರಿನಲ್ಲಿ ನೋಂದಣಿ ಮಾಡಿದ್ದಾರೆ’ ಎಂದು ವಿವರಿಸಿವೆ.

₹62 ಲಕ್ಷಕ್ಕೆ ಸೀಟು ಮಾರಾಟ

‘ಸೀಟ್ ಬ್ಲಾಕಿಂಗ್ ಮೂಲಕ ಉಳಿಸಿಕೊಂಡಿದ್ದ ಎಂಜಿನಿಯರಿಂಗ್ ಸೀಟ್ ಒಂದನ್ನು ₹62 ಲಕ್ಷಕ್ಕೆ ಮಾರಾಟ ಮಾಡಿರುವುದಕ್ಕೆ ಸಂಬಂಧಿಸಿದ ದಾಖಲೆಯೊಂದು ಮಧ್ಯವರ್ತಿಯೊಬ್ಬರ ಕಚೇರಿಯಲ್ಲಿ ಸಿಕ್ಕಿದೆ. ಇಂತಹ ಹತ್ತಾರು ರಸೀದಿಗಳು, ಹಣ ವರ್ಗಾವಣೆ ಪತ್ರಗಳು, ಚೆಕ್ ಸಂಖ್ಯೆಗಳು ದೊರೆತಿದ್ದರೂ ಅತಿದೊಡ್ಡ ಮೊತ್ತಕ್ಕೆ ಸೀಟು ಮಾರಾಟವಾಗಿರುವ ಪ್ರಕರಣ ಇದು’ ಎಂದು ಇ.ಡಿ ಮೂಲಗಳು ತಿಳಿಸಿವೆ.

‘24 ವರ್ಷ ದುಡಿದಿದ್ದೇನೆ; ಬೀದಿಗೆ ದೂಡಬೇಡಿ’ ▶ 5

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕಾವೇರಿ ಜಲಧಾರೆ

ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.



ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯದಿಂದ ಬುಧವಾರ ನೀರು ಹೊರಬಿಟ್ಟ ನಂತರ ಕಂಡ ಮೋಹಕ ದೃಶ್ಯ

ಅಹೋರಾತ್ರಿ ಹೋರಾಟಕ್ಕೆ ಮುಂದಾದ ರೈತರು ವಶಕ್ಕೆ ● ಪೊಲೀಸ್ ಭದ್ರತೆ

ಭೂಸ್ವಾಧೀನ ಕೈಬಿಡಲು 24 ತಾಸು ಗಡುವು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂ.ಗ್ರಾಮಾಂತರ): ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ ಸಾವಿರಾರು ಎಕರೆ ಫಲವತ್ತಾದ ಕೃಷಿ ಭೂಮಿ ಸ್ವಾಧೀನ ಪಡಿಸಿಕೊಳ್ಳುವ ಅಧಿಸೂಚನೆ ಕೈ ಬಿಡಲು ರೈತರು ರಾಜ್ಯ ಸರ್ಕಾರಕ್ಕೆ ಬುಧವಾರ 24 ತಾಸು ಗಡುವು ನೀಡಿದ್ದಾರೆ.

ಭೂಸ್ವಾಧೀನ ವಿರೋಧಿಸಿ ಚನ್ನರಾಯಪಟ್ಟಣ ಹೋಬಳಿ ರೈತರು ಸಾವಿರಕ್ಕೂ ಹೆಚ್ಚು ದಿನಗಳಿಂದ ನಡೆಸುತ್ತಿರುವ ಹೋರಾಟ ಬೆಂಬಲಿಸಿ ಬುಧವಾರ ನಡೆದ ‘ದೇವನಹಳ್ಳಿ ಚಲೋ’ ವೇದಿಕೆಯಲ್ಲಿಯೇ ಅಹೋರಾತ್ರಿ ಹೋರಾಟಕ್ಕೆ ಮುಂದಾದ ರೈತ ಮುಖಂಡರನ್ನು ಪೊಲೀಸರು ವೇದಿಕೆಯಿಂದಲೇ ವಶಕ್ಕೆ ಪಡೆದು ಕರೆದೊಯ್ದರು.

ಬುಧವಾರ ಸಂಜೆ ಹೋರಾಟ ವೇದಿಕೆಯಲ್ಲಿಯೇ ತುರ್ತುಸಭೆ ನಡೆಸಿದ ಸಂಯುಕ್ತ ಹೋರಾಟ ಕರ್ನಾಟಕದ ಮುಖಂಡರು ಅಹೋರಾತ್ರಿ ಹೋರಾಟದ ನಿರ್ಧಾರ ತೆಗೆದುಕೊಂಡರು.

‘ಸರ್ಕಾರ ಬಂಧಿಸಲಿ ಜೈಲಿನಿಂದಲೇ ಹೋರಾಟ ಮುಂದುವರಿಸೋಣ. ಯಾರೂ ಜಾಮೀನು ತೆಗೆದುಕೊಳ್ಳುವುದು ಬೇಡ’ ಎಂದು ಒಮ್ಮತದ ನಿರ್ಣಯ ಕೈಗೊಂಡಿದ್ದರು. ಅಹೋರಾತ್ರಿ ಹೋರಾಟ ಕೈಬಿಡುವಂತೆ ಪೊಲೀಸರು ಹೋರಾಟಗಾರರ ಮನವೊಲಿಸಲು ಮುಂದಾದರು. ಆ ಪ್ರಯತ್ನ ವಿಫಲವಾದಾಗ ರೈತರು ಮತ್ತು ಹೋರಾಟಗಾರರನ್ನು ವಶಕ್ಕೆ ಪಡೆದರು.

‘ಅನ್ನದಾತರ ಕುಲವನ್ನೇ ಹಾಳು ಮಾಡುತ್ತಿದ್ದೀರಿ. ದೇವನಹಳ್ಳಿಯಲ್ಲಿ ಪ್ರತಿಭಟನೆ ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲವೆಂದಾದರೆ ಆ ಕಾನೂನು ಮುರಿಯಲೆಂದೇ ನಾವು ಇಲ್ಲಿ ಬಂದಿದ್ದೇವೆ’ ಎಂದು ರೈತ ಹೋರಾಟಗಾರರು ಘೋಷಣೆ ಕೂಗಿದರು.

ಇದಕ್ಕೂ ಮೊದಲು ಪಟ್ಟಣದ ಹಳೆ ಬಸ್ ನಿಲ್ದಾಣದ ಮೈದಾನದಲ್ಲಿ ರೈತರ ಬೃಹತ್ ಸಮಾವೇಶ ಆರಂಭವಾಯಿತು. ರೈತ ಮಹಿಳೆಯರು ‘ನಮ್ಮ ಭೂಮಿ ನಮಗೆ ಬಿಡಿ’ ಎಂದು ಘೋಷಣೆ ಕೂಗಿ ಹೋರಾಟಕ್ಕೆ ಚಾಲನೆ ನೀಡಿದರು.

‘ತಂಟೆಗೆ ಬಂದರೆ ಅಧಿಕಾರ ಕಳೆದುಕೊಳ್ಳುತ್ತೀರಿ’

‘ರೈತರಿಂದ ಧಿಕ್ಕಾರ ಕೂಗಿಸಿಕೊಂಡು ಅಧಿಕಾರ ಕಳೆದುಕೊಳ್ಳುವ ಪರಿಸ್ಥಿತಿಗೆ ಕಾಂಗ್ರೆಸ್ ಸರ್ಕಾರ ಹೋಗಬಾರದು. ನಮ್ಮ ಭೂಮಿ ಬಿಟ್ಟು ಬದುಕಲು ಬಿಡಿ ಎಂಬ ರೈತರ ಕೂಗು ಸಿಎಂ ಸಿದ್ದರಾಮಯ್ಯರಿಗೆ ಕೇಳಿಸುತ್ತಿಲ್ಲವೇ? ಕಿವಿ, ಹೃದಯ, ಮನಸ್ಸಾಕ್ಷಿ ಇಲ್ಲವೇ? ಅಹಿಂದ, ಜನಪರ, ರೈತರ ಪರ ಅಂತೀರಿ. ವಿರೋಧ ಪಕ್ಷದ ನಾಯಕರಾಗಿದ್ದಾಗ ಇದೇ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತು ಕೊಟ್ಟಿದ್ದೀರಿ ತಾನೇ? ಮಾತಿಗೆ ಬದ್ಧರಾಗಿ ನಿಲ್ಲುತ್ತೀರಾ ಇಲ್ಲ ಕೊಟ್ಟ ಮಾತು ತಪ್ಪುತ್ತೀರಾ’ ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಪ್ರಶ್ನಿಸಿದರು.

ಕಟ್ಟಡ ನಕ್ಷೆ ಅನುಮತಿ ಇಲ್ಲದೆ ಮನೆ ಕಟ್ಟಬೇಡಿ: ಡಿಕೆಶಿ

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಬೆಂಗಳೂರು: ‘ಕಟ್ಟಡ ನಕ್ಷೆ ಮಂಜೂರು, ಸ್ವಾಧೀನ ಪ್ರಮಾಣಪತ್ರ ಇಲ್ಲದೆ ನೀರು ಹಾಗೂ ವಿದ್ಯುತ್ ಸಂಪರ್ಕ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿದೆ. ಹೀಗಾಗಿ, ಅನುಮತಿ ಇಲ್ಲದೆ ಜನರು ಮನೆ ಕಟ್ಟಬಾರದು’ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಹಳ್ಳಿಗಳು ಹಾಗೂ ನಗರ ಪ್ರದೇಶಗಳಲ್ಲಿ 2.50 ಲಕ್ಷ ಜನ ಕಟ್ಟಡ ನಕ್ಷೆ ಅನುಮತಿ ಪಡೆಯದೆ ಮನೆ ಕಟ್ಟಿಕೊಂಡು, ವಿದ್ಯುತ್ ಹಾಗೂ ನೀರಿನ ಸಂಪರ್ಕಕ್ಕೆ ಅರ್ಜಿ ಹಾಕಿದ್ದಾರೆ. ಈ ವಿಚಾರದಲ್ಲಿ ಸಾರ್ವಜನಿಕರಿಗೆ ಹೇಗೆ ನೆರವಾಗಬಹುದು ಎಂಬ ಬಗ್ಗೆ ಕಾನೂನು ಸಲಹೆಗಾರರಿಂದ ಅಭಿಪ್ರಾಯ ಕೇಳಿದ್ದೇನೆ’ ಎಂದರು.

‘ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಸಾರ್ವಜನಿಕರಿಗೆ ಸಾಕಷ್ಟು ಸಮಸ್ಯೆ ಎದುರಾಗಲಿದೆ’ ಎಂದೂ ಹೇಳಿದರು.

‘ಕೆಲವರು ಬೆಸ್ಕಾಂಗೆ ಠೇವಣಿ ಪಾವತಿ ಮಾಡಿದ್ದು, ಈ ವಿಚಾರವಾಗಿ ಯಾವ ರೀತಿ ಕ್ರಮ ಕೈಗೊಳ್ಳಬಹುದು ಎಂದು ಅಧಿಕಾರಿಗಳ ಜತೆ ಸಮಾಲೋಚನೆ ನಡೆಸುತ್ತೇನೆ. ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬಹುದು ಎಂದು ಕಾನೂನು ತಜ್ಞರ ಜೊತೆ ಚರ್ಚೆ ಮಾಡುತ್ತೇನೆ. ಇನ್ನು ಮುಂದೆ ಕಟ್ಟಡ ನಕ್ಷೆ ಅನುಮೋದನೆ ಪಡೆಯದೆ ಯಾರೂ ಮನೆ ಕಟ್ಟಬಾರದು’ ಎಂದರು.

‘ಬೇರೆ ರಾಜ್ಯದಲ್ಲಿ ಇದು ಜಾರಿಯಾಗಿಲ್ಲ. ನಮ್ಮ ರಾಜ್ಯದಲ್ಲಿ ಆತುರದಲ್ಲಿ ಜಾರಿ ಮಾಡುತ್ತಿರುವುದು ಏಕೆ’ ಎಂಬ ಪ್ರಶ್ನೆಗೆ, ‘ತೀರ್ಪು ಬಂದ ನಂತರ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ನ್ಯಾಯಾಲಯದ ಆದೇಶ ಪಾಲಿಸುವಂತೆ ಸೂಚಿಸಿದೆ. ಹೀಗಾಗಿ, ಈ ಸಮಸ್ಯೆ ಬಗೆಹರಿಸಲು ನಾವು ಮುಂದಾಗಿದ್ದೇವೆ’ ಎಂದು ಹೇಳಿದರು.

‘ಅಕ್ರಮ ಇದ್ದರೂ ನೀರಿನ ಸಂಪರ್ಕ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಹಿಂದೆ ಆದೇಶ ನೀಡಿತ್ತು’ ಎಂಬ ವಿಚಾರವಾಗಿ ಕೇಳಿದಾಗ, ‘ಈ ಹಿಂದಿನ ಆದೇಶ ಮುಖ್ಯವೋ, ಈಗ ಹೊರಡಿಸಿರುವ ಆದೇಶ ಮುಖ್ಯವೋ? ಇದೇ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸಿದ ಕಾರಣ ವಿಚಾರಣೆ ಮಾಡಿ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. ಜೊತೆಗೆ ಇದನ್ನು ಜಾರಿಗೊಳಿಸುವಂತೆಯೂ ಆದೇಶ ನೀಡಿದೆ’ ಎಂದರು.

ಅಕ್ರಮ-ಸಕ್ರಮ ಮಸೂದೆ ತರಬಹುದಲ್ಲವೇ ಎಂದು ಕೇಳಿದಾಗ, ‘ಸುಪ್ರೀಂ ಕೋರ್ಟ್ ಈಗಾಗಲೇ ಇದಕ್ಕೆ ತಡೆ ನೀಡಿದೆ’ ಎಂದು ಹೇಳಿದರು.

ರಾಜ್ಯದ ವಿವಿಧ ಠಾಣಾ ವ್ಯಾಪ್ತಿಯಲ್ಲಿ ಆರೋಪಿಗಳಿಗಾಗಿ ಹುಡುಕಾಟ

ದ್ವೇಷ ಭಾಷಣ, ಸುಳ್ಳು ಸುದ್ದಿ ಪತ್ತೆಗೆ ವೇಗ

● ಆದಿತ್ಯ ಕೆ.ಎ.

ಬೆಂಗಳೂರು: ದ್ವೇಷ ಭಾಷಣ, ಪ್ರಚೋದನಕಾರಿ ಹೇಳಿಕೆ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಪ್ರಕಟಿಸುತ್ತಿರುವ ವ್ಯಕ್ತಿಗಳನ್ನು ಪತ್ತೆ ಹಚ್ಚುವ ಕೆಲಸವು ರಾಜ್ಯದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂದು ವಾರದಿಂದ ವೇಗ ಪಡೆದುಕೊಂಡಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಮತ್ತು ತಪ್ಪು ಮಾಹಿತಿ ಹಂಚಿಕೊಂಡಿದ್ದು, ಸಾಬೀತಾದರೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಅವಕಾಶ ನೀಡುವ ಕಾನೂನು ರೂಪಿಸಲು ರಾಜ್ಯ ಸರ್ಕಾರ ಮುಂದಾದ ಬೆನ್ನಲ್ಲೇ ದ್ವೇಷ ಬಿತ್ತುವವರ ಪತ್ತೆಗಾಗಿ ಸಾಮಾಜಿಕ ಜಾಲತಾಣವನ್ನು ಪೊಲೀಸರು ಜಾಲಾಡುತ್ತಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಸಮಾಜಘಾತುಕ ವದಂತಿಗಳನ್ನು ಹಬ್ಬಿಸಿದವರ ವಿರುದ್ಧ ಕ್ರಮ ಕೈಗೊಳ್ಳಲು ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಸೇರಿ ವಿವಿಧ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸರು ವಿಫಲರಾಗಿದ್ದಾರೆ ಎಂಬ ದೂರು ಬಂದಿತ್ತು. ಕ್ರಮ ಕೈಗೊಳ್ಳದ ಪೊಲೀಸರ ವಿರುದ್ಧವೇ ತನಿಖೆ ಮಾಡುವಂತೆ ಗೃಹ ಇಲಾಖೆ ಸೂಚನೆ ನೀಡಿದ ಬೆನ್ನಲ್ಲೇ ಕಾರ್ಯಾಚರಣೆಗೆ ಪೊಲೀಸರು ವೇಗ ನೀಡಿದ್ದಾರೆ.

ಪ್ರಚೋದನಕಾರಿ ಹೇಳಿಕೆ, ಬರಹ ಪ್ರಕಟಿಸಿರುವುದು ಕಂಡುಬಂದ ತಕ್ಷಣವೇ ಮುಂಜಾಗ್ರತಾ ಕ್ರಮದ ವರದಿ (ಪಿಎಆರ್) ದಾಖಲಿಸಿಕೊಳ್ಳಲಾಗುತ್ತಿದೆ. ಬಳಿಕ ಆರೋಪಿಗಳನ್ನು ಬಂಧಿಸಲಾಗುತ್ತಿದೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

▶ 5

ದ್ವೇಷ ಭಾಷಣ ಪ್ರಕರಣಗಳು

ವರ್ಷ	ವರದಿ	ಬಂಧನ	ಪಿಎಆರ್
2025 (ಜೂನ್ 20ರ ವರೆಗೆ)	42	22	9

ತಪ್ಪು ಮಾಹಿತಿ ಹಂಚಿಕೊಂಡಿದ್ದ ಪ್ರಕರಣಗಳು

ವರ್ಷ	ವರದಿ	ಬಂಧನ	ಪಿಎಆರ್	ಅಳಿಸಲಾದ ಪೋಸ್ಟ್	ರದ್ದುಗೊಂಡ ಖಾತೆ
2025	384	307	54	285	54



ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಗಾವಲು ಇಡುವಂತೆ ಮತ್ತು ಸಾಮರಸ್ಯಕ್ಕೆ ಧಕ್ಕೆ ತರುವ ವಿಚಾರಗಳು ಕಂಡುಬಂದರೆ ಹಿರಿಯ ಅಧಿಕಾರಿಗಳ ಗಮನಕ್ಕೆ ತರಬೇಕೆಂದು ಸಿಬ್ಬಂದಿಗೆ ತಿಳಿಸಲಾಗಿದೆ

ಸೀಮಂತ್‌ಕುಮಾರ್ ಸಿಂಗ್, ಪೊಲೀಸ್ ಕಮಿಷನರ್, ಬೆಂಗಳೂರು



ಕಾನೂನು ಸುವ್ಯವಸ್ಥೆ ಹಾಗೂ ಸೌಹಾರ್ದಕ್ಕೆ ಅಪಾಯ ತಂದೊಡ್ಡುವ ವ್ಯಕ್ತಿಗಳು ಹಾಗೂ ಶಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಲಾಗಿದೆ

ಡಾ.ಎಂ.ಎ.ಸಲೀಂ, ರಾಜ್ಯ ಪೊಲೀಸ್ ಮಹಾನಿರ್ದೇಶಕ

‘ಮಾಹಿತಿ ಹಂಚಿಕೆ: ಅನುಮತಿ’

ಆರ್‌ಸಿಬಿ ತಂಡದ ವಿಜಯೋತ್ಸವಕ್ಕೆ ಆರ್‌ಸಿಬಿ ಮ್ಯಾನೇಜ್‌ಮೆಂಟ್ ಉಚಿತ ಪಾಸ್ ನೀಡುವುದಾಗಿ ಸಾಮಾಜಿಕ ಮಾಧ್ಯಮ ‘ಎಕ್ಸ್’ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿತ್ತು. ಈ ಮಾಹಿತಿ ಹಂಚಿಕೊಳ್ಳುವ ಮೊದಲು ಪೊಲೀಸ್ ಇಲಾಖೆಗೂ ಮ್ಯಾನೇಜ್‌ಮೆಂಟ್ ಮಾಹಿತಿ ನೀಡಿರಲಿಲ್ಲ. ಮುಂದಿನ ದಿನಗಳಲ್ಲಿ ಈ ರೀತಿ ಪ್ರಮಾದ ಆಗದಂತೆ ನಿಗಾ ವಹಿಸಬೇಕು. ಹೆಚ್ಚಿನ ಜನರು ಜಮಾವಣೆಗೊಳ್ಳುವ ಸಭೆ, ಪ್ರತಿಭಟನೆ, ರ‍್ಯಾಲಿ, ವಿಜಯೋತ್ಸವಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಮಾಹಿತಿ ಹಂಚಿಕೊಳ್ಳುವ ಮೊದಲು ಇಲಾಖೆಯ ಅನುಮತಿ ಪಡೆದುಕೊಳ್ಳಬೇಕೆಂಬ ನಿಯಮ ಇದೆ. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ಸೇಂಟ್ ಜೋಸೆಫ್ ವಿ.ವಿಗೆ ₹4 ಲಕ್ಷ ದಂಡ

ಬೆಂಗಳೂರು: ಸರ್ಕಾರದ ಅನುಮೋದನೆ ಇಲ್ಲದೆ ಪ್ರವೇಶ, ಸೀಟುಗಳ ಹೆಚ್ಚಳ ಮತ್ತು ಹೊಸ ಕೋರ್ಸ್‌ಗಳನ್ನು ಪರಿಚಯಿಸಿದ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯಕ್ಕೆ ಉನ್ನತ ಶಿಕ್ಷಣ ಇಲಾಖೆ ₹4 ಲಕ್ಷ ದಂಡ ವಿಧಿಸಿದೆ.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ರಚಿಸಿದ್ದ ತಜ್ಞರ ಸಮಿತಿ ಸಲ್ಲಿಸಿದ ವರದಿಯ ಆಧಾರದ ಮೇಲೆ, ಉನ್ನತ ಶಿಕ್ಷಣ ಇಲಾಖೆ ದಂಡ ವಿಧಿಸಿ, ಆದೇಶ ಹೊರಡಿಸಿದೆ. ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯವೊಂದಕ್ಕೆ ಸರ್ಕಾರ ದಂಡ ವಿಧಿಸಿರುವುದು ಇದೇ ಮೊದಲು.

2023-24 ಮತ್ತು 2024-25ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯ ನಿಯಮ ಉಲ್ಲಂಘಿಸಿ 500ಕ್ಕೂ ಹೆಚ್ಚು ಸೀಟುಗಳನ್ನು ಭರ್ತಿ ಮಾಡಿದೆ. ಸರ್ಕಾರದ ಅನುಮೋದನೆ ಇಲ್ಲದೆ 20ಕ್ಕೂ ಹೆಚ್ಚು ಹೊಸ ಪದವಿ ಕೋರ್ಸ್‌ಗಳನ್ನು ಪರಿಚಯಿಸಿತ್ತು.

ವಿಶ್ವವಿದ್ಯಾಲಯದಲ್ಲಿ 10,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ. ನಿಯಮದ ಪ್ರಕಾರ ಶೇ 60 ಸೀಟುಗಳನ್ನು ಸರ್ಕಾರ ಕೋಟಾಕ್ಕೆ ನೀಡಬೇಕು. ಈ ನಿಯಮವನ್ನೂ ಪಾಲಿಸಿಲ್ಲ. ಮುಂದಿನ ಎರಡು ವರ್ಷಗಳಲ್ಲಿ ಯಾವುದೇ ಹೊಸ ಕಾರ್ಯಕ್ರಮಗಳಿಗೆ ಸರ್ಕಾರ ಅನುಮೋದನೆ ನೀಡಬಾರದು ಎಂದು ಸಮಿತಿ ಶಿಫಾರಸು ಮಾಡಿದೆ.

368 ಮರ ಕಡಿಯದಿರಿ: ಖಂಡ್ರೆ

ಪರಿಸರ ಕಾರ್ಯಕರ್ತರ ಮನವಿಗೆ ಸ್ಪಂದಿಸಿದ ಅರಣ್ಯ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ 368 ಮರಗಳನ್ನು ಕಡಿಯಬಾರದು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕರ್ನಾಟಕ ಜೀವವೈವಿಧ್ಯ ಮಂಡಳಿ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, 'ರೈಲ್ವೆ ಕಾಲೊನಿ ಜೀವವೈವಿಧ್ಯ ತಾಣವಾಗಿದ್ದು, 368 ಮರಗಳು ನೂರಾರು ವರ್ಷಗಳಿಂದ ಇವೆ. ಈ ಪ್ರದೇಶವನ್ನು ಪಾರಂಪರಿಕ ತಾಣ ಎಂದು ಘೋಷಿಸುವಂತೆ ಪರಿಸರ ಕಾರ್ಯಕರ್ತರು, ಸ್ಥಳೀಯರು ಮನವಿ ಮಾಡಿದ್ದಾರೆ. ಹೀಗಾಗಿ, ಮರಗಳನ್ನು ಕಡಿಯಲು ಅನುಮತಿ ನೀಡಬಾರದು' ಎಂದು ಅರಣ್ಯ ಅಧಿಕಾರಿಗಳಿಗೆ ಆದೇಶಿಸಿದರು.

'ರೈಲ್ವೆ ಕಾಲೊನಿಯನ್ನು ಪಾರಂಪರಿಕ ತಾಣವನ್ನಾಗಿ ಘೋಷಿಸುವ ಪ್ರಕ್ರಿಯೆಯನ್ನು ಕೂಡಲೇ ಆರಂಭಿಸಬೇಕು' ಎಂದೂ ಸಚಿವರು ಸೂಚಿಸಿದರು.

368 ಮರಗಳನ್ನು ಉಳಿಸಿ ಸಂರಕ್ಷಿಸಬೇಕು ಎಂದು 'ಪರಿಸರಕ್ಕಾಗಿ ನಾವು' ಸಂಘಟನೆ ಹಲವು ರೀತಿಯಲ್ಲಿ ಪ್ರತಿಭಟನೆ ನಡೆಸಿತ್ತು. ಅರಣ್ಯ ಸಚಿವರಿಗೆ ಮನವಿಯನ್ನೂ ಈಚೆಗೆ ನೀಡಿತ್ತು.


ಖಂಡ್ರೆ

ಮೇ 20ರಂದು ನಡೆದ ಸಾರ್ವಜನಿಕ ವಿಚಾರಣೆಯಲ್ಲಿ ಮರಗಳನ್ನು ಕಡಿಯದಂತೆ ಸ್ಥಳೀಯರು ಸೇರಿದಂತೆ ನೂರಾರು ಪರಿಸರ ಕಾರ್ಯಕರ್ತರು ಒತ್ತಾಯಿಸಿದರು. ಅಲ್ಲದೆ, ಜೂನ್ 5ರಂದು ಕಂಟೋನ್ಮೆಂಟ್ ಕಾಲೊನಿಯಲ್ಲಿ 'ವೃಕ್ಷ ರಕ್ಷಾ ಅಭಿಯಾನ' ನಡೆಸಲಾಗಿತ್ತು.

'ನೂರಾರು ವರ್ಷಗಳಿಂದ ಶುದ್ಧ ಗಾಳಿ ನೀಡುತ್ತಿರುವ 368 ಮರಗಳನ್ನು ರಕ್ಷಿಸಬೇಕಾದದ್ದು ನಮ್ಮ ಕರ್ತವ್ಯ. ಮುಂದಿನ ತಲೆಮಾರಿಗೆ ನಾವು, ಸಮೃದ್ಧ ಪರಿಸರವನ್ನೇ ಕೊಡುಗೆಯಾಗಿ ನೀಡಬೇಕು. ನಮ್ಮ ಮನವಿಗೆ ಸ್ಪಂದಿಸಿ, ಮರಗಳನ್ನು ಉಳಿಸಲು ಕ್ರಮ ಕೈಗೊಂಡ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆಯವರನ್ನು ಅಭಿನಂದಿಸುತ್ತೇವೆ' ಎಂದು 'ಪರಿಸರಕ್ಕಾಗಿ ನಾವು' ಅಧ್ಯಕ್ಷ ಎ.ಟಿ. ರಾಮಸ್ವಾಮಿ ತಿಳಿಸಿದರು.

ಸುದ್ದಿ 2 ನಿಮಿಷ

ತಿರುಪತಿಯಲ್ಲಿ 'ಕೃಷ್ಣ ರಾಜೇಂದ್ರ ಕಲ್ಯಾಣ ಮಂಟಪ' ಉದ್ಘಾಟನೆ

ಬೆಂಗಳೂರು: ತಿರುಪತಿಯ ತಿರುಮಲದಲ್ಲಿರುವ ಕರ್ನಾಟಕ ಛತ್ರದಲ್ಲಿ 'ಕೃಷ್ಣ ರಾಜೇಂದ್ರ ಕಲ್ಯಾಣ ಮಂಟಪ'ವನ್ನು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಉದ್ಘಾಟಿಸಿದರು.

ನೂತನ ಮೈಸೂರು ಕಾಂಪ್ಲೆಕ್ಸ್ (ಹೊಸ ಕರ್ನಾಟಕ ಛತ್ರ) ಒಂದು ಬ್ಲಾಕ್‌ನಲ್ಲಿ ನಿರ್ಮಿಸಲಾದ ಕೃಷ್ಣರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪದಲ್ಲಿ 13 ಕೊಠಡಿಗಳು ಮತ್ತು 500 ಆಸನಗಳಿವೆ. ಕರ್ನಾಟಕದಿಂದ ಬಂದು ತಿರುಮಲದಲ್ಲಿ ಮದುವೆ, ನಾಮಕರಣ ಮೊದಲಾದ ಸಮಾರಂಭಗಳನ್ನು ಆಯೋಜಿಸುವ ಭಕ್ತರಿಗೆ ಇದು ಲಭ್ಯ. ಆನ್‌ಲೈನ್ ಮೂಲಕ ಕಾಯ್ದಿರಿಸಲು ಅವಕಾಶ ನೀಡಲಾಗಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

36 ಕೊಠಡಿಗಳ ವಿಐಪಿ ಬ್ಲಾಕ್, ಕಲ್ಯಾಣಿ ಮತ್ತು ಕರ್ನಾಟಕ ಛತ್ರದಲ್ಲಿ ದೇವಸ್ಥಾನ ನಿರ್ಮಾಣ ಕಾರ್ಯಕ್ರಮ ಬಹುತೇಕ ಮುಗಿದಿದ್ದು, ಸೆಪ್ಟೆಂಬರ್‌ನಲ್ಲಿ ಉದ್ಘಾಟಿಸಲಾಗುವುದು ಎಂದು ತಿಳಿಸಿದರು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯ, ಮುಜರಾಯಿ ಇಲಾಖೆ ಆಯುಕ್ತ ಎಂ.ವಿ. ವೆಂಕಟೇಶ್ ಇದ್ದರು.

ಕೆಎಸ್‌ಡಿಎಲ್‌ಗೆ ಬ್ರಿಟಿಷ್ ಹೈಕಮಿಷನರ್ ಭೇಟಿ



ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮಕ್ಕೆ (ಕೆಎಸ್‌ಡಿಎಲ್) ಭಾರತದ ಬ್ರಿಟಿಷ್ ಹೈಕಮಿಷನರ್ ಲಿಂಡಿ ಕ್ಯಾಮರಾನ್ ಭೇಟಿ ನೀಡಿ, ಮಾಹಿತಿ ಪಡೆದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ, ಕರ್ನಾಟಕ-ಕೇರಳ ವ್ಯಾಪ್ತಿಯ ಬ್ರಿಟಿಷ್ ಡೆಪ್ಯುಟಿ ಹೈಕಮಿಷನರ್ ಚಂದ್ರು ಅಯ್ಯರ್ ಜತೆ ಕೆಎಸ್‌ಡಿಎಲ್ ಇತಿಹಾಸ, ಕಾರ್ಯವಿಧಾನ, ಮಾರುಕಟ್ಟೆ ಜಾಲ, ಆದಾಯ, ಭವಿಷ್ಯದ ಯೋಜನೆಗಳ ಸಮಗ್ರ ನೋಟ ಒಳಗೊಂಡ ಪ್ರಾತ್ಯಕ್ಷಿಕೆ, ಉತ್ಪನ್ನಗಳ ತಯಾರಿಕೆ, ಪ್ರದರ್ಶನವನ್ನು ವೀಕ್ಷಿಸಿದರು.

'ಭಾರತ ಮತ್ತು ಬ್ರಿಟನ್ ನಡುವೆ ಮುಕ್ತ ವಾಣಿಜ್ಯ ಒಪ್ಪಂದವಿದೆ. ಈ ಒಪ್ಪಂದದ ಲಾಭ ಕರ್ನಾಟಕಕ್ಕೂ ಸಿಗಲಿದೆ' ಎಂದು ಲಿಂಡಿ ಹೇಳಿದರು.

'ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಪರಿಣತರೊಬ್ಬರನ್ನು ಬ್ರಿಟನ್‌ಗೆ ಕಳುಹಿಸಿ, ಸಾಬೂನು ತಯಾರಿಕೆ ತಂತ್ರಜ್ಞಾನದ ಪರಿಚಯ ಮಾಡಿಕೊಂಡರು. ನಂತರ ಸಾಬೂನು ಕಾರ್ಖಾನೆ ಸ್ಥಾಪಿಸಿದರು. ಇಂದು ಸಂಸ್ಥೆ ₹416 ಕೋಟಿ ಲಾಭ ಗಳಿಸಿದೆ' ಎಂದು ಸಚಿವ ಎಂ.ಬಿ. ಪಾಟೀಲ ಅವರು ಸ್ಮರಿಸಿದರು.

ಕೆರೆ, ನದಿ ಕಲುಷಿತ, ಕ್ರಮ ಕೈಗೊಳ್ಳದಿರುವುದಕ್ಕೆ ಆಕ್ಷೇಪ

ಕೆಎಸ್‌ಪಿಬಿ ಕಚೇರಿಗಳಿಗೆ 'ಲೋಕಾ' ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯ ಲೋಪ, ದುರಾಡಳಿತ, ಭ್ರಷ್ಟಾಚಾರ, ಸ್ವಜನಪಕ್ಷಪಾತದಂತಹ ಚಟುವಟಿಕೆಗಳ ಬಗ್ಗೆ ದೂರುಗಳು ಬಂದಿದ್ದರಿಂದ ಲೋಕಾಯುಕ್ತ ಅಧಿಕಾರಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಮೂರು ಕಚೇರಿಗಳ ಮೇಲೆ ಬುಧವಾರ ದಾಳಿ ನಡೆಸಿದರು.

ಲೋಕಾಯುಕ್ತ ಬಿ.ಎಸ್.ಪಾಟೀಲ ನೇತೃತ್ವದ ತಂಡ ಎಂ.ಜಿ.ರಸ್ತೆಯಲ್ಲಿರುವ ಮುಖ್ಯ ಕಚೇರಿ, ಉಪ ಲೋಕಾಯುಕ್ತ ಬಿ.ವೀರಪ್ಪ ನೇತೃತ್ವದ ತಂಡ ಬಸವೇಶ್ವರ ನಗರದ ವಲಯ ಕಚೇರಿ ಹಾಗೂ ಲೋಕಾಯುಕ್ತ ಐಜಿಪಿ ಸುಬ್ರಹ್ಮಣ್ಯೇಶ್ವರ ರಾವ್ ನೇತೃತ್ವದ ಮತ್ತೊಂದು ತಂಡ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ವಲಯ ಕಚೇರಿ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿತು.

ಕೇಂದ್ರ ಕಚೇರಿಗೆ ದಿಢೀರ್ ಭೇಟಿ ನೀಡಿದ ಲೋಕಾಯುಕ್ತ ಬಿ.ಎಸ್.ಪಾಟೀಲ, 'ನಿಯಮಗಳನ್ನು ಉಲ್ಲಂಘಿಸಿ ಜಲ ಮಾಲಿನ್ಯ ಮತ್ತು ವಾಯುಮಾಲಿನ್ಯಕ್ಕೆ ಕಾರಣರಾದವರಿಗೆ ದಂಡ ವಿಧಿಸಬೇಕು. ಅಂಥ ಎಷ್ಟು ಪ್ರಕರಣಗಳನ್ನು ನೀವು ದಾಖಲಿಸಿದ್ದೀರಿ? ಕಾಯ್ದೆ ಉಲ್ಲಂಘಿಸಿರುವ ಎಷ್ಟು ಕೈಗಾರಿಕೆಗಳನ್ನು ಮುಚ್ಚಿಸಿದ್ದೀರಿ?' ಎಂದು ಸ್ಥಳದಲ್ಲಿದ್ದ ಸದಸ್ಯ ಕಾರ್ಯದರ್ಶಿಗೆ ಪ್ರಶ್ನೆಗಳ ಸುರಿಮಳೆಗೈದರು.

'ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಕೆರೆಗಳಿಗೆ ತ್ಯಾಜ್ಯ ನೀರು ಹರಿಯುತ್ತಿರುವ ಕುರಿತು ದೂರುಗಳಿವೆ. ತ್ಯಾಜ್ಯ ನೀರು ತಡೆಗೆ ಏನು ಕ್ರಮ ಕೈಗೊಂಡಿದ್ದೀರಿ? ಬೆಂಗಳೂರು ನಗರದಲ್ಲಿ


ಕೆಎಸ್‌ಪಿಸಿಬಿ ಕೇಂದ್ರ ಕಚೇರಿಯಲ್ಲಿ ಮುಖ್ಯ ಲೋಕಾಯುಕ್ತ ಬಿ.ಎಸ್.ಪಾಟೀಲ, ದಾಖಲೆಗಳನ್ನು ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು

ತ್ಯಾಜ್ಯ ಸಂಸ್ಕರಣಾ ಘಟಕ(ಎಸ್‌ಟಿಪಿ) ಸ್ಥಾಪಿಸದ ಅಪಾರ್ಟ್‌ಮೆಂಟ್‌ಗಳು ಎಷ್ಟಿವೆ? ಅವುಗಳ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದೀರಿ' ಎಂದು ಕೇಳಿದರು.

'ಕೆಂಪು, ಕಿತ್ತಳೆ, ಹಸಿರು ಹಾಗೂ ಬಿಳಿ ಬಣ್ಣದ ಪ್ರವರ್ಗದಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಬಂದ ಮನವಿಗಳೆಷ್ಟು, ಎಷ್ಟು ಕೈಗಾರಿಕೆಗಳನ್ನು ತಪಾಸಣೆ ನಡೆಸಿದ್ದೀರಿ? 'ಸಕಾಲ'ದ ಅಡಿ ಸ್ವೀಕರಿಸಿರುವ ಎಷ್ಟು ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಇತ್ಯರ್ಥಪಡಿಸಿದ್ದೀರಿ' ಎಂದು ಪ್ರಶ್ನಿಸಿದರು.

ಉಪಲೋಕಾಯುಕ್ತ ಬಿ.ವೀರಪ್ಪ ಅವರು, 'ರಾಜರಾಜೇಶ್ವರಿ ನಗರದಲ್ಲಿನ ಕೆರೆಗಳು ಕಲುಷಿತಗೊಂಡಿವೆ. ಅವುಗಳ ಸುಧಾರಣೆಗೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ' ಅಧಿಕಾರಿಗಳಿಗೆ ಸೂಚಿಸಿದರು.

'ನಿಮ್ಮ ವಲಯದಲ್ಲಿ ಎಷ್ಟು ಕಾರ್ಖಾನೆಗಳು, ಆಸ್ಪತ್ರೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳಿವೆ ಎಂದು ಕೇಳಿದ್ದೆವು. ಅದಕ್ಕೆ ನೀವು ಸರಿಯಾದ ವಿವರಣೆ ನೀಡಿಲ್ಲ' ಎಂದು ಅಧಿಕಾರಿಗಳ ವಿರುದ್ಧ ಸಿಟ್ಟಾದರು.

'ವಾಯು ಮತ್ತು ಜಲ ಕಾಯ್ದೆಗಳನ್ನು ಉಲ್ಲಂಘಿಸಿರುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೀರಿ, ಆದರೆ ಸರಿಯಾದ ವಿವರಗಳನ್ನು ಒದಗಿಸಿಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದರು. ವೃಷಭಾವತಿ ನದಿಗೆ ಕಲುಷಿತ ನೀರು ಹರಿಯುತ್ತಿದೆ. ಈ ಬಗ್ಗೆ ಪ್ರಾಧಿಕಾರದವರ ವಿರುದ್ಧ ವರದಿ, ದೂರು ಸಲ್ಲಿಸಿದ್ದೀರಾ ಎಂಬ ಪ್ರಶ್ನೆಗೆ ಅಧಿಕಾರಿಗಳು ಮಾಹಿತಿ ಒದಗಿಸಲಿಲ್ಲ. ವೃಷಭಾವತಿ ನದಿಯ ಬಫರ್ ವಲಯದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಿಸಿರುವ ಕುರಿತು ಕೇಳಿದಾಗ 'ಸ್ಥಳ ಪರಿಶೀಲಿಸಿಲ್ಲ' ಎಂದು ಅಧಿಕಾರಿಗಳು ತಿಳಿಸಿದರು.

ಓಟ ಕಿತ್ತ ಅಧಿಕಾರಿ

ಮುಳಬಾಗಿಲು: ಜಮೀನೊಂದರ ಪೋಡಿ ದಾಖಲೆ ನೀಡಲು ತಾಲ್ಲೂಕು ಕಚೇರಿಯಲ್ಲಿ ಬುಧವಾರ ₹1.50 ಲಕ್ಷ ಪಡೆಯುತ್ತಿದ್ದ ಎಡಿಎಲ್‌ಆರ್ ನಿವೇದಿತಾ, ಲೋಕಾಯುಕ್ತ ಪೊಲೀಸರನ್ನು ಕಂಡು ಕಚೇರಿಯಿಂದ ಓಡಿಹೋಗಿದ್ದಾರೆ.

ಓಡಿಹೋಗುತ್ತಿದ್ದ ನಿವೇದಿತಾ ಅವರನ್ನು ಲೋಕಾಯುಕ್ತ ಪೊಲೀಸರು ಹಿಡಿದು ಕರೆತಂದು ಕಚೇರಿಯಲ್ಲಿ ವಿಚಾರಣೆ ನಡೆಸಿದಾಗ ಹಣ ಪಡೆಯುತ್ತಿದ್ದುದಾಗಿ ಒಪ್ಪಿಕೊಂಡಿದ್ದಾರೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ಕನ್ನಡ ಕಡ್ಡಾಯ ಸೂಚನೆ ಉಲ್ಲಂಘಿಸಿದರೆ ಶಿಸ್ತುಕ್ರಮ'

ಬೆಂಗಳೂರು: 'ಸರ್ಕಾರದ ಎಲ್ಲ ಇಲಾಖೆಗಳು ಆಡಳಿತದಲ್ಲಿ ಕನ್ನಡವನ್ನು ಪೂರ್ಣ ಪ್ರಮಾಣದಲ್ಲಿ ಬಳಸಬೇಕು. ಸೂಚನೆ ಉಲ್ಲಂಘಿಸಿದವರ ವಿರುದ್ಧ ವೈಯಕ್ತಿಕವಾಗಿ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಲ್ಲ ಇಲಾಖೆಗಳ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಎಚ್ಚರಿಕೆ ನೀಡಿದ್ದಾರೆ.


ಈ ಕುರಿತು ಸುತ್ತೋಲೆ ಹೊರಡಿಸಲಾಗಿದೆ. ಅವರು, 'ಕನ್ನಡ ಭಾಷೆಯಲ್ಲಿಯೇ ಆಡಳಿತ ಕುರಿತು ಹಲವು ಬಾರಿ ಸುತ್ತೋಲೆಗಳನ್ನು ಹೊರಡಿಸಿದ್ದರೂ ಪಾಲನೆ ಆಗುತ್ತಿಲ್ಲ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ವರದಿ ಮಾಡುತ್ತಲೇ ಇದೆ' ಎಂದಿದ್ದಾರೆ.

'ಸರ್ಕಾರಿ ಪತ್ರ ವ್ಯವಹಾರಗಳಲ್ಲಿ ಕಡತದ ಟಿಪ್ಪಣಿಗಳನ್ನು ಕನ್ನಡದಲ್ಲಿ ಮಾಡುವಂತೆ ಸೂಚಿಸಿದ್ದರೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದಿರುವುದನ್ನು ಗಮನಿಸಿರುವ ಮುಖ್ಯಮಂತ್ರಿ ಅವರು, ಕನ್ನಡದಲ್ಲಿ ಇಲ್ಲದೇ ಇದ್ದರೆ ಅಂತಹ ಕಡತಗಳನ್ನು ಹಿಂದಿರುಗಿಸಿ ಸಮಜಾಯಿಷಿ ಪಡೆಯಲು ನಿರ್ದೇಶಿಸಿದ್ದಾರೆ. ಆಡಳಿತದಲ್ಲಿ ಭಾಷಾ ನೀತಿಯನ್ನು ಪೂರ್ಣ ಪ್ರಮಾಣದಲ್ಲಿ ಹಾಗೂ ಎಲ್ಲ ಹಂತಗಳಲ್ಲಿ ಜಾರಿಗೊಳಿಸುವುದು ಎಲ್ಲ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯ' ಎಂದು ಅವರು ಹೇಳಿದ್ದಾರೆ.

ನಗರದಲ್ಲಿ ಇಂದು

ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಕಾರ್ಯಕ್ರಮ–2025ರ ಉದ್ಘಾಟನೆ: ಗೌರವ್ ಗುಪ್ತಾ, ಅತಿಥಿಗಳು: ಪಂಕಜ್ ಕುಮಾರ್ ಪಾಂಡೆ, ಶಿವಶಂಕರ್ ಎನ್., ಎಸ್.ಬಿ. ಪ್ರಶಾಂತ್ ಕುಮಾರ್, ಅಧ್ಯಕ್ಷತೆ: ಟಿ.ಎನ್. ಅಪ್ಪಚ್ಚು, ಆಯೋಜನೆ: ಇಂಧನ ಇಲಾಖೆ, ವಿದ್ಯುತ್ ಪರಿವೀಕ್ಷಣಾಲಯ, ಸ್ಥಳ: ಬ್ರಿಗೇಡ್ ಗೇಟ್‌ವೇ, ಒರಾಯನ್ ಮಾಲ್ ಹಿಂಭಾಗ, ರಾಜಾಜಿನಗರ, ಬೆಳಿಗ್ಗೆ 8.30

30ನೇ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಡಾ. ಶರಣಪ್ರಕಾಶ ಪಾಟೀಲ, 'ಜೀವನ ಶೈಲಿಯ ನಿರ್ವಹಣೆ ಮತ್ತು ಆಧ್ಯಾತ್ಮಿಕ ಚಿಂತನೆ' ದತ್ತಿ ಉಪನ್ಯಾಸ: ವಿನಯ್ ಗುರೂಜಿ, 'ಆಹಾರ ಮತ್ತು ಪೌಷ್ಟಿಕತೆ' ಉಪನ್ಯಾಸ: ಗೌರಿ ರೊಕ್ಕಮ್, ಎಸ್. ಕಾಂತಾ, ಶಿವರತ್ನ ಸಿ. ಸಾವಡಿ, ಅಧ್ಯಕ್ಷತೆ: ಭಗವಾನ್ ಬಿ.ಸಿ., ಆಯೋಜನೆ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ನಾಲ್ಕನೇ ಟಿ ಬ್ಲಾಕ್, ಜಯನಗರ, ಬೆಳಿಗ್ಗೆ 9.30


ಡಾ. ಶರಣಪ್ರಕಾಶ ಪಾಟೀಲ

ರಾಜ್ಯಮಟ್ಟದ ಯುವಜನರ ಆಗ್ರಹ ದಿನ: ಭಾಗವಹಿಸುವವರು: ಬಿ. ಸುರೇಶ್, ಜಿ. ಶಶಿಕುಮಾರ್, ವಿನಯ್ ಸಾರಥಿ, ಶರಣಪ್ಪ ಉದ್ಬಾಳ್, ಆಯೋಜನೆ: ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ), ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ಬೆಂಗಳೂರು ಬಂಡಿದೇವರ ಉತ್ಸವದ ಮೆರವಣಿಗೆ: ಸ್ಥಳ: ಬಿಬಿಎಂಪಿ ಕಚೇರಿ ಆವರಣದಿಂದ ವಿಧಾನಸೌಧದವರೆಗೆ, ಸಂಜೆ 7





ಎಎನ್‌ಎಂ: ಕರ್ತವ್ಯ ಬಿಡುಗಡೆಗೆ ತಡೆ

ಚಿತ್ರದುರ್ಗ ಜಿಲ್ಲೆಯ ಎಸ್‌.ಪಿ.ಮೇಘನಾ ಹಾಗೂ ಇತರರಿಂದ ಹೈಕೋರ್ಟ್‌ಗೆ ರಿಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಾದ್ಯಂತ ಕಿರಿಯ ಆರೋಗ್ಯ ಸಹಾಯಕಿಯರ (ಎಎನ್‌ಎಂ) ತರಬೇತಿ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು ಹಾಗೂ ಬೋಧಕ ಸಿಬ್ಬಂದಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಚಿತ್ರದುರ್ಗ ತಾಲ್ಲೂಕು ದೊಡ್ಡ-ಸಿದ್ದವ್ವನಹಳ್ಳಿ ದಂಡಿನ ಕುರುಬರ-ಹಟ್ಟಿಯ ಎಸ್‌.ಪಿ.ಮೇಘನಾ ಹಾಗೂ ಇತರರು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್‌.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಅಂತೆಯೇ ಎಎನ್‌ಎಂ ತರಬೇತಿ ಕೇಂದ್ರಗಳನ್ನು 2025–26ನೇ ಸಾಲಿನಿಂದಲೇ ಮುಚ್ಚಲು ನಿರ್ಧರಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೊರಡಿಸಿದ್ದ ಆದೇಶಕ್ಕೂ ಮಧ್ಯಂತರ ತಡೆ ನೀಡಲಾಗಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜೆ.ಡಿ.ಕಾಶೀನಾಥ್, ‘ರಾಜ್ಯ ಸರ್ಕಾರ 2025ರ ಜೂನ್ 12ರಂದು ಹೊರಡಿಸಿರುವ ಆದೇಶ ಕಾನೂನು ಬಾಹಿರ ಮತ್ತು ಏಕಪಕ್ಷೀಯವಾಗಿದೆ’ ಎಂಬ ವಿಸ್ತೃತವಾದ ಮನ್ನಿಸಿದ ನ್ಯಾಯಪೀಠ; ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ನಿರ್ದೇಶಕ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿದೆ.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ‘ಪ್ರಸ್ತುತ 417 ವಿದ್ಯಾರ್ಥಿಗಳು ಕೋರ್ಸ್‌ಗೆ ದಾಖಲಾಗಿದ್ದಾರೆ. ಇವರಲ್ಲಿ 117 ವಿದ್ಯಾರ್ಥಿಗಳು ತಮಗೆ ಕೋರ್ಸ್‌ನಲ್ಲಿ ಮುಂದುವರಿಯಲು ಇಷ್ಟವಿರಲಿಲ್ಲ ಎಂದು ತಿಳಿಸಿದ್ದಾರೆ. ಉಳಿದಂತೆ 115 ವಿದ್ಯಾರ್ಥಿಗಳು ಅದೇ ಕೋರ್ಸ್‌ನಲ್ಲಿಯೇ ಮುಂದುವರಿಯಲು ಇಚ್ಛಿಸಿದ್ದಾರೆ’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಸರ್ಕಾರದ ಆದೇಶವೇನು?

ಭವಿಷ್ಯದಲ್ಲಿ ಎಎನ್‌ಎಂ (ಕಿರಿಯ ಮಹಿಳಾ ಆರೋಗ್ಯ ಸಹಾಯಕಿ) ಅಥವಾ ಪಿಎಚ್‌ಸಿಒ (ಪ್ರಾಥಮಿಕ ಆರೋಗ್ಯ ಕೇಂದ್ರ ಅಧಿಕಾರಿ) ಹುದ್ದೆಗಳಿಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳು ಬದಲಾವಣೆಗೆ ಒಳಪಡುವ ಕಾರಣ ಪ್ರಸ್ತುತ ವ್ಯಾಸಂಗದಲ್ಲಿರುವ ಎಎನ್‌ಎಂ ವಿದ್ಯಾರ್ಥಿಗಳಿಗೆ ಈ ಬಗ್ಗೆ ತಿಳಿವಳಿಕೆ ಮೂಡಿಸಿ ಸರ್ಕಾರಿ ಬಿಎಸ್ಸಿ ನರ್ಸಿಂಗ್ ಅಥವಾ ಜಿಎನ್‌ಎಂ ಕಾಲೇಜುಗಳಲ್ಲಿನ ಕೋರ್ಸ್‌ಗೆ ಬದಲಾವಣೆ ಮಾಡಿಕೊಳ್ಳುವಂತೆ ತಿಳಿಸಲಾಗಿದೆ ಹಾಗೂ ಸಾಧ್ಯವಾದಷ್ಟು ಅಭ್ಯರ್ಥಿಗಳನ್ನು ಬಿಎಸ್ಸಿ ನರ್ಸಿಂಗ್ ಅಥವಾ ಜಿಎನ್‌ಎಂ ತರಬೇತಿಗಳಿಗೆ ಪ್ರವೇಶ ಪಡೆಯಲು ಅನುಕೂಲ ಮಾಡಿಕೊಡಲು ಈ ಆದೇಶ ಹೊರಡಿಸಲಾಗಿದೆ.

‘ಕಡಿಮೆ ಸಂಖ್ಯೆಯ ಅಭ್ಯರ್ಥಿಗಳು ಬಾಕಿ ಉಳಿದಿರುವ ಎಎನ್‌ಎಂ ತರಬೇತಿ ಕೇಂದ್ರಗಳನ್ನು ಮುಚ್ಚಿ, ಈ ಕೇಂದ್ರದಲ್ಲಿನ ಅಭ್ಯರ್ಥಿಗಳನ್ನು ಹತ್ತಿರದ ತರಬೇತಿ ಕೇಂದ್ರಗಳಿಗೆ ಸ್ಥಳಾಂತರಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಸ್ಥಳಾಂತರಗೊಳಿಸಿದ ನಂತರ, ವಿದ್ಯಾರ್ಥಿಗಳು ಇಲ್ಲದಿರುವ ಎಎನ್‌ಎಂ ತರಬೇತಿ ಕೇಂದ್ರಗಳನ್ನು ಮುಚ್ಚಲಾಗುವುದು ಮತ್ತು ಈ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಮಾತೃ ಇಲಾಖೆಗೆ ಹಿಂಪಡೆದುಕೊಳ್ಳಲಾಗುವುದು. ಕೌನ್ಸೆಲಿಂಗ್ ಮುಖಾಂತರ ಇಲಾಖೆಯಲ್ಲಿ ಲಭ್ಯವಿರುವ ನಿರ್ಣಾಯಕ ಖಾಲಿ ಹುದ್ದೆಗೆ ಅವರಿಗೆ ಸ್ಥಳ ನಿಯುಕ್ತಿಗೊಳಿಸಲಾಗುವುದು’ ಎಂದು ಆರೋಗ್ಯ ಇಲಾಖೆ 2025ರ ಏಪ್ರಿಲ್ 28ರಂದು ಮತ್ತು ಮೇ 20ರಂದು ಆದೇಶಿಸಿತ್ತು.

ಈ ಆದೇಶಗಳ ನಂತರ 2025ರ ಜೂನ್ 12ರಂದು ಮತ್ತೊಂದು ಜ್ಞಾಪನಾ ಪತ್ರ ಹೊರಡಿಸಿದ್ದ ಆರೋಗ್ಯ ಇಲಾಖೆಯ ನಿರ್ದೇಶಕರು, ಎಎನ್‌ಎಂ ತರಬೇತಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು ಹಾಗೂ ಬೋಧಕ ಸಿಬ್ಬಂದಿಯನ್ನು ತಕ್ಷಣವೇ ಜಾರಿಗೆ ಬರುವಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಲು ಆದೇಶಿಸಿದ್ದರು.

ವಿದ್ಯುತ್ ತೆರಿಗೆ ಕಾನೂನು ಬಾಹಿರ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹತ್ತು ಅಶ್ವಶಕ್ತಿ ಸಾಮರ್ಥ್ಯದ ಕೃಷಿ ನೀರಾವರಿ ಪಂಪ್‌ಸೆಟ್‌ಗಳು, ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ವರ್ಗಗಳ ಅಡಿಯ ಗ್ರಾಹಕರನ್ನು ಹೊರತುಪಡಿಸಿದಂತೆ ಉಳಿದೆಲ್ಲಾ ಗ್ರಾಹಕರು ಪಾವತಿಸಬೇಕಾದ ವಿದ್ಯುತ್ ಶುಲ್ಕದ ಮೇಲೆ (ಬಾಕಿ ಹೊರತುಪಡಿಸಿ) ಶೇ 5ರಷ್ಟು ತೆರಿಗೆ ವಿಧಿಸುವುದು ಅಸಾಂವಿಧಾನಿಕ’ ಎಂದು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಈ ಸಂಬಂಧ ಬೆಂಗಳೂರಿನ ಮೆಸರ್ಸ್ ಸೋನಾ ಸಿಂಥೆಟಿಕ್ಸ್ ಕಂಪನಿ, ಶ್ರೀ ಕೃಷ್ಣ ಸ್ಪಿನ್ನಿಂಗ್ ಮತ್ತು ವೀವಿಂಗ್ ಮಿಲ್ಸ್ ಪ್ರೈ.ಲಿಮಿಟೆಡ್ ಸೇರಿದಂತೆ ಹಲವು ಕಂಪನಿಗಳು 2008, 2009ರಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿದೆ.



‘ಯಾರು ಈ ತಿದ್ದುಪಡಿಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದಾರೋ ಅಂತಹವರಿಗೆ ಮಾತ್ರ ಈ ತೀರ್ಪು ಅನ್ವಯವಾಗುತ್ತದೆ’ ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿದೆ.

ಎಸ್ಕಾಂಗಳು 2009ರಿಂದ 2018ರವರೆಗೆ ಸಂಗ್ರಹಿಸಿರುವ ಶುಲ್ಕವನ್ನು ಮರುಪಾವತಿ ಮಾಡುವಂತೆ ಆದೇಶಿಸಿರುವ ನ್ಯಾಯಪೀಠ, ‘ಸರ್ಕಾರ 2004ರಲ್ಲಿ ಕರ್ನಾಟಕ ವಿದ್ಯುತ್ (ಬಳಕೆ ಮೇಲಿನ ತೆರಿಗೆ) ಕಾಯ್ದೆ–1959ರ ಕಲಂ 3(1)ಕ್ಕೆ ತಿದ್ದುಪಡಿ ಮಾಡಿ, ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಹಾಗೂ ಕೃಷಿ ಪಂಪ್ ಸೆಟ್‌ಗಳನ್ನು ಹೊರತುಪಡಿಸಿದಂತೆ ಉಳಿದೆಲ್ಲಾ ವರ್ಗದ ವಿದ್ಯುತ್ ಬಳಕೆದಾರ ಗ್ರಾಹಕರಿಗೆ ಕನಿಷ್ಠ ಶೇ 5ರಷ್ಟು ಶುಲ್ಕ ವಿಧಿಸಲು ಮಾಡಿದ್ದ ತೀರ್ಮಾನ ಕಾನೂನುಬಾಹಿರ’ ಎಂದು ಸಾರಿದೆ.

ಐಎಎಸ್ ಅಧಿಕಾರಿಗಳ ವಿರುದ್ಧ ತನಿಖೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಂಗ್ರಹಿಸಲಾದ 50 ಸಾವಿರ ಮೆಟ್ರಿಕ್ ಟನ್ ಕಾಕಂಬಿಯನ್ನು ಗೋವಾ ವ್ಯಾಪ್ತಿಯ ಬಂದರಿನಿಂದ ರಫ್ತು ಮಾಡಲು ಅವಕಾಶ ಕಲ್ಪಿಸಿ, ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ ಆರೋಪದ ಪ್ರಕರಣವೊಂದರಲ್ಲಿ ರಾಜ್ಯದ ಮೂವರು ಐಎಎಸ್ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ತನಿಖೆ ನಡೆಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನೀಡಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಐಎಎಸ್ ಅಧಿಕಾರಿಗಳಾದ ಐ.ಎಸ್‌ಎನ್. ಪ್ರಸಾದ್ (ನಿವೃತ್ತ), ಜೆ. ರವಿ ಶಂಕರ್, ಏಕರೂಪ ಕೌರ್ ಮತ್ತು ಮಂಜುಳಾ ನಟರಾಜ್ ಅವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್‌.ಆರ್‌.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಜಲಮಂಡಳಿ: ಫೋನ್–ಇನ್ ನಾಳೆ

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಅವರು ಇದೇ 27ರಂದು(ಶುಕ್ರವಾರ) ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್–ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಸಾರ್ವಜನಿಕರು ವಲಯ/ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ, ಇಳಿಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆ ಮಾತನಾಡಿ ಪರಿಹಾರ ಪಡೆದುಕೊಳ್ಳಬಹುದು.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್‌.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದು ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ. ದೂರವಾಣಿ ಸಂಖ್ಯೆ: 080-22945119 ಮತ್ತು 080-22229639.

ಚಿಟಿಕೆ ಸುದ್ದಿ

‘ಫೋಟೊ ಟುಡೇ’ ವಸ್ತು ಪ್ರದರ್ಶನ 27ರಿಂದ

ಬೆಂಗಳೂರು: ಕರ್ನಾಟಕ ವಿಡಿಯೊ ಮತ್ತು ಫೋಟೊ ಅಸೋಸಿಯೇಷನ್, ಬೈಸೇಲ್ ಇನ್‌ಟ್ರಾಕ್ಷನ್ ಪ್ರೈವೇಟ್ ಲಿಮಿಟೆಡ್ ಹಾಗೂ ಕರ್ನಾಟಕ ರಾಜ್ಯ ಪತ್ರಿಕಾ ಛಾಯಾಗ್ರಾಹಕರ ಸಹಯೋಗದಲ್ಲಿ ಜೂನ್ 27ರಿಂದ 29ರವರೆಗೆ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ‘ಫೋಟೊ ಟುಡೇ’ ವಸ್ತು ಪ್ರದರ್ಶನ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ಬೆಂಜಿಮಿನ್ ಭಾಸ್ಕರ್ ಮತ್ತು ಕಾರ್ಯದರ್ಶಿ ಜಗದೀಶ್ ಎಲ್., ‘ಛಾಯಾಗ್ರಾಹಕರಿಗೆ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸುವ ಉದ್ದೇಶದಿಂದ ಈ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿದೆ. 200ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ’ ಎಂದು ಮಾಹಿತಿ ನೀಡಿದರು.

‘ಜೂನ್ 27ರಂದು ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಅವರು ಮೇಳವನ್ನು ಉದ್ಘಾಟಿಸಲಿದ್ದು, ಶಾಸಕ ಪ್ರಸಾದ ಅಬ್ಬಯ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ’ ಎಂದರು.

ರಿಪಲ್ಸ್ ಆನ್ ಆರ್ಟ್ ಈವೆಂಟ್ ಜೂನ್ 28ಕ್ಕೆ

ಬೆಂಗಳೂರು: ಒರಾಯನ್ ಮಾಲ್ ಹಾಗೂ ಆರ್ಟ್ ಮ್ಯಾಟರ್ಸ್ ಸಹಯೋಗದಲ್ಲಿ ಜೂನ್ 28ರಂದು ಒರಾಯನ್ ಮಾಲ್‌ನಲ್ಲಿ ‘ರಿಪಲ್ಸ್ ಆನ್ ಆರ್ಟ್ ಈವೆಂಟ್ ಫಾರ್ ಸಸ್ಟೈನಬಲ್ ಬೆಂಗಳೂರು’ ಹಮ್ಮಿಕೊಳ್ಳಲಾಗಿದೆ.

‘ಹಾವುಗಳು ಮತ್ತು ಅವುಗಳ ಪರಿಸರ ವ್ಯವಸ್ಥೆ’ ಶೀರ್ಷಿಕೆ ಅಡಿ ನಡೆಯಲಿದೆ. ವೃತ್ತಿಪರ ಕಲಾವಿದರಿಗೆ ಲೈವ್ ಪೇಂಟಿಂಗ್ ಸ್ಪರ್ಧೆ, 5 ರಿಂದ 10 ವರ್ಷದೊಳಗಿನ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ಪರಿಸರದ ಕುರಿತು ಗ್ರೀನ್ ಕ್ವಿಜ್ ಸ್ಪರ್ಧೆ, ಮಕ್ಕಳಿಗಾಗಿ ರ್‍ಯಾಪಿಡ್ ಆರ್ಟ್ ಸ್ಪರ್ಧೆ ಆಯೋಜಿಸಿದ್ದು, ಆಸಕ್ತರು ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ:99164 36399, 70195 76419.

8 ತಿಂಗಳಲ್ಲಿ ಬೀದಿದೀಪ 'ಎಲ್‌ಇಡಿ'ಮಯ

ಬಿಬಿಎಂಪಿಗೆ ಪ್ರತಿ ತಿಂಗಳು ವಿದ್ಯುತ್ ಬಿಲ್‌ನಲ್ಲಿ ₹12.5 ಕೋಟಿ ಉಳಿತಾಯ • ನಾಲ್ಕು ಪ್ಯಾಕೇಜ್‌ಗಳಲ್ಲಿ ಅಳವಡಿಸಲು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ಎಲ್ಲ ರಸ್ತೆ, ಬೀದಿ ದೀಪಗಳು ಎಂಟು ತಿಂಗಳಲ್ಲಿ ಎಲ್‌ಇಡಿಗೆ (ಲೈಟ್ ಎಮಿಟಿಂಗ್ ಡಿಯೋಡ್) ಬದಲಾಗಲಿದ್ದು, ವಿದ್ಯುತ್ ಬಿಲ್‌ನಲ್ಲಿ ಬಿಬಿಎಂಪಿಗೆ ಪ್ರತಿ ತಿಂಗಳು ಸುಮಾರು ₹12.5 ಕೋಟಿ ಉಳಿತಾಯವಾಗಲಿದೆ.

ಬೀದಿ ದೀಪಗಳನ್ನು ಎಲ್‌ಇಡಿಗೆ ಬದಲಾಯಿಸುವುದಾಗಿ ಹಲವು ವರ್ಷಗಳಿಂದ ಬಿಬಿಎಂಪಿ ಹೇಳುತ್ತಿದ್ದರೂ, ಯೋಜನೆ ಆರಂಭವಾಗಿರಲಿಲ್ಲ. ಹೊಸದಾಗಿ ಅಳವಡಿಸುತ್ತಿರುವ ಬೀದಿ ದೀಪಗಳು ಮಾತ್ರ ಎಲ್‌ಇಡಿ ಯಾಗಿರುತ್ತಿದ್ದವು. ಸುಮಾರು 2.85 ಲಕ್ಷ ಬೀದಿ ದೀಪಗಳು ಇನ್ನೂ ಹಳದಿ ಬೆಳಕು ಚೆಲ್ಲುವ ಸೋಡಿಯಂ ವೇಪರ್ ಲ್ಯಾಂಪ್ (ಎಸ್‌ಎಲ್‌ವಿ)ಗಳಾಗಿವೆ.

ಅಂಕಿ ಅಂಶಗಳು

4 ಪ್ಯಾಕೇಜ್
ಎಲ್‌ಇಡಿ ಅಳವಡಿಸುವ ಗುತ್ತಿಗೆದಾರರು

84 ತಿಂಗಳು
ಎಲ್‌ಇಡಿ ದೀಪಗಳ ನಿರ್ವಹಣೆ

₹2 ಕೋಟಿ
ಗುತ್ತಿಗೆದಾರರಿಗೆ ಪ್ರತಿ ತಿಂಗಳು ಪಾಲಿಕೆಯಿಂದ ಪಾವತಿ

ಸಮೀಕ್ಷೆಯಂತೆ, ನಗರದಲ್ಲಿ ಈಗಾಗಲೇ 2.50 ಲಕ್ಷ ಬೀದಿ ದೀಪಗಳಿಗೆ ಎಲ್‌ಇಡಿ ಅಳವಡಿಸಲಾಗಿದೆ. ಉಳಿದ 2.85 ಲಕ್ಷ ಬೀದಿ ದೀಪಗಳನ್ನೂ ಎಸ್‌ಎಲ್‌ವಿಯಿಂದ ಎಲ್‌ಇಡಿಗೆ ಬದಲಾಯಿಸಿದರೆ ಶೇ 50ರಷ್ಟು ವಿದ್ಯುತ್ ಉಳಿತಾಯವಾಗಲಿದೆ ಎಂದು ಅಂದಾಜಿಸಲಾಗಿದೆ. ಬಿಬಿಎಂಪಿ ಪ್ರತಿ ತಿಂಗಳು ಸುಮಾರು ₹25 ಕೋಟಿಯಷ್ಟು ವಿದ್ಯುತ್ ಬಿಲ್ ಪಾವತಿಸುತ್ತಿದೆ. ಇದು ಅರ್ಧದಷ್ಟಾಗುತ್ತದೆ ಎಂದು ಗುತ್ತಿಗೆದಾರರು ಹೇಳಿದ್ದಾರೆ. ಶೇ 50ರಷ್ಟು ಉಳಿತಾಯವನ್ನು ಸಾಧಿಸಿದರೆ, ಬಿಬಿಎಂಪಿ ಪ್ರತಿ ತಿಂಗಳು ವೆಚ್ಚವನ್ನು ಗುತ್ತಿಗೆದಾರರಿಗೆ ಪಾವತಿಸಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ 45 ಸಾವಿರಕ್ಕೂ ಹೆಚ್ಚು ವಿದ್ಯುತ್ ಕಂಬಗಳಲ್ಲಿ ದೀಪಗಳಿಲ್ಲ. ಅವುಗಳಿಗೂ ಎಲ್‌ಇಡಿ ಅಳವಡಿಸುವ ಯೋಜನೆ ಇದೆ. ಬಿಬಿಎಂಪಿಯ ಏಳು ವಲಯಗಳನ್ನು ನಾಲ್ಕು ಪ್ಯಾಕೇಜ್‌ಗಳಾಗಿ ವಿಂಗಡಿಸಿ ಎಲ್‌ಇಡಿ ಅಳವಡಿಸಲು ಹಾಗೂ ನಿರ್ವಹಣೆ ಮಾಡಲು ಗುತ್ತಿಗೆ ನೀಡಲಾಗಿದೆ. ಕೆಲಸ ಇನ್ನೂ ಆರಂಭವಾಗಿಲ್ಲ. ಸಮೀಕ್ಷೆ ನಡೆಯುತ್ತಿದ್ದು, ಇನ್ನೆರಡು ತಿಂಗಳಲ್ಲಿ ಬಲ್ಬ್ ಬದಲಾವಣೆ ಕಾರ್ಯ ಆರಂಭವಾಗಲಿದ್ದು, ಆರು ತಿಂಗಳೊಳಗೆ ಮುಗಿಯಲಿದೆ. ಮಹದೇಪುರ ವಲಯದಲ್ಲಿ ಸಮೀಕ್ಷೆ ಕಾರ್ಯ ನಡೆಯುತ್ತಿದ್ದು, ಇನ್ನೆರಡು ತಿಂಗಳಲ್ಲಿ ಅಲ್ಲಿಯೂ ಟೆಂಡರ್ ಕರೆದು, ಗುತ್ತಿಗೆ ನೀಡಲಾಗುತ್ತದೆ ಎಂದರು.

ಬೀದಿ ದೀಪಗಳ ಮಾಹಿತಿ

ವಲಯ	ಸೋಡಿಯಂ ವೇಪರ್ ಲ್ಯಾಂಪ್	ಎಲ್‌ಇಡಿ	ಒಟ್ಟು ಬೀದಿ ದೀಪಗಳು
ಬೊಮ್ಮನಹಳ್ಳಿ	48,126	32,458	80,584
ದಕ್ಷಿಣ	55,703	24,001	79,704
ಆರ್.ಆರ್. ನಗರ	44,140	34,379	78,519
ಪೂರ್ವ	40,620	37,167	77,787
ಮಹದೇವಪುರ	28,212	48,666	76,878
ಯಲಹಂಕ	24,369	32,200	56,569
ಪಶ್ಚಿಮ	28,139	27,502	55,641
ದಾಸರಹಳ್ಳಿ	16,297	13,779	30,076
ಒಟ್ಟು	2,85,606	2,25,152	5,36,758



'ಬೀದಿ ದೀಪಗಳ ಸಂಖ್ಯೆ ಹೆಚ್ಚು': 'ಮೈಸೂರು, ಮಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳಲ್ಲಿ ಪೌರಾಡಳಿತ ನಿರ್ದೇಶನಾಲಯದಿಂದ ಬೀದಿ ದೀಪಗಳನ್ನು ಎಲ್‌ಇಡಿಗೆ ಸಂಪೂರ್ಣವಾಗಿ ಬದಲಾಯಿಸಲಾಗಿದೆ. ಬೆಂಗಳೂರು ಅತಿದೊಡ್ಡ ನಗರವಾಗಿರುವುದರಿಂದ ಇಲ್ಲಿ ಬೀದಿ ದೀಪಗಳ ಸಂಖ್ಯೆಯೂ ಹೆಚ್ಚಿದೆ. ಹೀಗಾಗಿ, ಈ ಯೋಜನೆ ಅಳವಡಿಸಿಕೊಳ್ಳುವುದು ತಡವಾಗಿದೆ. ಎಲ್ಲ ಬೀದಿ ದೀಪಗಳನ್ನು ಎಲ್‌ಇಡಿಗೆ ಬದಲಾಯಿಸಲು ಗುತ್ತಿಗೆ ನೀಡಲಾಗಿದೆ. ಮಾರ್ಚ್ ವೇಳೆಗೆ ಮುಗಿಯುವ ಸಾಧ್ಯತೆ ಇದೆ' ಎಂದು ಬಿಬಿಎಂಪಿ ವಿದ್ಯುತ್ ವಿಭಾಗದ ಅಧೀಕ್ಷಕ ಎಂಜಿನಿಯರ್ ಆನಂದ್ ತಿಳಿಸಿದರು.

ಸುದ್ದಿ 2 ನಿಮಿಷ

'ರೀಲ್ಸ್' ಮಾಡುವಾಗ ಜಾರಿಬಿದ್ದು ಯುವತಿ ಸಾವು

ಬೆಂಗಳೂರು: ಪರಪ್ಪನ ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯ ರಾಯಸಂದ್ರ ಮುಖ್ಯರಸ್ತೆಯ ನಿರ್ಮಾಣ ಹಂತದ ಕಟ್ಟಡವೊಂದರ ಮೇಲೆ 'ರೀಲ್ಸ್' ಮಾಡುತ್ತಿದ್ದ ವೇಳೆ ಕಾಲುಜಾರಿ ಬಿದ್ದು ಯುವತಿ ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ನಂದಿನಿ (21) ಮೃತ ಯುವತಿ.

ನಗರದ ಭುವನೇಶ್ವರಿ ಲೇಔಟ್‌ನ ಪಿ.ಜಿಯೊಂದರಲ್ಲಿ ಯುವತಿ ನೆಲಸಿದ್ದರು. ರಿಲಯನ್ಸ್ ಮಾರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿಕೊಂಡು ಸೋಮವಾರ ಸಂಜೆ ಪಿ.ಜಿಗೆ ಬಂದಿದ್ದರು. ನಂತರ, ಸ್ನೇಹಿತರ ಜತೆ ಪಾರ್ಟಿ ಮಾಡಲು ರಾಯಸಂದ್ರ ಮುಖ್ಯರಸ್ತೆ ಸಮೀಪ ಇರುವ ನಿರ್ಮಾಣ ಹಂತದ ಅಪಾರ್ಟ್‌ಮೆಂಟ್‌ವೊಂದಕ್ಕೆ ಹೋಗಿದ್ದರು. ನಾಲ್ವರೂ ರಾತ್ರಿ 9 ಗಂಟೆಯವರೆಗೂ ಮದ್ಯ ಸೇವಿಸಿದ್ದರು. ಪಾರ್ಟಿ ಮುಗಿದ ಬಳಿಕ 'ರೀಲ್ಸ್' ಮಾಡಲು 14ನೇ ಮಹಡಿ ಮೇಲೇರಿದ್ದರು. ಆಗ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಮೃತ ನಂದಿನಿ ಜತೆಗಿದ್ದ ಯುವತಿ ಹಾಗೂ ಇಬ್ಬರು ಯುವಕರನ್ನು ಪ್ರಾಥಮಿಕ ವಿಚಾರಣೆ ನಡೆಸಲಾಗಿದೆ. ಮದ್ಯ ಸೇವಿಸಿದ್ದ ನಂದಿನಿ 'ರೀಲ್ಸ್' ಮಾಡುವ ವೇಳೆ ಕಾಲುಜಾರಿ ಬಿದ್ದು ಮೃತಪಟ್ಟಿದ್ದಾಳೆ ಎಂಬುದಾಗಿ ಅವರು ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ಸಮೀಕ್ಷೆಗೆ ಬಳಕೆ: ಇಂದು 'ಆಶಾ'ಗಳ ಪ್ರತಿಭಟನೆ



ಸಾಂದರ್ಭಿಕ ಚಿತ್ರ

ಬೆಂಗಳೂರು: ಪರಿಶಿಷ್ಟ ಜಾತಿಯಡಿ ಒಳಮೀಸಲಾತಿಗಾಗಿ ಕೈಗೊಂಡಿರುವ ಸಮೀಕ್ಷೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಆಶಾ ಕಾರ್ಯಕರ್ತೆಯರನ್ನು ಒತ್ತಾಯಪೂರ್ವಕವಾಗಿ ಬಳಸಿಕೊಳ್ಳುತ್ತಿರುವುದನ್ನು ಖಂಡಿಸಿ, ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಗುರುವಾರ ಬೆಳಿಗ್ಗೆ 11.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

ಈ ಹೆಚ್ಚುವರಿ ಕೆಲಸಕ್ಕೆ ಗೌರವಧನದ ಭರವಸೆಯನ್ನೂ ನೀಡಿಲ್ಲ. ಈ ಸಮೀಕ್ಷೆಯಲ್ಲಿ ಪಾಲ್ಗೊಂಡವರಿಗೆ ಸೂಕ್ತ ಗೌರವಧನ ನೀಡಬೇಕು. ನಿಗದಿಯಾದ ಪ್ರದೇಶವನ್ನು ಬಿಟ್ಟು, ಬೇರೆ ಪ್ರದೇಶಗಳಿಗೆ ಆಶಾ ಕಾರ್ಯಕರ್ತೆಯರನ್ನು ನಿಯೋಜಿಸಬಾರದು. ಸಮೀಕ್ಷೆಗೆ ನಿಗದಿಯಾಗಿರುವ ಭತ್ಯೆ ನೀಡಿ, ಬಾಕಿ ಉಳಿದಿರುವ ಪ್ರೋತ್ಸಾಹಧನವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಸಂಘದ ಉಪಾಧ್ಯಕ್ಷೆ ರಮಾ ಟಿ.ಸಿ. ಆಗ್ರಹಿಸಿದ್ದಾರೆ.

ಜನವರಿಯಲ್ಲಿ ನಡೆದ ಆಶಾ ಕಾರ್ಯಕರ್ತೆಯರ ರಾಜ್ಯ ಮಟ್ಟದ ಹೋರಾಟದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಏಪ್ರಿಲ್ ತಿಂಗಳಿಂದ ಮಾಸಿಕ ಕನಿಷ್ಠ ₹10 ಸಾವಿರ ಗೌರವಧನ ಪಾವತಿಸುವುದಾಗಿ ಘೋಷಿಸಿದ್ದರು. ಈ ಬಗ್ಗೆ ಕೂಡಲೇ ಸರ್ಕಾರ ಆದೇಶ ಹೊರಡಿಸಬೇಕು. ಬಾಕಿ ಇರುವ ಪ್ರೋತ್ಸಾಹಧನವನ್ನು ಬಿಡುಗಡೆ ಮಾಡಬೇಕು ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.



ಕಾಂಗ್ರೆಸ್ ಪಕ್ಷ ಸೇರಿದ ಆಮ್ ಆದ್ಮಿ ಪಕ್ಷದ ಮುಖಂಡರನ್ನು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ಪಕ್ಷಕ್ಕೆ ಬರಮಾಡಿಕೊಂಡರು

'ನೊಂದವರಿಗೆ ನ್ಯಾಯ ಕೊಡಿಸಿ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ನಾನು ಬಮೂಲ್ (ಬೆಂಗಳೂರು ಹಾಲು ಒಕ್ಕೂಟ) ಅಧ್ಯಕ್ಷನಾಗಿರುವುದು, ಕೆಲವು ಭ್ರಷ್ಟ ರಾಜಕಾರಣಿಗಳಿಗೆ ನುಂಗಲಾರದ ತುತ್ತಾಗಿದೆ. ಆದರೆ, ರೈತರಿಗೆ ಖುಷಿಯಾಗಿದೆ. ನನಗಿಷ್ಟವಿಲ್ಲದಿದ್ದರೂ, ಈ ಭಾಗದ ಶಾಸಕರು, ಸಚಿವರು ಅಧ್ಯಕ್ಷ ಸ್ಥಾನಕ್ಕೆ ಕೂರಿಸಿದ್ದಾರೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

ಆರ್.ಆರ್.ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ಪದಾಧಿಕಾರಿಗಳ ಕಾಂಗ್ರೆಸ್ ಸೇರ್ಪಡೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಕಾರ್ಯಕರ್ತರು ನೊಂದವರಿಗೆ ನ್ಯಾಯ ಕೊಡಿಸಬೇಕೇ ಹೊರತು, ನೀವು ನೀವೇ ಕಿತ್ತಾಡಬಾರದು. ನಿಮ್ಮ ನೋವು ಸಮಸ್ಯೆಗಳಿದ್ದರೆ, ನನ್ನ ಬಳಿ ಹೇಳಿ, ಬಗೆಹರಿಸುತ್ತೇನೆ' ಎಂದರು.

ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ಮಾತನಾಡಿ, 'ಕಾರ್ಯಕರ್ತರು ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಜನಸಾಮಾನ್ಯರಿಗೆ ತಲುಪಿಸಿ. ಅದನ್ನು ಬಿಟ್ಟು, ಹೊಸ ಕಾಂಗ್ರೆಸ್, ಹಳೇ ಕಾಂಗ್ರೆಸ್ ಎಂದು ಮಾತನಾಡುವುದನ್ನು ನಿಲ್ಲಿಸಿ' ಎಂದು ಸಲಹೆ ನೀಡಿದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ಸಮಾರಂಭದ ಅಧ್ಯಕ್ಷತೆವಹಿಸಿದ್ದರು.

ಇದೇ ವೇಳೆ ಆರ್.ಆರ್.ನಗರ ವಿಧಾನಸಭಾಕ್ಷೇತ್ರದ ಆಮ್ ಆದ್ಮಿ ಪಕ್ಷದ ಸತೀಶ್ ಗೌಡ, ಇಂದ್ರಾಣಿ, ನವೀನ್, ಮಂಜುನಾಥ್, ಅಚ್ಯುತ್ ಗಾಣಿಗ, ವಿಜಯ್ ಮುಂತಾದವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

'ಮಕ್ಕಳನ್ನು ಹೊರಗಿಡದೇ ಸಮೀಕ್ಷೆ ನಡೆಸಿ'

ಜಿಬಿಎ ವ್ಯಾಪ್ತಿಯ ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆಯ ಜನಜಾಗೃತಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಗಾಗಿ ನಡೆಯುತ್ತಿರುವ ಪರಿಶಿಷ್ಟ ಜಾತಿ ಸಮೀಕ್ಷೆಯಿಂದ ಮಕ್ಕಳನ್ನು ಹೊರಗಿಡಬಾರದು. ಮನೆಗೆ ಬೀಗ ಹಾಕಿ ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ಸಮೀಕ್ಷೆ ನಡೆಸುವ ಬದಲು ಬೆಳಿಗ್ಗೆ ಮತ್ತು ಸಂಜೆ ಜನರು ಮನೆಯಲ್ಲಿರುವ ಸಮಯದಲ್ಲಿ ಸಮೀಕ್ಷೆ ಮಾಡಿ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆ–2025ರ ಜನಜಾಗೃತಿ ಸಭೆಯನ್ನು ಬುಧವಾರ ಉದ್ಘಾಟಿಸಿ ಮಾತನಾಡಿದರು.

101 ಸಮುದಾಯಗಳು ಪರಿಶಿಷ್ಟ ಜಾತಿಯಲ್ಲಿವೆ. ಎಲ್ಲ ಸಮುದಾಯಗಳು ತಮ್ಮ ಮೂಲ ಜಾತಿಯನ್ನು ನಮೂದಿಸಬೇಕು. ಪಡಿತರ ಚೀಟಿಯಲ್ಲಿ ಹೆಸರಿಲ್ಲದ, ಆಧಾರ್ ಕಾರ್ಡ್ ಇನ್ನೂ ಮಾಡಿಸಿಲ್ಲದ ಪುಟ್ಟ ಮಕ್ಕಳ ಹೆಸರನ್ನೂ ಸೇರಿಸಬೇಕು ಎಂದು ಹೇಳಿದರು.

ಸಮೀಕ್ಷೆಗೆ ತೆರಳಿದಾಗ ಕಾಲೊನಿಗಳಲ್ಲಿ ಮನೆಗೆ ಬೀಗ ಹಾಕಿರುತ್ತಾರೆ ಎಂದು ಸಮೀಕ್ಷೆದಾರರು ತಿಳಿಸಿದ್ದಾರೆ. ಅದಕ್ಕಾಗಿ ಇನ್ನುಳಿದ ಐದು ದಿನಗಳಲ್ಲಿ ಬೆಳಿಗ್ಗೆ 6ರಿಂದ 10 ಮತ್ತು ಸಂಜೆ 5ರಿಂದ ರಾತ್ರಿ 9ರವರೆಗೆ ಮನೆಗಳಿಗೆ ಭೇಟಿ ನೀಡಬೇಕು. ಕೆಲಸಕ್ಕೆ ಹೋಗುವವರು ಈ ಹೊತ್ತಿನಲ್ಲಿ ಮನೆಯಲ್ಲಿ ಇರುತ್ತಾರೆ ಎಂದು ಸಲಹೆ ನೀಡಿದರು.

ನಗರದ 120 ಕಾಲೊನಿಗಳಲ್ಲಿ ಸಮೀಕ್ಷೆಗಳು ನಡೆಯಬೇಕು. ಅದಕ್ಕಾಗಿ ಪ್ರತಿ 200–250 ಜನರಿಗೊಬ್ಬರಂತೆ ಸಮೀಕ್ಷೆದಾರರು ಕೆಲಸ ಮಾಡಬೇಕು. ಕಾಲೊನಿಗಳಲ್ಲಿ ಶೇ 55ರಷ್ಟು ಜನರು ಮಾತ್ರ ಕನ್ನಡಿಗರಿದ್ದಾರೆ. ಉಳಿದವರು ಬೇರೆ ಬೇರೆ ರಾಜ್ಯಗಳಿಂದ ಬಂದವರಾಗಿದ್ದಾರೆ. ಅಲ್ಲದೇ ಕನ್ನಡಿಗರಲ್ಲಿಯೂ ಬೀದರ್, ಕಲಬುರಗಿ ಸಹಿತ ಬೇರೆಡೆಯಿಂದ ಬಂದವರಿರುತ್ತಾರೆ. ಬೇರೆ ಜಿಲ್ಲೆಯಿಂದ ಬಂದವರ ಸಮೀಕ್ಷೆ ಅವರ ಮೂಲ ಜಿಲ್ಲೆಗಳಲ್ಲಿ ಆಗಿಲ್ಲದಿದ್ದರೆ ಇಲ್ಲಿ ನಡೆಸಬೇಕು ಎಂದರು.

ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಮಾಜಿ ಶಾಸಕ ತಿಮ್ಮರಾಯಪ್ಪ, ಆದಿ ಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಮುಖಂಡರಾದ ಕೇಶವಮೂರ್ತಿ, ದೊಡ್ಡೇರಿ ವೆಂಕಟೇಶ್, ದಾಸನೂರು ಕೂಸಣ್ಣ, ಕೋಗಿಲು ವೆಂಕಟೇಶ್, ಸಂಘಟನೆಗಳ ಪ್ರಮುಖರು ಉಪಸ್ಥಿತರಿದ್ದರು.

'ಮತದಾರರ ಪಟ್ಟಿ ಪ್ರಕಾರ ಗಣತಿ ನಡೆಸಿ'

ಅಧಿಕಾರಿಗಳು, ಗಣತಿದಾರರು ಮತದಾರರ ಪಟ್ಟಿಯಂತೆ ಮನೆಗಳಿಗೆ ಭೇಟಿ ನೀಡಬೇಕು. ಆ ನಂತರ ಆಧಾರ್ ಕಾರ್ಡ್, ಪಡಿತರ ಚೀಟಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಆಗ ಮಾತ್ರ ಎಲ್ಲ ಮನೆಗಳಿಗೆ ಭೇಟಿ ನೀಡಲು ಸಾಧ್ಯ ಎಂದು ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಸಲಹೆ ನೀಡಿದರು.



ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆ–2025 ಜನಜಾಗೃತಿ ಸಭೆಯಲ್ಲಿ ಕೋಗಿಲು ವೆಂಕಟೇಶ್, ಎಚ್. ಆಂಜನೇಯ, ಎ. ನಾರಾಯಣಸ್ವಾಮಿ, ಕೆ.ಎಚ್ ಮುನಿಯಪ್ಪ, ಬಿ.ಎನ್. ಚಂದ್ರಪ್ಪ ಚರ್ಚೆಯಲ್ಲಿ ತೊಡಗಿದ್ದರು ಪ್ರಜಾವಾಣಿ ಚಿತ್ರ

'ಜುಲೈ 20ಕ್ಕೆ ಅನುಷ್ಠಾನಗೊಳಿಸಿ'

ಜೂನ್ 30ರ ಒಳಗೆ ಶೇ 100ರಷ್ಟು ಗಣತಿಯಾಗಬೇಕು. ಜುಲೈ 10ರ ಒಳಗೆ ವರದಿ ಸ್ವೀಕರಿಸಬೇಕು. ಜುಲೈ 20ಕ್ಕೆ ಒಳಮೀಸಲಾತಿ ಅನುಷ್ಠಾನಗೊಳಿಸಬೇಕು ಎಂದು ಮಾಜಿ ಸಚಿವ ಎಚ್. ಆಂಜನೇಯ ಸರ್ಕಾರವನ್ನು ಆಗ್ರಹಿಸಿದರು.

ಗಣತಿಯ ಅವಧಿಯನ್ನು ಮತ್ತೆ ವಿಸ್ತರಿಸಬಾರದು. ಸಮುದಾಯಗಳ ಹಿಂದುಳಿದಿರುವಿಕೆ, ಶೈಕ್ಷಣಿಕ ಮಟ್ಟ, ಜನಸಂಖ್ಯೆ ಸಹಿತ ಎಲ್ಲ ಮಾಹಿತಿ ಗಣತಿಯ ಮೂಲಕ ಸಿಗಲಿದೆ ಎಂದು ತಿಳಿಸಿದರು.

ಮೃತದೇಹದ ಪಕ್ಕ ನಿದ್ರಿಸಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತಿಗೆ ಜತೆಗೆ ಸಲುಗೆ ಹೊಂದಿರುವುದಾಗಿ ಎಲ್ಲೆಡೆ ಹೇಳಿಕೊಂಡು ಓಡಾಡುತ್ತಿದ್ದ ಸ್ನೇಹಿತನನ್ನು ಮನೆಗೆ ಕರೆಸಿಕೊಂಡು ಕೊಲೆ ಮಾಡಿದ್ದ ಪ್ರಕರಣದಲ್ಲಿ ಇಬ್ಬರನ್ನು ಬಂಡೇಪಾಳ್ಯ ಪೊಲೀಸರು ಬಂಧಿಸಿದ್ದಾರೆ.

ಉತ್ತರ ಪ್ರದೇಶದ ಗೋರಖ್‌ಪುರ ಜಿಲ್ಲೆಯ ನಿವಾಸಿ ಶೈಲೇಶ್ ಯಾದವ್ (30) ಕೊಲೆಯಾದ ವ್ಯಕ್ತಿ.

ಈ ಕೃತ್ಯ ಎಸಗಿದ ಆರೋಪದಡಿ ಕೊಲೆಯಾದ ವ್ಯಕ್ತಿಯ ಸ್ನೇಹಿತರಾದ ಸತೀಶ್ ಯಾದವ್ ಹಾಗೂ ಅರುಣ್ ಯಾದವ್ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಮುಖ ಆರೋಪಿ ಬೀರೇಂದ್ರ ಯಾದವ್ ತಲೆಮರೆಸಿಕೊಂಡಿದ್ದು, ಆತನ ಬಂಧನಕ್ಕಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳು ಕೂಡ ಉತ್ತರ ಪ್ರದೇಶದವರು. ಬಂಡೇಪಾಳ್ಯ ಬಳಿಯ ಅಂಬೇಡ್ಕರ್ ನಗರದಲ್ಲಿ ಪ್ರತ್ಯೇಕ ಬಾಡಿಗೆ ಮನೆಗಳಲ್ಲಿ ವಾಸವಾಗಿದ್ದರು. ನಾಲ್ವರೂ ಪೇಂಟಿಂಗ್ ಕೆಲಸ ಮಾಡಿಕೊಂಡಿದ್ದರು. ಈ ಮಧ್ಯೆ ಅತ್ತಿಗೆಯ ಜತೆಗೆ ಬೀರೇಂದ್ರ ಯಾದವ್ ಸಲುಗೆ ಹೊಂದಿದ್ದಾನೆ ಎಂದು ಶೈಲೇಶ್ ಯಾದವ್ ಎಲ್ಲರ ಬಳಿ ಹೇಳಿಕೊಂಡು ಓಡಾಡುತ್ತಿದ್ದ ಎನ್ನಲಾಗಿದೆ. ಅದರಿಂದ ಕೋಪಗೊಂಡ ಬೀರೇಂದ್ರ, ಜೂನ್ 18ರಂದು ಸ್ನೇಹಿತ ಶೈಲೇಶ್‌ನನ್ನು ಆರೋಪಿ ಸತೀಶ್ ಯಾದವ್‌ನ ಮನೆಗೆ ಕರೆಸಿಕೊಂಡಿದ್ದ. ಮದ್ಯದ ಅಮಲಿನಲ್ಲಿ ಮೂವರೂ ಸೇರಿ ಜಗಳ ತೆಗೆದು, ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿದ್ದರು ಎಂದು ಪೊಲೀಸರು ಹೇಳಿದರು.

'ಮದ್ಯದ ನಶೆಯಲ್ಲಿದ್ದ ಆರೋಪಿಗಳು ಅಂದು ರಾತ್ರಿಯಿಡೀ ಮೃತದೇಹದ ಬಳಿಯೇ ಮಲಗಿದ್ದರು. ಬೆಳಿಗ್ಗೆ ಎದ್ದಾಗ ಶೈಲೇಶ್ ಕೊಲೆ ಆಗಿರುವುದು ಗೊತ್ತಾಗಿತ್ತು. ಅದನ್ನು ಅರಿತ ಬೀರೇಂದ್ರ ಪರಾರಿಯಾಗಿದ್ದ. ಎರಡು ದಿನಗಳ ಬಳಿಕ ಶವ ಕೊಳೆತ ವಾಸನೆ ಬರಲಾರಂಭಿಸಿತ್ತು. ಅನುಮಾನಗೊಂಡ ಮನೆ ಮಾಲೀಕ, ಆರೋಪಿ ಸತೀಶ್‌ನನ್ನು ಪ್ರಶ್ನಿಸಿದ್ದರು. ಆಗ ನಿಜವಾದ ಮಾಹಿತಿ ನೀಡದೇ ಸ್ನೇಹಿತನೊಬ್ಬ ಮೃತಪಟ್ಟಿದ್ದಾನೆ ಎಂದು ಹೇಳಿದ್ದ. ಪೊಲೀಸರಿಗೆ ಮನೆಯ ಮಾಲೀಕರು ದೂರು ನೀಡಿದ್ದರು. ಪೊಲೀಸರು ಮನೆಗೆ ಬಂದು ಪರಿಶೀಲಿಸಿ ಯುಡಿಆರ್ ಪ್ರಕರಣ ದಾಖಲಿಸಿಕೊಂಡಿದ್ದರು. ಮರಣೋತ್ತರ ಪರೀಕ್ಷೆ ವೇಳೆ ಕೊಲೆ ಎಂಬುದು ಗೊತ್ತಾಗಿತ್ತು. ನಂತರ ವಿವಿಧ ಸಾಕ್ಷ್ಯಾಧಾರ ಆಧರಿಸಿ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಪೊಲೀಸ್ ಸಿಬ್ಬಂದಿ ಅಮಾನತು

ಅಂಗವಿಕಲ ವ್ಯಕ್ತಿಯಿಂದ ₹37 ಸಾವಿರ ಸುಲಿಗೆ ಮಾಡಿದ್ದ ಆರೋಪದ ಅಡಿ ಇಂದಿರಾನಗರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಶರಣ್ ಬಸಪ್ಪ ಪೂಜಾರಿ ಮತ್ತು ಕಾನ್‌ಸ್ಟೆಬಲ್ ಪರಮೇಶ್ವರ ನಾಯಕ್ ಅವರನ್ನು ಅಮಾನತು ಮಾಡಿ ಆದೇಶಿಸಲಾಗಿದೆ.

ಜೂನ್ 14ರ ರಾತ್ರಿ ಇಂದಿರಾನಗರ 100 ಅಡಿ ರಸ್ತೆಯಲ್ಲಿ ಇರುವ ಪಬ್‌ನಿಂದ ಹೊರಬಂದಿದ್ದ ಅಂಗವಿಕಲ ವ್ಯಕ್ತಿಯನ್ನು ಪೊಲೀಸ್ ಸಿಬ್ಬಂದಿ ತಡೆದಿದ್ದರು. 'ತಮ್ಮನ್ನು ಮಾದಕದ್ರವ್ಯ ಪರೀಕ್ಷೆಗೆ ಒಳಪಡಿಸಬೇಕು. ಒಂದು ವೇಳೆ ಪರೀಕ್ಷೆಯಲ್ಲಿ ಪಾಸಿಟಿವ್ ಬಂದರೆ, ಬಂಧಿಸಿ ಜೈಲಿಗೆ ಕಳುಹಿಸುತ್ತೇವೆ' ಎಂದು ಹೆದರಿಸಿದ್ದರು. ಹಣಕ್ಕೆ ಬೇಡಿಕೆ ಇಟ್ಟಿದ್ದರು.

ದ್ವಿಚಕ್ರ ವಾಹನದಲ್ಲಿ ಎಟಿಎಂಗೆ ಕರೆದೊಯ್ದು ₹50 ಸಾವಿರಕ್ಕೆ ಬೇಡಿಕೆ ಇಟ್ಟಿದ್ದರು. ನಂತರ, ₹40 ಸಾವಿರ ಪಡೆದು ಬಿಟ್ಟು ಕಳುಹಿಸಿದ್ದರು. ಘಟನೆಯ ಬಳಿಕ ಅಂಗವಿಕಲ ವ್ಯಕ್ತಿ ಎನ್‌ಜಿಒವೊಂದನ್ನು ಸಂಪರ್ಕಿಸಿದ್ದರು. ಇಂದಿರಾನಗರ ಠಾಣೆಯ ಇನ್‌ಸ್ಪೆಕ್ಟರ್ ಮತ್ತು ಹಿರಿಯ ಅಧಿಕಾರಿಗಳನ್ನು ಎನ್‌ಜಿಒ ಅಧಿಕಾರಿಗಳು ಸಂಪರ್ಕಿಸಿ ದೂರು ನೀಡಿದ್ದರು.

ವೃದ್ಧಾಶ್ರಮಕ್ಕೆ ಸೇರ್ಪಡೆ: ವೃದ್ಧ ದಂಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃದ್ಧಾಶ್ರಮಕ್ಕೆ ಸೇರಿಸಿದ್ದಕ್ಕೆ ನೊಂದು ಜೆ.ಪಿ. ನಗರದ ಎಂಟನೇ ಹಂತದ ವೃದ್ಧಾಶ್ರಮದಲ್ಲಿ ವೃದ್ಧ ದಂಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಕೃಷ್ಣಮೂರ್ತಿ



ರಾಧಾ

ಕೃಷ್ಣಮೂರ್ತಿ (81) ಹಾಗೂ ಅವರ ಪತ್ನಿ ರಾಧಾ (74) ಅವರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಒಂದು ತಿಂಗಳ ಹಿಂದೆ ತಂದೆ ಹಾಗೂ ತಾಯಿಯನ್ನು ಮಗ ವೃದ್ಧಾಶ್ರಮಕ್ಕೆ ಸೇರಿಸಿದ್ದ. ಅದರಿಂದ ನೊಂದು ಆತ್ಮಹತ್ಯೆ ಮಾಡಿಕೊಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

'ಮನೆಯಲ್ಲಿ ಸೊಸೆ ಅಡುಗೆಯನ್ನು ಚೆನ್ನಾಗಿ ಮಾಡುತ್ತಿರಲಿಲ್ಲ ಎನ್ನುವ ಕಾರಣಕ್ಕೆ ಗಲಾಟೆ ನಡೆಯುತ್ತಿತ್ತು. ಹೀಗಾಗಿ ತಂದೆ, ತಾಯಿಯನ್ನು ಪುತ್ರ ವೃದ್ಧಾಶ್ರಮಕ್ಕೆ ಸೇರಿಸಿದ್ದ' ಎಂದು ಮೂಲಗಳು ಹೇಳಿವೆ.

ವೃದ್ಧಾಶ್ರಮದಲ್ಲಿ ದಂಪತಿಗೆ ಕೋಣೆ ನೀಡಲಾಗಿತ್ತು. ಅದೇ ಕೋಣೆಯಲ್ಲಿ ವೃದ್ಧ ದಂಪತಿ ವಾಸ ಮಾಡುತ್ತಿದ್ದರು. ಮಂಗಳವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬುಧವಾರ ಕೊಠಡಿಯ ಬಾಗಿಲು ತೆರೆದಿರಲಿಲ್ಲ. ಆಶ್ರಮದ ಸಿಬ್ಬಂದಿ ಪರಿಶೀಲಿಸಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ.

'ಸೊಸೆಯ ಜೊತೆಗೆ ಹೊಂದಾಣಿಕೆ ಇರದ ಕಾರಣ ಬೇರೆ ಮನೆ ಮಾಡಿಕೊಡಲು ಪುತ್ರನ ಬಳಿ ಪೋಷಕರು ಕೇಳಿಕೊಂಡಿದ್ದರು. 2021ರಲ್ಲಿ ಬ್ಯಾಟರಾಯನಪುರದ ವೃದ್ಧಾಶ್ರಮಕ್ಕೆ ತಂದೆ-ತಾಯಿಯನ್ನು ಪುತ್ರ ಸೇರಿಸಿದ್ದ. ಬಳಿಕ, 2023ರಲ್ಲಿ ತಂದೆ, ತಾಯಿಯನ್ನು ಮನೆಗೆ ವಾಪಸ್ ಕರೆತಂದಿದ್ದ. ಮತ್ತೆ ಮನೆಯಲ್ಲಿ ಗಲಾಟೆ ಆರಂಭವಾಗಿತ್ತು. ಹೀಗಾಗಿ, ಕಳೆದ ತಿಂಗಳು ಬನಶಂಕರಿ ವೃದ್ಧಾಶ್ರಮಕ್ಕೆ ಸೇರಿಸಿದ್ದ' ಎಂದು ಪೊಲೀಸರು ಹೇಳಿದರು.

'ಊಟ ಮಾಡಿದ ಬಳಿಕ ದಂಪತಿ ಟಿ.ವಿ ವೀಕ್ಷಿಸುತ್ತಿದ್ದರು. ಟಿ.ವಿ ನೋಡುವ ವಿಚಾರಕ್ಕೆ ಗಲಾಟೆ ಆಗಿತ್ತು. ನಂತರ, ಕೊಠಡಿಗೆ ತೆರಳಿದ ದಂಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಟಿ.ವಿ ವೀಕ್ಷಣೆಗಾಗಿ ಯಾರ್‍ಯಾರ ಮಧ್ಯೆ ಗಲಾಟೆ ಆಗಿತ್ತು ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಆತ್ಮಹತ್ಯೆ ವಿಷಯವನ್ನು ಪುತ್ರನಿಗೆ ತಿಳಿಸಲಾಗಿದೆ ಎಂದು ಪೊಲೀಸರು ಹೇಳಿದರು.

ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಯುಡಿಆರ್ ದಾಖಲಾಗಿದೆ.

ಲೈಂಗಿಕ ದೌರ್ಜನ್ಯ: ಪಿ.ಜಿ ಮಾಲೀಕ ಬಂಧನ

ಕಳೆದುಹೋದ ಚಿನ್ನದ ಉಂಗುರ ಹುಡುಕುವ ನೆಪದಲ್ಲಿ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಪಿ.ಜಿ ಮಾಲೀಕನನ್ನು ಮೈಕೊ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಪಿ.ಜಿ ಮಾಲೀಕ ರವಿತೇಜ ರೆಡ್ಡಿ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಬಿಟಿಎಂ ಲೇಔಟ್‌ನಲ್ಲಿ ಆರೋಪಿ ರವಿತೇಜ ರೆಡ್ಡಿ ಮಹಿಳಾ ಪಿ.ಜಿ ನಡೆಸುತ್ತಿದ್ದ. ಪಿ.ಜಿಯಲ್ಲಿ ವಾಸವಾಗಿದ್ದ ಯುವತಿಯ ಚಿನ್ನದ ಉಂಗುರ ಜೂನ್ 21ರಂದು ಕಳವಾಗಿತ್ತು. ಮಾಲೀಕ ರವಿತೇಜನಿಗೆ ಮಾಹಿತಿ ನೀಡಿದ್ದರು. ಅದನ್ನು ಆಧರಿಸಿ ಆರೋಪಿ ಪಿ.ಜಿಯಲ್ಲಿರುವ ಯುವತಿಯರ ಕೋಣೆ ಹಾಗೂ ಅವರ ಲಗೇಜ್ ತಪಾಸಣೆ ನಡೆಸಿದ್ದ. ಆಗ ಯುವತಿಯನ್ನು ಸ್ಪರ್ಶಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಅದಕ್ಕೆ ಪ್ರತಿರೋಧ ವ್ಯಕ್ತಪಡಿಸಿದ ಸಂತ್ರಸ್ತೆಗೆ ಜೀವ ಬೆದರಿಕೆಯೊಡ್ಡಿದ್ದ. ಈ ಸಂಬಂಧ ದೂರು ನೀಡಿದ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಜೈ ಶ್ರೀರಾಮ್ ಘೋಷಣೆ ಕೂಗುವಂತೆ ಬೆದರಿಕೆ: ಎಫ್‌ಐಆರ್

ಜೈ ಶ್ರೀರಾಮ್ ಘೋಷಣೆ ಕೂಗುವಂತೆ ಬೆದರಿಕೆ ಹಾಕಿದ ಸಂಬಂಧ ಅಪರಿಚಿತರ ವಿರುದ್ಧ ಸಂಪಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸವಲಿಂಗಪ್ಪ ನಗರದ ಮೊಹಮ್ಮದ್ ಜಮೀರ್ ಪಾಷಾ ಹಾಗೂ ವಾಸೀಂ ಅವರು ನೀಡಿದ ದೂರಿನ ಮೇರೆಗೆ ಆರು ಮಂದಿ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಜೂನ್ 22ರಂದು ಸಂಪಿಗೇಹಳ್ಳಿ ಮುಖ್ಯರಸ್ತೆಯ ಮೂಲಕ ಚೊಕ್ಕನಹಳ್ಳಿಯ ಕಡೆಗೆ ಆಟೊದಲ್ಲಿ ತೆರಳುತ್ತಿದ್ದೆವು. ದಾರಿ ಮಧ್ಯೆ ನೀಲಗಿರಿ ತೋಪಿನ ಬಳಿ ಮೂತ್ರ ವಿಸರ್ಜನೆಗೆ ಆಟೊ ನಿಲ್ಲಿಸಲಾಗಿತ್ತು. ಸ್ಥಳಕ್ಕೆ ಬಂದ ಆರು ಮಂದಿ, ನಮ್ಮನ್ನು ನಿಂದಿಸಿ ಹಲ್ಲೆ ನಡೆಸಿದರು. ವಸೀಂ ಮೇಲೆ ಕೋಲಿನಿಂದ ಹಲ್ಲೆ ನಡೆಸಿದಾಗ ನೋವು ತಾಳಲಾರದೇ ಅಲ್ಲಾಹು ಎಂದು ಕೂಗಿದ. ಅದಕ್ಕೆ ಪ್ರತಿಯಾಗಿ ಜೈ ಶ್ರೀರಾಮ್ ಘೋಷಣೆ ಕೂಗುವಂತೆ ಆರೋಪಿಗಳು ಬೆದರಿಕೆ ಹಾಕಿದರು' ಎಂದು ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಆಚರಣೆ ನಾಳೆ

7 ಸ್ಥಳಗಳಿಂದ 'ಪುರಜ್ಯೋತಿ' ಮೆರವಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ದಿನಾಚರಣೆ ಅಂಗವಾಗಿ, ನಗರ ಹಾಗೂ ಸುತ್ತಮುತ್ತಲಿನ ಏಳು ಪ್ರಮುಖ ತಾಣಗಳಿಂದ 'ಪುರಜ್ಯೋತಿ' ಮೆರವಣಿಗೆಯಲ್ಲಿ ಸಾಗಿ, ಕೆಂಪೇಗೌಡ ಭವನದ ನಿರ್ಮಾಣ ಸ್ಥಳಕ್ಕೆ ಜೂನ್ 27ರಂದು ಬರಲಿವೆ.



ಬೆಂಗಳೂರು ನಗರ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯ ರಾಜ್ಯಮಟ್ಟದ ಕಾರ್ಯಕ್ರಮ ಸುಮನಹಳ್ಳಿ ಬಳಿಯಿರುವ ಬಾಬು ಜಗಜೀವನ್ ರಾಂ ಭವನದಲ್ಲಿ ಶುಕ್ರವಾರ 12.30ಕ್ಕೆ ನಡೆಯಲಿದೆ. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ರಾಜ್ಯಮಟ್ಟದ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ನಗರದ ನಾಲ್ಕು ದಿಕ್ಕುಗಳಲ್ಲಿರುವ (ಲಾಲ್ ಬಾಗ್, ಮೇಕ್ರಿ ವೃತ್ತ, ಕೆಂಪಾಂಬುದಿ ಕೆರೆ ಹಾಗೂ ಹಲಸೂರು) ಗಡಿ ಗೋಪುರ ಹಾಗೂ ಐತಿಹಾಸಿಕ ಸ್ಥಳಗಳಾದ ಮಾಗಡಿ ತಾಲ್ಲೂಕಿನ ಕೆಂಪಾಪುರ, ದೇವನಹಳ್ಳಿ ತಾಲ್ಲೂಕಿನಲ್ಲಿರುವ ಆವತಿ ಹಾಗೂ ಕುಣಿಗಲ್ ತಾಲ್ಲೂಕಿನ ಹುತ್ತರಿ ದುರ್ಗದಿಂದ ಶುಕ್ರವಾರ ಬೆಳಿಗ್ಗೆ 7ಕ್ಕೆ 'ಪುರಜ್ಯೋತಿ' ಹೊರಟು, ಸುಮನಹಳ್ಳಿ ವೃತ್ತದ ಬಳಿಯ ಹೊರವರ್ತುಲ ರಸ್ತೆಯಲ್ಲಿ ಕೆಂಪೇಗೌಡ ಭವನದ ನಿರ್ಮಾಣ ಸ್ಥಳಕ್ಕೆ ಬಂದು ಸೇರಲಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೆಂಪೇಗೌಡ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಇದಕ್ಕೂ ಮುನ್ನ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ನಾಡಪ್ರಭು ಕೆಂಪೇಗೌಡರ ಪ್ರಗತಿಯ ಪ್ರತಿಮೆ, ಬಿಬಿಎಂಪಿ ಕೇಂದ್ರ ಕಚೇರಿಯ ಮುಂಭಾಗದಲ್ಲಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಹಾಗೂ ವಿಧಾನಸೌಧ ಮುಂಭಾಗದಲ್ಲಿರುವ ಕೆಂಪೇಗೌಡರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲಿದ್ದಾರೆ.

ಬಿಬಿಎಂಪಿ ಮಟ್ಟದ ಕಾರ್ಯಕ್ರಮವನ್ನು ಕೇಂದ್ರ ಕಚೇರಿಯ ಆವರಣದಲ್ಲಿರುವ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಆಚರಿಸಲಾಗುತ್ತದೆ. ವಿವಿಧ ಕ್ಷೇತ್ರದಲ್ಲಿ ಸಾಧಕರು ಹಾಗೂ ಉತ್ತಮ ಅಧಿಕಾರಿ/ನೌಕರರಿಗೆ ನಾಡಪ್ರಭು ಕೆಂಪೇಗೌಡ ಪ್ರಶಸ್ತಿಯನ್ನು ಸಂಜೆ ಪ್ರದಾನ ಮಾಡಲಾಗುತ್ತದೆ ಎಂದು ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ನವೀನ್ ಕುಮಾರ್ ರಾಜು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪುರಜ್ಯೋತಿ'ಗೆ ಸಚಿವರಿಂದ ಚಾಲನೆ

- **ಲಾಲ್‌ಬಾಗ್ ಗಡಿಗೋಪುರ:** ದಿನೇಶ್ ಗುಂಡೂರಾವ್
- **ಮೇಖ್ರಿ ವೃತ್ತ ಗಡಿಗೋಪುರ:** ಬಿ.ಎಸ್. ಸುರೇಶ್
- **ಕೆಂಪಾಂಬುಧಿ ಕೆರೆ ಗಡಿಗೋಪುರ:** ಜಮೀರ್ ಅಹ್ಮದ್ ಖಾನ್
- **ಹಲಸೂರು ಗಡಿಗೋಪುರ:** ಕೆ.ಜೆ ಜಾರ್ಜ್
- **ನಾಡಪ್ರಭು ಕೆಂಪೇಗೌಡರ ಸಮಾಧಿ, ಮಾಗಡಿ:** ರಾಮಲಿಂಗಾರೆಡ್ಡಿ
- **ಚೆನ್ನಕೇಶವ ದೇವಾಲಯ, ಆವತಿ:** ಕೆ.ಎಚ್ ಮುನಿಯಪ್ಪ
- **ಬಯಲು ಬಿಸಿಲು ಬಸವಣ್ಣ, ಹುತ್ರಿದುರ್ಗ:** ಜಿ ಪರಮೇಶ್ವರ

ಒಣಗಿದ ಮರ, ಕೊಂಬೆ ಮಾಹಿತಿ ನೀಡಲು ಮನವಿ

ಬೆಂಗಳೂರು: ನಗರದ ರಸ್ತೆಗಳಲ್ಲಿ ಒಣಗಿರುವ ಮರ, ಕೊಂಬೆಗಳ ಮಾಹಿತಿ ನೀಡಲು ಬಿಬಿಎಂಪಿ ಅರಣ್ಯ ವಿಭಾಗ ನಾಗರಿಕರಲ್ಲಿ ಮನವಿ ಮಾಡಿದೆ.

ಬೆಂಗಳೂರು ನಗರದ ಸಾರ್ವಜನಿಕರು ತಮ್ಮ ಪ್ರದೇಶಗಳಲ್ಲಿ ಒಣಗಿರುವ, ಅಪಾಯ ಸ್ಥಿತಿಯ ಮರಗಳು ಹಾಗೂ ಒಣಗಿರುವ ರೆಂಬೆ-ಕೊಂಬೆಗಳು ಕಂಡುಬಂದಲ್ಲಿ ಪಾಲಿಕೆ ಸಹಾಯವಾಣಿ ಸಂಖ್ಯೆ 1533ಕ್ಕೆ ಕರೆ ಮಾಡಿ ದೂರು ನೀಡಬಹುದು.

ವಿಧಾನಸಭೆ ಕ್ಷೇತ್ರವಾರು ದೂರು ನೀಡಬಹುದು. ಅರಣ್ಯ ವಿಭಾಗದ ಅಧಿಕಾರಿಗಳ ಮೊಬೈಲ್‌ಗೆ ಕರೆ ಮಾಡಿ ಅಥವಾ ವಾಟ್ಸ್ ಆ್ಯಪ್‌ನಲ್ಲಿ ಚಿತ್ರಸಹಿತ ವಿಳಾಸವನ್ನು ಕಳುಹಿಸಬೇಕು. ಅಪಾಯಕಾರಿ ಮರ, ಕೊಂಬೆಗಳನ್ನು ತೆರವುಗೊಳಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ವಿಧಾನಸಭೆ ಕ್ಷೇತ್ರಗಳು

- **ರಾಜಾಜಿನಗರ, ಗೋವಿಂದರಾಜನಗರ, ಮಲ್ಲೇಶ್ವರ:** ವಲಯ ಅರಣ್ಯಾಧಿಕಾರಿ ಸುದರ್ಶನ್ – **9480683341**
- **ಮಹಾಲಕ್ಷ್ಮಿಪುರ, ಗಾಂಧಿನಗರ, ಚಾಮರಾಜಪೇಟೆ:** ರಾಜೇಶ್ - **9449175978**
- **ಶಾಂತಿನಗರ, ಸಿ.ವಿ. ರಾಮನ್ ನಗರ, ಪುಲಕೇಶಿನಗರ:** ವಲಯ ಅರಣ್ಯಾಧಿಕಾರಿ ನಾಗೇಂದ್ರ – **9113530344**
- **ಶಿವಾಜಿನಗರ, ಹೆಬ್ಬಾಳ, ಸರ್ವಜ್ಞ ನಗರ:** ಉಪ ವಲಯ ಅರಣ್ಯಾಧಿಕಾರಿ ಶಿವಣ್ಣ- **9164597895**
- **ಬಸವನಗುಡಿ, ವಿಜಯನಗರ, ಪದ್ಮನಾಭನಗರ:** ವಲಯ ಅರಣ್ಯಾಧಿಕಾರಿ ಚಂದ್ರಪ್ಪ ವಿ- **9480683655**
- **ಚಿಕ್ಕಪೇಟೆ, ಜಯನಗರ:** ಉಪ ವಲಯ ಅರಣ್ಯಾಧಿಕಾರಿ ಬಿ.ಬಿ ಮೇಟಿ – **9740576919**
- **ಬಿಟಿಎಂ ಲೇಔಟ್:** ಉಪ ವಲಯ ಅರಣ್ಯಾಧಿಕಾರಿ ಹರೀಶ್ ಎಚ್.ಆರ್ - **7676165253**
- **ದಾಸರಹಳ್ಳಿ:** ವಲಯ ಅರಣ್ಯಾಧಿಕಾರಿ ರಾಜಪ್ಪ ಕೆ.ಎನ್ - **9448234928**
- **ಬೆಂಗಳೂರು ದಕ್ಷಿಣ:** ವಲಯ ಅರಣ್ಯಾಧಿಕಾರಿ ನರೇಂದ್ರ ಬಾಬು– **9480685399**
- **ಬೊಮ್ಮನಹಳ್ಳಿ, ಆನೇಕಲ್:** ಉಪ ವಲಯ ಅರಣ್ಯಾಧಿಕಾರಿ ವಿನಯ್- **7760933913**
- **ಯಲಹಂಕ:** ದೇವರಾಜ್– **9964530649**
- **ಬ್ಯಾಟರಾಯನಪುರ:** ಉಪ ವಲಯ ಅರಣ್ಯಾಧಿಕಾರಿ ಮುತ್ತುರಾಜ್.ಕೆ.ಪಿ- **9483139438**
- **ಆರ್.ಆರ್. ನಗರ:** ವಲಯ ಅರಣ್ಯಾಧಿಕಾರಿ ರವೀಂದ್ರನಾಥ್ – **6361903330**
- **ಯಶವಂತಪುರ:** ಉಪ ವಲಯ ಅರಣ್ಯಾಧಿಕಾರಿ ಜಗದೀಶ್ - **9880516322**
- **ಮಹದೇವಪುರ, ಕೆ.ಆರ್ ಪುರ:** ವಲಯ ಅರಣ್ಯಾಧಿಕಾರಿ ಚಿದಾನಂದ್ - **9480685541**



ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ (ಐಎಸ್‌ಎಸ್) ಹೊತ್ತೊಯ್ದ 'ಡ್ರ್ಯಾಗನ್' ಬಾಹ್ಯಾಕಾಶ ಕೋಶದಲ್ಲಿ ಭಾರತದ ಗಗನಯಾನಿ ಶುಭಾಂಶು ಶುಕ್ಲಾ (ಎಡದಿಂದ ಎರಡನೆಯವರು) ಮತ್ತು ಇತರ ಮೂವರು ಗಗನಯಾನಿಗಳು ಇದ್ದಾರೆ —ಪಿಟಿಐ ಚಿತ್ರಗಳು



ಗಗನನೌಕೆಯು ಉಡ್ಡಯನದ ನೇರ ಪ್ರಸಾರವನ್ನು ಶುಭಾಂಶು ಅವರ ಪಾಲಕರಾದ ಶಂಭು ಶುಕ್ಲಾ ಹಾಗೂ ಆಶಾ ಶುಕ್ಲಾ ಅವರು ಲಖನೌದಲ್ಲಿ ವೀಕ್ಷಿಸಿ ಸಂತಸಪಟ್ಟರು

ಅಭಿಪ್ರಾಯಗಳು

ಇವು ನಮ್ಮ ಸಂತೋಷದ ಕಣ್ಣೀರು. ನನ್ನ ಮಗ ಯಶಸ್ವಿಯಾಗುತ್ತಾನೆಂದು ನನಗೆ ತಿಳಿದಿತ್ತು. ಯಶಸ್ವಿ ಕಾರ್ಯಾಚರಣೆಯ ಬಳಿಕ ಅವನು ಹಿಂದಿರುಗುವುದನ್ನು ನಾನು ಎದುರು ನೋಡುತ್ತಿದ್ದೇನೆ. ಅವನು ಭೂಮಿಗೆ ಬಂದ ಬಳಿಕವೂ ನಮ್ಮನ್ನು ಭೇಟಿಯಾಗಲು ಸ್ವಲ್ಪ ಸಮಯ ಬೇಕಾಗುತ್ತದೆ. ಇದು ನಮಗೆ ತುಂಬಾ ಹೆಮ್ಮೆ ಹಾಗೂ ಭಾವುಕ ಕ್ಷಣವಾಗಿದೆ. ನನಗೀಗ ಹೇಳಲೂ ಏನು ಇಲ್ಲ. ತುಂಬಾ ಸಂತೋಷವಾಗುತ್ತಿದೆ
ಆಶಾ ಶುಕ್ಲಾ, ಶುಭಾಂಶು ತಾಯಿ

ಇದು ನಮ್ಮ ದೇಶಕ್ಕೆ ಹೆಮ್ಮೆಯ ಕ್ಷಣ. ಈ ಸಮಯದಲ್ಲಿ ಏನು ಹೇಳಬೇಕೆಂದೇ ನನಗೆ ತೋಚುತ್ತಿಲ್ಲ. ಮಗನ ಮೇಲೆ ನನ್ನ ಆಶೀರ್ವಾದ ಸದಾ ಇರುತ್ತದೆ
ಶಂಭು ಶುಕ್ಲಾ, ಶುಭಾಂಶು ತಂದೆ

ನಮ್ಮ ತಂದೆ– ತಾಯಿ, ಪ್ರಾರ್ಥನೆಯೊಂದಿಗೆ ಈ ದಿನವನ್ನು ಪ್ರಾರಂಭಿಸಿದರು. ಮುಂಜಾನೆ ಶುಭಾಂಶು ಜೊತೆಗೆ ನಾವು ಮಾತನಾಡಿದೆವು. ಬಹಳ ಸಮಯದಿಂದ ಅವನು ಕಾಯುತ್ತಿದ್ದ ಸಮಯ ಕೊನೆಗೂ ಬಂದಿತ್ತು. ಅವನು ಯಾವುದೇ ಒತ್ತಡದಲ್ಲಿರಲಿಲ್ಲ. ಬಹುಶಃ ಸ್ವಲ್ಪ ಗಾಬರಿಗೆ ಒಳಗಾಗಿದ್ದರೂ ಅವನು ಅದನ್ನು ತೋರಿಸಿಕೊಂಡಿಲ್ಲ. ಬಹಳ ಆತ್ಮವಿಶ್ವಾಸದಿಂದ ಇದ್ದ. ಶುಭಾಂಶುವಿನಿಂದ ಪ್ರೇರಿತರಾಗಿ ದೇಶದಾದ್ಯಂತ ಅವನಂತೆ ನೂರಾರು ಜನರು ಬೆಳೆಯಲಿ. ಇದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯ
ಸುಚಿ ಶುಕ್ಲಾ, ಶುಭಾಂಶು ಸಹೋದರಿ

ನಾವು ಈಗ ಯಾರದ್ದೋ ಅನುಯಾಯಿ ಅಲ್ಲ. ಶುಕ್ಲಾ ಅವರು ಈ ಮಿಷನ್‌ನ ಪ್ರಮುಖ ಭಾಗವಾಗಲಿದ್ದಾರೆ
ಜಿತೇಂದ್ರ ಸಿಂಗ್, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ

ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ಶುಕ್ಲಾ ಅವರು ತೆರಳಿದ್ದು ಐತಿಹಾಸಿಕವಾದುದು. ನಮಗಿದು ಹೆಮ್ಮೆ. ಬಾಹ್ಯಾಕಾಶಕ್ಕೆ ಸಂಬಂಧಿಸಿ ಭಾರತದ ಮಹಾತ್ವಾಕಾಂಕ್ಷೆಗಳಿಗೆ ಇದೊಂದು ಮೈಲಿಗಲ್ಲು
ಪವನ್ ಕುಮಾರ್ ಗೋಯೆಂಕಾ, ಅಧ್ಯಕ್ಷ, ಇಂಡಿಯನ್ ನ್ಯಾಷನಲ್ ಸ್ಪೇಸ್ ಪ್ರಮೋಷನ್ ಮತ್ತು ಆಥರೈಸೇಷನ್ ಸೆಂಟರ್

ಆಕ್ಸಿಯಂ–4 ಬಾಹ್ಯಾಕಾಶ ಯೋಜನೆಯ ಮೂಲಕ ಮಾನವನನ್ನು ಬಾಹ್ಯಾಕಾಶಕ್ಕೆ ಕಳುಹಿಸುವ ಯೋಜನೆಗೆ ಭಾರತವು ಮರು ಪ್ರವೇಶ ಪಡೆದಂತಾಗಿದೆ. ಇದರಿಂದ ನಮ್ಮ ಗಗನಯಾನ ಮಿಷನ್, ಭಾರತೀಯ ಬಾಹ್ಯಾಕಾಶ ಕೇಂದ್ರ ಸ್ಥಾಪನೆ, ಚಂದ್ರನಲ್ಲಿಗೆ ಮಾನವನನ್ನು ಕಳುಹಿಸುವ ಯೋಜನೆಗೆ ವೇದಿಕೆ ಸಿದ್ಧ ಮಾಡಿದಂತಾಗಿದೆ
ಸೋಮಕ್ ರಾಯ್‌ಚೌಧರಿ, ಖಭೌತ ವಿಜ್ಞಾನಿ

ಶುಭಾಂಶು ತಂದೆ–ತಾಯಿ ಹರ್ಷ

ಲಖನೌ (ಪಿಟಿಐ): ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಅತ್ತ ಅಮೆರಿಕದಿಂದ ಬಾಹ್ಯಾಕಾಶಕ್ಕೆ ಜಿಗಿಯುತ್ತಿದ್ದಂತೆ, ಇತ್ತ ಅವರ ಊರಿನಲ್ಲಿ ಭಾರಿ ಸಂಭ್ರಮ.

ಉತ್ತರ ಪ್ರದೇಶದ ಲಖನೌನಲ್ಲಿ ಬುಧವಾರ ಶುಭಾಂಶು ಅವರಿದ್ದ ರಾಕೆಟ್ ಉಡಾವಣೆಯ ನೇರ ಪ್ರಸಾರ ವೀಕ್ಷಿಸಿದ ಅವರ ಪೋಷಕರು ಮಗನ ಸಾಧನೆ ಕಂಡು ಕ್ಷಣಕಾಲ ಮೂಕವಿಸ್ಮಿತರಾಗಿ ಆನಂದಬಾಷ್ಪ ಸುರಿಸಿದರು. ಶುಭಾಂಶು ಕುಟುಂಬ ಸದಸ್ಯರು, ಸ್ನೇಹಿತರು, ವಿದ್ಯಾರ್ಥಿಗಳು ಹಾಗೂ ಹಿರಿಯ ರಕ್ಷಣಾ ಸಿಬ್ಬಂದಿ ಸೇರಿದಂತೆ ಅನೇಕರು ಸ್ಥಳದಲ್ಲಿದ್ದರು. ರಾಕೆಟ್ ಉಡಾವಣೆಯಾಗುತ್ತಿದ್ದಂತೆ, ಜನರು 'ಭಾರತ ಮಾತೆಗೆ ಜಯವಾಗಲಿ, ಹಿಪ್ ಹಿಪ್ ಹುರ್ರೆ' ಎಂಬ ಹರ್ಷೋದ್ಗಾರದೊಂದಿಗೆ ಚಪ್ಪಾಳೆಯ ಸುರಿಮಳೆಗೈದರು.

ಮೊಳಕೆ ಸಂಶೋಧನೆಗೆ ಕೃಷಿ ವಿ.ವಿ ಹೆಸರು, ಮೆಂತ್ಯೆ ಬೀಜ ರವಾನೆ

ಪ್ರಜಾವಾಣಿ ವಾರ್ತೆ

ಧಾರವಾಡ: 'ಇಲ್ಲಿನ ಕೃಷಿ ವಿಶ್ವವಿದ್ಯಾಲಯದ 'ಹೆಸರು' ಮತ್ತು 'ಮೆಂತ್ಯೆ' ಬೀಜಗಳನ್ನು 'ಆಕ್ಸಿಯಂ–4' ಬಾಹ್ಯಾಕಾಶ ಯೋಜನೆಗಾಗಿ ಬುಧವಾರ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ರವಾನಿಸಲಾಗಿದೆ. 'ಬಾಹ್ಯಾಕಾಶದಲ್ಲಿ ಸಲಾಡ್ ಬೀಜಗಳ ಮೊಳಕೆ;ಗಗನಯಾತ್ರಿಗಳ ಆಹಾರ ಪೋಷಣೆ' ಸಂಶೋಧನೆ ನಿಟ್ಟಿನಲ್ಲಿ ಪರೀಕ್ಷಾರ್ಥ-ವಾಗಿ ರವಾನಿಸಲಾಗಿದೆ' ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪಿ.ಎಲ್.ಪಾಟೀಲ ತಿಳಿಸಿದರು.

'ಬಾಹ್ಯಾಕಾಶದಲ್ಲಿ ಗಗನಯಾತ್ರಿಗಳು ಈ ಬೀಜಗಳಿಗೆ ನೀರು ಹಾಕುತ್ತಾರೆ. ಎರಡರಿಂದ ನಾಲ್ಕು ದಿನಗಳಲ್ಲಿ ಮೊಳಕೆಯೊಡೆಯುತ್ತವೆ. ಮೊಳಕೆ ಕಾಳುಗಳನ್ನು ಬಾಹ್ಯಾಕಾಶದಲ್ಲಿ ಶೈತ್ಯ ಘಟಕದಲ್ಲಿ ಇಟ್ಟು ನಂತರ ಭೂಮಿಗೆ ಹಿಂದಿರುಗಿಸುತ್ತಾರೆ' ಎಂದರು.

'ಮೊಳಕೆ ಕಾಳುಗಳನ್ನು ವಾಪಸ್ ಭೂಮಿಗೆ ತಂದ ನಂತರ ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಲಾಗುವುದು. ಮೊಳಕೆ ಪ್ರಮಾಣ, ಅವುಗಳ ಪೋಷಕಾಂಶ ಗುಣಮಟ್ಟ, ಫೈಟೋ ಹಾರ್ಮೋನ್‌ಗಳ ಚಟುವಟಿಕೆ, ಜೀವಸೂತ್ರ (ಟ್ರಾನ್ಸ್ ಕ್ರಿಪ್ಟೋಮ್) ಪರೀಕ್ಷಿಸಿ ವಿಶ್ಲೇಷಿಸಲಾಗುವುದು. ಮೊಳಕೆಯ ಮೇಲೆ ಮೈಕ್ರೋಬಿಯಲ್ ಬೆಳವಣಿಗೆ ಅಧ್ಯಯನ ಮಾಡಲಾಗುವುದು' ಎಂದು ಮಾಹಿತಿ ನೀಡಿದರು.



ಪ್ರೊ.ಪಿ.ಎಲ್. ಪಾಟೀಲ

'ಈ ಸಂಶೋಧನಯು ಭವಿಷ್ಯದಲ್ಲಿ ಅಂತರಿಕ್ಷಯಾನದಲ್ಲಿ ಭಾರತೀಯರ ಆಹಾರದ ಭಾಗವಾಗಬಲ್ಲ ಆರೋಗ್ಯಕರ ಸಲಾಡ್ ತರಕಾರಿ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಮೊಳಕೆಯೊಡೆಯುವ ಬೀಜಗಳನ್ನು ಬೆಳೆಸಲು ಕೇವಲ ಕಂಟೇನರ್, ನೀರು ಇದ್ದರೆ ಸಾಕು. ಮೊಳಕೆ ಕಾಳುಗಳು ಪೋಷಕಾಂಶ ಭರಿತವಾಗಿರುತ್ತವೆ. ಗಗನಯಾನ ಮಿಷನ್ ಭವಿಷ್ಯದ ಯಾತ್ರಿಕರ ಆಹಾರ ಗಮನದಲ್ಲಿಟ್ಟುಕೊಂಡು ಈ ಸಂಶೋಧನೆಗೆ ಹೆಸರು, ಮೆಂತ್ಯೆ ಬೀಜಗಳ ಮೊಳಕೆ ಅಧ್ಯಯನ ಆಯ್ಕೆ ಮಾಡಿಕೊಳ್ಳಲಾಗಿದೆ' ಎಂದು ವಿವರಿಸಿದರು.

'ಮೆಂತ್ಯೆ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ. ಎಲುಬಿನ ಆರೋಗ್ಯ ಉತ್ತಮಗೊಳಿಸುತ್ತದೆ. ಮೂತ್ರಕೋಶದಲ್ಲಿ ಕಲ್ಲು ರಚನೆಯ ಅಪಾಯವನ್ನು ಕಡಿಮೆ ಮಾಡುತ್ತದೆ. ಹೃದಯಸಂಬಂಧಿ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಗಗನಯಾತ್ರಿಗಳ ಆರೋಗ್ಯದ ದೃಷ್ಟಿಯಿಂದ ಸಂಶೋಧನೆಗೆ ಈ ಬೀಜಗಳನ್ನು ಆಯ್ಕೆ ಮಾಡಲಾಗಿದೆ' ಎಂದು ಅವರು ತಿಳಿಸಿದರು.



ಗಗನನೌಕೆಯು ಬಾಹ್ಯಾಕಾಶಕ್ಕೆ ಜಿಗಿಯುತ್ತಿದ್ದಂತೆಯೇ ಲಖನೌ ನಲ್ಲಿ ಜನರ ಸಂಭ್ರಮ ಮುಗಿಲು ಮುಟ್ಟಿತ್ತು —ಪಿಟಿಐ ಚಿತ್ರ

ಹೆಮ್ಮೆಯ ಸಂಗತಿ– ರಾಹುಲ್

'ಶುಕ್ಲಾ ಅವರು ಯಶಸ್ವಿಯಾಗಿ ನಭಕ್ಕೆ ಪ್ರಯಾಣ ಬೆಳೆಸಿರುವುದು ಎಲ್ಲ ಭಾರತೀಯರಲ್ಲಿ ಹೆಮ್ಮೆ ತರಿಸಿದೆ. 41 ವರ್ಷಗಳ ಬಳಿಕ ಭಾರತದ ಮತ್ತೊಬ್ಬ ಗಗನಯಾನಿ ಈ ಸಾಧನೆ ಮಾಡಿದ್ದಾರೆ. ಇದು ಭಾರತೀಯರಿಗೆ ಇನ್ನಷ್ಟು ಸ್ಫೂರ್ತಿ ನೀಡಲಿದೆ. ಶುಕ್ಲಾ ಮತ್ತು ಅವರ ತಂಡ ಯಶಸ್ವಿಯಾಗಿ ಹಿಂದಿರುಗಲಿ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ 'ಎಕ್ಸ್'ಪೋಸ್ಟ್‌ನಲ್ಲಿ ಅಭಿನಂದಿಸಿದ್ದಾರೆ.

ಬಾಹ್ಯಾಕಾಶ: ಶುಭಾಂಶು ಶುಭಾರಂಭ

ಒಂದನೇ ಪುಟದಿಂದ...

ಅಮೆರಿಕದ ವಾಣಿಜ್ಯ ಯೋಜನೆಯಾದ ಇದನ್ನು, 'ನಾಸಾ', 'ಆಕ್ಸಿಯಂ ಸ್ಪೇಸ್' ಹಾಗೂ ಇಲಾನ್ ಮಸ್ಕ್ ಒಡೆತನದ 'ಸ್ಪೇಸ್‌ಎಕ್ಸ್' ಜಂಟಿಯಾಗಿ ರೂಪಿಸಿವೆ. ಭಾರತ, ಪೋಲೆಂಡ್, ಹಂಗರಿಯ ಗಗನಯಾನಿಗಳು ನಾಲ್ಕು ದಶಕಗಳ ಬಳಿಕ ಕೈಗೊಂಡಿರುವ ಬಾಹ್ಯಾಕಾಶ ಯಾನ ಇದಾಗಿದೆ. ಇದು ಮೂರೂ ದೇಶಗಳ ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು,ಎರಡ-ನೇ ಮಾನವ ಸಹಿತ ಬಾಹ್ಯಾಕಾಶ ಯಾನವೂ ಆಗಿದೆ.

41 ವರ್ಷಗಳ ಬಳಿಕ ಇತಿಹಾಸ ಸೃಷ್ಟಿ: ಭಾರತದ ರಾಕೇಶ್ ಶರ್ಮಾ ಅವರು ಗಗನಯಾನ ಕೈಗೊಂಡ 41 ವರ್ಷಗಳ ಬಳಿಕ ಭಾರತದ ಮತ್ತೊಬ್ಬ ಗಗನಯಾನಿ ಶುಭಾಂಶು ಶುಕ್ಲಾ ಅವರು ಅಂತರಿಕ್ಷ ಯಾನ ಕೈಗೊಳ್ಳುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ. ಭಾರತದ ಚೊಚ್ಚಲ ಮಾನವಸಹಿತ ಗಗನಯಾನ ಬಾಹ್ಯಾಕಾಶ ಕಾರ್ಯಕ್ರಮವನ್ನು 2027ರಲ್ಲಿ ಕಾರ್ಯಗತಗೊಳಿಸಲು ಭಾರತದ ಬಾಹ್ಯಾಕಾಶ ಸಂಸ್ಥೆ 'ಇಸ್ರೊ' ನಿರ್ಧರಿಸಿದೆ. ಹೀಗಾಗಿ ಶುಕ್ಲಾ ಅವರ ಗಗನಯಾನವು ಭಾರತದ ಮಟ್ಟಿಗೆ ಮಹತ್ವದ್ದಾಗಿದೆ.

ಶುಕ್ಲಾ ತವರಲ್ಲಿ ಸಂಭ್ರಮ

ಶುಕ್ಲಾ ಅವರ ತವರಾದ ಲಖನೌನಲ್ಲಿ ಸಂಭ್ರಮ ಆವರಿಸಿತ್ತು. ಇಲ್ಲಿನ 'ಸಿಟಿ ಮಾಂಟೆಸರಿ ಸ್ಕೂಲ್'ನಲ್ಲಿ ಅವರ ಪೋಷಕರು ಟಿ.ವಿ ಪರದೆಯಲ್ಲಿ ಉಡ್ಡಯನದ ಕ್ಷಣಗಳನ್ನು ಕಣ್ತುಂಬಿಕೊಂಡರು. ಈ ವೇಳೆ ಅಲ್ಲಿ ಸೇರಿದ್ದವರ ಹರ್ಷೋದ್ಗಾರಗಳು ಮೊಳಗಿದವು.

ಸಂಕ್ಷಿಪ್ತ ಸುದ್ದಿ

'ಆಲಮಟ್ಟಿ ಜಲಾಶಯದ ಎತ್ತರ ಸಮಸ್ಯೆ ಆಗದಿರಲಿ'

ವಿಜಯಪುರ: 'ಆಲಮಟ್ಟಿ ಜಲಾಶಯದ ಎತ್ತರದಿಂದ ಏನೂ ಸಮಸ್ಯೆ ಆಗದಿದ್ದರೆ ಒಳ್ಳೆಯದು. ಈ ವಿಷಯದ ಕುರಿತು ಸಮಗ್ರ ಚರ್ಚೆ ಮಾಡಿ ಮುಂದಿನ ಹೆಜ್ಜೆ ಇರಿಸಲಾಗುವುದು' ಎಂದು ಮಹಾರಾಷ್ಟ್ರದ ಜಲ ಸಂರಕ್ಷಣಾ ಸಚಿವ ಸಂಜಯ ರಾಠೋಡ ಹೇಳಿದರು.

ತಿಕೋಟಾ ತಾಲ್ಲೂಕಿನ ಸೋಮದೇವರಹಟ್ಟಿ ತಾಂಡಾದಲ್ಲಿ ಬುಧವಾರ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಅವರು, ಆಲಮಟ್ಟಿ ಜಲಾಶಯದ ಎತ್ತರವನ್ನು ಹೆಚ್ಚಿಸುವ ಕ್ರಮಕ್ಕೆ ಮಹಾರಾಷ್ಟ್ರ ಸರ್ಕಾರದಿಂದ ವಿರೋಧ ವ್ಯಕ್ತವಾದ ವಿಷಯದ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಜಲಾಶಯದ ಎತ್ತರಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರದ ಸಂಪುಟ ಮಟ್ಟದಲ್ಲಿ ಚರ್ಚೆಯಾಗಿದೆ. ಕೆಲ ತಾಂತ್ರಿಕ ವಿಚಾರದಲ್ಲಿ ಸಮಸ್ಯೆ ಇದೆ. ಈ ವಿಚಾರವಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಚರ್ಚೆ ಮಾಡಿ ಮುಂದಿನ ನಿರ್ಣಯ ಮಾಡುತ್ತಾರೆ. ಇದು ಮಹಾರಾಷ್ಟ್ರ ರಾಜ್ಯದ ಪ್ರಶ್ನೆಯಾಗಿದೆ, ಹೀಗಾಗಿ ಸಮಾಲೋಚಿಸಿ ನಿರ್ಣಯ ತೆಗೆದುಕೊಳ್ಳಲಾಗುವುದು' ಎಂದು ಅವರು ಹೇಳಿದರು.

ವಯನಾಡ್‌ನಲ್ಲಿ ಪ್ರವಾಹ ಭೀತಿ

ವಯನಾಡ್ (ಕೇರಳ) (ಪಿಟಿಐ): ವಯನಾಡ್ ಜಿಲ್ಲೆಯ ಮುಂಡಕ್ಕೈ–ಚೂರಲ್‌ಮಲ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದ್ದು, ಸ್ಥಳೀಯರಿಗೆ ಪ್ರವಾಹ ಭೀತಿ ಎದುರಾಗಿದೆ. ಜಿಲ್ಲಾ ಅಧಿಕಾರಿಗಳು ಬುಧವಾರ ಈ ಬಗ್ಗೆ ಮಾಹಿತಿ ನೀಡಿದ್ದು, 'ಚೂರಲ್‌ಮಲ ನದಿಯ ಮಣ್ಣುಮಿಶ್ರಿತ ನೀರು ಬೈಲೆ ಸೇತುವೆ ಬಳಿಯ ನದಿ ದಂಡೆಗಳಲ್ಲಿ ರಭಸವಾಗಿ ಹರಿಯುತ್ತಿದೆ. ನದಿ ಪಾತ್ರದಲ್ಲಿ ದುರಸ್ತಿ ಕಾಮಗಾರಿಗಳಿಗಾಗಿ ಸಂಗ್ರಹಿಸಿದ್ದ ಮಣ್ಣು ಕೂಡ ಕೊಚ್ಚಿ ಹೋಗುತ್ತಿದ್ದು, ಅಟ್ಟಮಲ ರಸ್ತೆ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ನೀರು ಆವರಿಸುತ್ತಿದೆ' ಎಂದಿದ್ದಾರೆ.

ಏತನ್ಮಧ್ಯೆ, ಕಬಿನಿ ನದಿಯಲ್ಲೂ ನೀರಿನ ಮಟ್ಟ ಏರಿಕೆಯಾಗುತ್ತಿದ್ದು, ಬಾಣಾಸುರ ಜಲಾಶಯವು ತುಂಬುವ ಮಟ್ಟಕ್ಕೆ ಬಂದಿರುವ ಕಾರಣದಿಂದ ಸುತ್ತಲಿನ ಪ್ರದೇಶಗಳ ನಿವಾಸಿಗಳಿಗೆ ಎಚ್ಚರಿಕೆ ನೀಡಲಾಗಿದೆ. ವಯನಾಡ್ ಸೇರಿದಂತೆ 11 ಜಿಲ್ಲೆಗಳಲ್ಲಿ ಭಾರಿ ಮಳೆ ಕಾರಣಕ್ಕೆ ಹವಾಮಾನ ಇಲಾಖೆ 'ಆರೆಂಜ್ ಅಲರ್ಟ್' ಕೂಡ ಘೋಷಿಸಿದೆ.

ಸಿ.ಎಂ ಭೇಟಿಯಾದ ಜಮೀರ್, ಶಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಸಂಜೆ ನವದೆಹಲಿಯಿಂದ ತಮ್ಮ ನಿವಾಸ 'ಕಾವೇರಿ'ಗೆ ವಾಪಸಾಗುತ್ತಿದ್ದಂತೆ, ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್‌ಖಾನ್, ಶಾಸಕರಾದ ರಾಜು ಕಾಗೆ ಮತ್ತು ಬಿ.ಆರ್.ಪಾಟೀಲ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

'ವಸತಿ ಇಲಾಖೆಯಲ್ಲಿ ಮನೆ ಹಂಚಿಕೆಗೆ ಲಂಚ ನಡೆಯುತ್ತಿದೆ' ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಆಳಂದ ಶಾಸಕ ಬಿ.ಆರ್. ಪಾಟೀಲ ಮಾಡಿದ್ದ ಆರೋಪಗಳ ಕುರಿತಂತೆ, ಜಮೀರ್ ಅಹಮದ್ ಖಾನ್ ಅವರು ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಸುಮಾರು ಅರ್ಧ ಗಂಟೆ ಚರ್ಚೆ ನಡೆಸಿದರು. ಪಾಟೀಲ ಅವರು ಮಾಡಿದ್ದ ಆರೋಪಗಳ ಬಗ್ಗೆ ಜಮೀರ್ ಅವರಿಂದ ಮುಖ್ಯಮಂತ್ರಿ ವಿವರಣೆ ಪಡೆದರು ಎಂದೂ ಗೊತ್ತಾಗಿದೆ.

ಪಾಟೀಲರು ಆರೋಪ ಮಾಡಿದ್ದ ಬೆನ್ನಿಗೆ, 'ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣವಿಲ್ಲ. ಒಂದು ಕೆಲಸವೂ ಆಗುತ್ತಿಲ್ಲ. ಮುಖ್ಯಮಂತ್ರಿಯನ್ನು ಶೀಘ್ರ ಭೇಟಿಯಾಗಿ ರಾಜೀನಾಮೆ ಬಗ್ಗೆ ನಿರ್ಧರಿಸುವೆ' ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಕಾಗವಾಡ ಶಾಸಕ ರಾಜು ಕಾಗೆ ಆಕ್ರೋಶ ವ್ಯಕ್ತಪಡಿಸಿದ್ದರು. ಮಂಗಳವಾರವೂ ಏರಿದ ಧ್ವನಿಯಲ್ಲಿ ಮಾತನಾಡಿದ್ದ ಅವರು, 'ಸಿದ್ದರಾಮಯ್ಯ ಮೊದಲಿನಂತಿಲ್ಲ' ಎಂದು ಅಸಮಾಧಾನ ಹೊರಹಾಕಿದ್ದರು.

ತಮ್ಮ ಕ್ಷೇತ್ರದ ಅಭಿವೃದ್ಧಿ ಕೆಲಸಗಳ ಕುರಿತಂತೆ ಮಾಡಿದ್ದ ಆರೋಪಗಳ ಬಗ್ಗೆ ಮುಖ್ಯಮಂತ್ರಿ ಜೊತೆ ರಾಜು ಕಾಗೆ ಮತ್ತು ಬಿ.ಆರ್.ಪಾಟೀಲ ಕೆಲಹೊತ್ತು ಸಮಾಲೋಚನೆ ನಡೆಸಿದರು. ಇಬ್ಬರೂ ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೇಳಿಕೊಂಡರು ಎಂದು ಗೊತ್ತಾಗಿದೆ.

ಡಿಕೆಶಿ ಭೇಟಿಯಾದ ಬಿ.ಆರ್. ಪಾಟೀಲ: ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದ ನಿವಾಸದಲ್ಲಿ ಬುಧವಾರ ಸಂಜೆ ಬಿ. ಆರ್. ಪಾಟೀಲ ಅವರು ಭೇಟಿ ಮಾಡಿ ಮಾತುಕತೆ ನಡೆಸಿದರು.

ಅಸಮಾಧಾನ ವ್ಯಕ್ತಪಡಿಸಿದ್ದ ವರಿಷ್ಠರು: ನವದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಮುಖ್ಯಮಂತ್ರಿ ಭೇಟಿ ಮಾಡಿದ್ದರು. ಈ ವೇಳೆ, ಶಾಸಕರ ಬಹಿರಂಗ ಹೇಳಿಕೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ವರಿಷ್ಠರು, ಶಾಸಕರ ಜೊತೆ ಚರ್ಚಿಸಿ, ಗೊಂದಲಗಳನ್ನು ಪರಿಹರಿಸುವಂತೆ ಮುಖ್ಯಮಂತ್ರಿಗೆ ಸೂಚನೆ ನೀಡಿದ್ದರು. ಹೀಗಾಗಿ, ದೆಹಲಿಯಿಂದ ವಾಪಸಾಗುತ್ತಿದ್ದಂತೆ ಸಚಿವರು, ಶಾಸಕರ ಜೊತೆಗೆ ಮುಖ್ಯಮಂತ್ರಿ ಸಮಾಲೋಚನೆ ನಡೆಸಿದರು.

'ಶಾಸಕರು ಬೇಡಿಕೆ ಮಂಡಿಸಿದರೆ ತಪ್ಪೇನು?'

ಬೆಂಗಳೂರು: 'ತಮ್ಮ ಕ್ಷೇತ್ರಗಳಿಗೆ ಅನುದಾನ ಬೇಕೆಂದು ಶಾಸಕರು ಬೇಡಿಕೆ ಮಂಡಿಸಿದರೆ ತಪ್ಪೇನು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಪ್ರಶ್ನಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಕಾರ್ಯಕರ್ತರ ಜೊತೆ ಸಂವಾದ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಇದು ಅಸಮಾಧಾನ ಅಥವಾ ಆಕ್ರೋಶ ಅಲ್ಲ. ಒಬ್ಬೊಬ್ಬರು ಒಂದೊಂದು ರೀತಿ ತಮ್ಮ ಅಹವಾಲು ಪ್ರಸ್ತುತ ಪಡಿಸ ಬಹುದು' ಎಂದರು. 'ಮನೆಯ ಯಜಮಾನನ ಮುಂದೆ ಅಳಲು ತೋಡಿಕೊಳ್ಳುವುದು ತಪ್ಪಾ? ಪ್ರಜಾಪ್ರಭುತ್ವದಲ್ಲಿ ಇದೆಲ್ಲ ಸಹಜ. ನಮ್ಮದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರಜಾ ಸತ್ತಾತ್ಮಕ ಆಡಳಿತ. ಇಲ್ಲಿ ಯಾರೇ ಆಗಲಿ ದನಿ ಎತ್ತಬಹುದು. ಇದು ನರೇಂದ್ರ ಮೋದಿ ರೀತಿಯ ಸರ್ವಾಧಿಕಾರ ಆಡಳಿತ ಅಲ್ಲ' ಎಂದರು.

'ನಮ್ಮ ಸರ್ಕಾರದಲ್ಲಿ ಹಣದ ಕೊರತೆ ಇಲ್ಲ. ಬಿಜೆಪಿಯವರು ಸುಮ್ಮನೇ ಬೊಬ್ಬೆ ಹೊಡೆಯುತ್ತಿದ್ದಾರೆ. ಹಣ ಇಲ್ಲದೇ ಇದ್ದರೆ ಇಷ್ಟೊಂದು ಅಭಿವೃದ್ಧಿ ಕೆಲಸ ಮಾಡಲು ಆಗುತ್ತದೆಯೇ' ಎಂದು ಪ್ರಶ್ನಿಸಿದರು.

ಸಿಬಿಎಸ್‌ಇ 10ನೇ ತರಗತಿ: 2026ರಿಂದ ವರ್ಷಕ್ಕೆ 2 ಪರೀಕ್ಷೆ

ನವದೆಹಲಿ (ಪಿಟಿಐ): 2026ನೇ ಶೈಕ್ಷಣಿಕ ವರ್ಷದಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಒಂದು ವರ್ಷದಲ್ಲಿ ಎರಡು ಬಾರಿ ಬೋರ್ಡ್ ಪರೀಕ್ಷೆ ನಡೆಸಲು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ನಿರ್ಧರಿಸಿದೆ.

ಫೆಬ್ರುವರಿಯಲ್ಲಿ ಮೊದಲ ಹಾಗೂ ಮೇ ತಿಂಗಳಲ್ಲಿ ಎರಡನೇ ಪರೀಕ್ಷೆ ನಡೆಯಲಿವೆ. ಮೊದಲ ಹಂತದ ಪರೀಕ್ಷೆಯನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ಬರೆಯಬೇಕು. ಎರಡನೇ ಹಂತದ ಪರೀಕ್ಷೆ ಐಚ್ಛಿಕವಾಗಿದ್ದು, ಅಂಕ ಹೆಚ್ಚಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳು ಇದಕ್ಕೆ ಹಾಜರಾಗಬಹುದು. ವಿದ್ಯಾರ್ಥಿಗಳು ಯಾವುದಾದರೂ ಮೂರು ವಿಷಯಗಳನ್ನು ಆಯ್ದುಕೊಂಡು ಪರೀಕ್ಷೆ ಬರೆಯಬಹುದು ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ. ಎರಡೂ ಪರೀಕ್ಷೆಗಳ ಫಲಿತಾಂಶಗಳು ಕ್ರಮವಾಗಿ ಏಪ್ರಿಲ್ ಮತ್ತು ಜೂನ್‌ನಲ್ಲಿ ಪ್ರಕಟವಾಗಲಿವೆ. ಶೈಕ್ಷಣಿಕ ವರ್ಷದಲ್ಲಿ ಒಂದು ಬಾರಿ ಮಾತ್ರವೇ ಆಂತರಿಕ ಮೌಲ್ಯಮಾಪನ ನಡೆಯಲಿದೆ ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕ ಸನ್ಯಮ್ ಭಾರದ್ವಾಜ್ ತಿಳಿಸಿದರು.

ನೂತನ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಈ ಕ್ರಮವನ್ನು ಶಿಫಾರಸು ಮಾಡಲಾಗಿದೆ. ಹೊಸ ನೀತಿಯ ಕರಡನ್ನು ಫೆಬ್ರುವರಿಯಲ್ಲಿ ಪ್ರಕಟಿಸಲಾಗಿತ್ತು. ಪ್ರತಿಕ್ರಿಯೆಗಳಿಗಾಗಿ ಅದನ್ನು ಸಾರ್ವಜನಿಕರ ಅವಗಾಹನೆಗೆ ಒದಗಿಸಲಾಗಿತ್ತು. ಹೊಸ ನಿಯಮಗಳ ಪ್ರಕಾರ, ಅತಿಯಾದ ಚಳಿ ಇರುವ ಪ್ರದೇಶಗಳಲ್ಲಿನ ಶಾಲೆಗಳ ವಿದ್ಯಾರ್ಥಿಗಳಲ್ಲಿ ಎರಡರ ಪೈಕಿ ಯಾವುದಾದರೂ ಒಂದು ಪರೀಕ್ಷೆಗೆ ಹಾಜರಾಗಲು ಅವಕಾಶ ಇರಲಿದೆ.

'ಪ್ರತಿ ಜಿಲ್ಲೆಗೆ ಟ್ರಾಮಾ ಸೆಂಟರ್, ಕ್ಯಾನ್ಸರ್ ಆಸ್ಪತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿ ಜಿಲ್ಲೆಯಲ್ಲಿ ಮೂರು ವರ್ಷದ ಒಳಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಸೆಂಟರ್, ಕ್ಯಾನ್ಸರ್ ಆಸ್ಪತ್ರೆ, ಹೃದ್ರೋಗ ಚಿಕಿತ್ಸಾ ಆಸ್ಪತ್ರೆ ನಿರ್ಮಿಸಲಾಗುವುದು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಹುಬ್ಬಳ್ಳಿ ಮತ್ತು ಬೆಳಗಾವಿ ಭಾಗದಲ್ಲಿ ಶೀಘ್ರದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ಶಾಖೆ ಆರಂಭಿಸಲಾಗುವುದು' ಎಂದರು.

ಸೀಟ್ ಬ್ಲಾಕಿಂಗ್ ಇಲ್ಲ: 'ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಶೇ 100ರಷ್ಟು ಪಾರದರ್ಶಕತೆ ಇದೆ. ಯಾವುದೇ ಸೀಟ್ ಬ್ಲಾಕಿಂಗ್ ಇಲ್ಲ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೆರಿಟ್ ಆಧಾರದಲ್ಲಿ ವೈದ್ಯಕೀಯ ಸೀಟು ಹಂಚಿಕೆ ಮಾಡುತ್ತದೆ. 800 ವೈದ್ಯಕೀಯ ಸೀಟು ಹೆಚ್ಚಳಕ್ಕೆ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದರು.

'ರಾಜ್ಯದಾದ್ಯಂತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಮಾಡಲು ಆರಂಭಿಸಿದ್ದೇವೆ. ಕಲಬುರಗಿ, ಧಾರವಾಡ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಕಾರ್ಯಾರಂಭ ಆಗಿದೆ. ಜಯದೇವ ಆಸ್ಪತ್ರೆಯನ್ನು ಕಲಬುರಗಿಯಲ್ಲಿ ಉದ್ಘಾಟಿಸಿದ್ದೇವೆ. ಮೈಸೂರಿನಲ್ಲಿ ಜಯದೇವ ಆಸ್ಪತ್ರೆ ಇದೆ. ಹುಬ್ಬಳ್ಳಿಯಲ್ಲಿ ಮುಂದಿನ ವರ್ಷ 400 ಹಾಸಿಗೆಗಳ ಜಯದೇವ ಆಸ್ಪತ್ರೆ ಉದ್ಘಾಟಿಸಲಿದ್ದೇವೆ' ಎಂದರು.

'ಯುವ ನಿಧಿ ಗ್ಯಾರಂಟಿ ಯೋಜನೆಯಲ್ಲಿ 2.86 ಲಕ್ಷ ಮಂದಿ ನೋಂದಣಿಯಾಗಿದ್ದಾರೆ. ಈ ಯೋಜನೆಯನ್ನು ಇನ್ನಷ್ಟು ಸಮರ್ಪಕವಾಗಿ ಜಾರಿಗೆ ತರಲು ಕೆಲವು ಸುಧಾರಣೆ ಗಳನ್ನು ತರುತ್ತಿದ್ದೇವೆ' ಎಂದೂ ತಿಳಿಸಿದರು.

ಕಾವೇರಿ ಕಣಿವೆ: ಪ್ರವಾಹದ ಆತಂಕ

ಧಾರಾಕಾರ ಮಳೆ: ಉಕ್ಕಿ ಹರಿದ ನದಿಗಳು ಬೆಳಗಾವಿ ಜಿಲ್ಲೆಯ 16 ಸೇತುವೆಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಮೈಸೂರು/ ಚಿಕ್ಕಮಗಳೂರು: ಹಾಸನ , ಮೈಸೂರು, ಮತ್ತು ಕೊಡಗು ಜಿಲ್ಲೆಗಳಲ್ಲಿ ಬುಧವಾರ ಜೋರು ಮಳೆಯಾಗಿದೆ. ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಬಿ.ಶೆಟ್ಟಿಗೇರಿಯಲ್ಲಿ ಬುಧವಾರ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ 20 ಸೆಂ.ಮೀನಷ್ಟು ಭಾರಿ ಮಳೆ ಸುರಿದಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ತಿಳಿಸಿವೆ.

ಬಹುತೇಕ ಭಾಗಗಳಲ್ಲಿ ನದಿಗಳು ಉಕ್ಕಿ ಹರಿಯುತ್ತಿವೆ. ಜಲಾ ಶಯಗಳು ಭರ್ತಿಯಾಗುತ್ತಿದ್ದು, ಹೆಚ್ಚಿನ ಪ್ರಮಾಣದ ನೀರನ್ನು ನದಿಗೆ ಹರಿಸುತ್ತಿರುವುದರಿಂ-ದಾಗಿ ಪ್ರವಾಹದ ಆತಂಕ ಮನೆಮಾಡಿದೆ. ಕಾವೇರಿ, ಕಪಿಲಾ ನದಿ ದಂಡೆಯಲ್ಲಿರುವ ಜನರಿಗೆ ಕಾವೇರಿ ನೀರಾವರಿ ನಿಗಮವು ಮುನ್ನೆಚ್ಚರಿಕೆ ನೀಡಿದೆ.

ಕೊಡಗಿನ ಸೋಮವಾರಪೇಟೆ, ವಿರಾಜಪೇಟೆ, ಮಡಿಕೇರಿ, ಪೊನ್ನಂಪೇಟೆಯ ತಗ್ಗು ಪ್ರದೇಶಗಳು ಹಾಗೂ ಗುಡ್ಡದ ಕೆಳಗೆ ವಾಸಿಸುವ ಜನರಲ್ಲಿ ಆತಂಕ ಮೂಡಿದೆ. ಎನ್‌ಡಿಆರ್‌ಎಫ್ ಸಹಾಯಕ ಕಮಾಂಡೆಂಟ್ ಕಿರಣ್ ಕುಮಾರ್ ಅವರು ಭೂಕುಸಿತದ ಅಪಾಯವುಳ್ಳ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಕಳಸ, ಕೊಪ್ಪ, ಶೃಂಗೇರಿ, ಚಿಕ್ಕಮಗಳೂರು, ಮುಳ್ಳಯ್ಯನ ಗಿರಿ ಸುತ್ತಮುತ್ತ ಮಳೆ ಜೋರಾಗಿತ್ತು.

ದೋಣಿ ವಿಹಾರ ಸ್ಥಗಿತ: ನಿಷೇಧಾಜ್ಞೆ

ಕಾವೇರಿ ನದಿ ತೀರದ ಅಪಾಯಕಾರಿ ಸ್ಥಳಗಳಲ್ಲಿ ಬುಧವಾರ ಬೆಳಿಗ್ಗೆ 6 ಗಂಟೆಯಿಂದ ಅನಿರ್ದಿಷ್ಟಾ-ವಧಿಗೆ ನಿಷೇಧಾಜ್ಞೆ ಜಾರಿಯಾಗಿದೆ.

ರಂಗನತಿಟ್ಟು ಪಕ್ಷಿಧಾಮದಲ್ಲಿ ನದಿಯ ನೀರಿನ ಮಟ್ಟ ಏರಿಕೆಯಾಗುತ್ತಿರುವುದರಿಂದ ಮಂಗಳವಾರ ಸಂಜೆಯಿಂದ ದೋಣಿ ವಿಹಾರವನ್ನು ಸ್ಥಗಿತಗೊಳಿಸಲಾಗಿದೆ. ಪ್ರವಾಸಿಗರಿಗೆ ಪಕ್ಷಿ ವೀಕ್ಷಣೆಗೆ ಮಾತ್ರ ಅವಕಾಶವಿದೆ.

ಗುರುವಾರ (ಜೂನ್ 26) ಕೊಡಗು ಜಿಲ್ಲೆಯ (ಕುಶಾಲನಗರ ಹೊರತುಪಡಿಸಿ) ಎಲ್ಲ ಅಂಗನವಾಡಿ, ಪ್ರಾಥಮಿಕ, ಪ್ರೌಢಶಾಲೆಗಳಿಗೆ ಹಾಗೂ ಪಿಯು ಕಾಲೇಜುಗಳಿಗೆ ರಜೆ ನೀಡಲಾಗಿದೆ.

ಬೆಳಗಾವಿ ವರದಿ: ಬೆಳಗಾವಿ, ಖಾನಾಪುರ ಹಾಗೂ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಅಂಗನವಾಡಿ ಕೇಂದ್ರಗಳು, ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಜೂನ್ 26ರಂದು ರಜೆ ಘೋಷಿಸಲಾಗಿದೆ.

ಬೆಳಗಾವಿ ಜಿಲ್ಲೆ ಹಾಗೂ ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಬುಧವಾರವೂ ಧಾರಾಕಾರ ಮಳೆ ಸುರಿದಿದ್ದು, ಜಿಲ್ಲೆಯ 16 ಸೇತುವೆಗಳು ಜಲಾವೃತಗೊಂಡಿವೆ. ಬೀದರ್, ಕಲಬುರಗಿಯಲ್ಲೂ ಮಳೆಯಾಗಿದೆ.



ಮಲಪ್ರಭಾ ನದಿ ತೀರದಲ್ಲಿರುವ ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಹಬ್ಬನಹಟ್ಟಿಯ ಆಂಜನೇಯ ದೇವಾಲಯ ಬುಧವಾರ ಮುಳುಗಡೆಯಾಗಿದೆ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	120.91	30,750	35,936
ಹಾರಂಗಿ	2,859	2,851.75	9,500	10,000
ಕಬಿನಿ	2,284.00	2,278.90	20,225	25,000
ಹೇಮಾವತಿ	2,922	2,915.50	14,985	15,700
ಲಿಂಗನಮಕ್ಕಿ	1,819	1,778.95	46,219	4,039
ಸೂಪಾ (ಮೀ)	564	534.12	29,525	723.61
ಮಾಣಿ	595	581.87	6,812	-
ತುಂಗಭದ್ರಾ	1,633	1,615.79	24,115	197
ಮಲಪ್ರಭಾ	2,079.5	2,056.68	7,014	194
ಘಟಪ್ರಭಾ	2175	2,130	26,420	134
ಭದ್ರಾ *	186	155	16,039	1,282
ಆಲಮಟ್ಟಿ (ಮೀ)	519.6	516.33	70,435	70,435
ನಾರಾಯಣಪುರ (ಮೀ)	492.25	490.70	70,000	59,180

* ನೆಲಮಟ್ಟದಿಂದ

ಎಲ್ಲ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯಾಗಾರ

ಸಿಇಟಿ: 28ಕ್ಕೆ 'ಸೀಟು ಹಂಚಿಕೆ ಮಂಥನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ವರ್ಷದ ಸಿಇಟಿ ಅಭ್ಯರ್ಥಿಗಳು ಹಾಗೂ ಪೋಷಕರಿಗೆ ಸೀಟು ಹಂಚಿಕೆ ವಿಧಾನದ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜೂನ್ 28ರಂದು ರಾಜ್ಯದ ಎಲ್ಲ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ 'ಸೀಟು ಹಂಚಿಕೆ ಮಂಥನ' ಕಾರ್ಯಾಗಾರ ಆಯೋಜಿಸಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದ 16 ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, 8 ಅನುದಾನಿತ, 6 ವಿಟಿಯು ಸಂಯೋಜಿತ ಎಂಜಿನಿಯರಿಂಗ್ ಕಾಲೇಜುಗಳು ಹಾಗೂ 9 ಜಿಲ್ಲೆಗಳ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪೋಷಕರು, ವಿದ್ಯಾರ್ಥಿಗಳ ಅನುಮಾನಗಳಿಗೆ ಪರಿಹಾರ ಲಭಿಸಲಿದೆ ಎಂದರು.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಇಲ್ಲದ ಚಿಕ್ಕಮಗಳೂರು, ಹುಬ್ಬಳ್ಳಿ (ಧಾರವಾಡ ಜಿಲ್ಲೆ), ಕೆ.ಜಿ.ಎಫ್ (ಕೋಲಾರ), ಮಂಗಳೂರು, ಶಿವಮೊಗ್ಗ, ತುಮಕೂರು, ಉಡುಪಿ, ವಿಜಯಪುರ, ಸುರಪುರ (ಯಾದಗಿರಿ) ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದು ವಿವರ ನೀಡಿದರು.

ಕೌನ್ಸೆಲಿಂಗ್ ಹೇಗೆ ನಡೆಯುತ್ತದೆ? ಕಾಲೇಜು ಆಯ್ಕೆ ಹೇಗೆ? ಆಪ್ಷನ್ ಎಂಟ್ರಿ ಯಾವ ರೀತಿ ಮಾಡಬೇಕು? ಇಂತಹ ಪ್ರಶ್ನೆಗಳಿಗೆ ಉತ್ತರ ದೊರೆಯಲಿದೆ. ಮಧ್ಯವರ್ತಿಗಳ ಹಾವಳಿ ತಪ್ಪಿಸಲು, ಮೋಸದ ಜಾಲಗಳನ್ನು ನಿಯಂತ್ರಿಸಲು ಪೋಷಕರು ಹಾಗೂ ವಿದ್ಯಾರ್ಥಿ ಸಮುದಾಯದಕ್ಕೆ ಸ್ಪಷ್ಟ ಹಾಗೂ ನಿಖರ ಮಾಹಿತಿ ನೀಡುವ ಅಗತ್ಯವಿದೆ. ಈ ಕಾರಣಕ್ಕೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ತಿದ್ದುಪಡಿಗೆ ಅಂತಿಮ ಅವಕಾಶ

ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ತಮ್ಮ ಮೀಸಲು ಬೇಡಿಕೆಗಳಲ್ಲಿನ ಲೋಪಗಳ ತಿದ್ದುಪಡಿಗೆ ಜುಲೈ 2ರಿಂದ ಮೂರು ದಿನ ಅವಕಾಶ ನೀಡಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.


ಮೀಸಲಾತಿ, ಪ್ರವರ್ಗ, ಗ್ರಾಮೀಣ, ಭಾಷಾ ಅಲ್ಪಸಂಖ್ಯಾತರ ಕೋಟಾ ಇತ್ಯಾದಿ ಮೀಸಲು ಕೋಟಾದ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕು. ಜೂನ್ 26ರಂದು ಸ್ಲಾಟ್ ಬುಕ್ಕಿಂಗ್‌ಗೆ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ನೀಡಿದ್ದಾರೆ. ಜುಲೈ 2ರಿಂದ 4ರವರೆಗೆ ಅಭ್ಯರ್ಥಿಗಳು ಖುದ್ದು ಕೆಇಎ ಕಚೇರಿಗೆ ಬಂದೇ ದೋಷಗಳನ್ನು ಸರಿಪಡಿಸಿಕೊಳ್ಳಬೇಕು. ಬರುವುದಕ್ಕೂ ಮೊದಲು ಮುಂಗಡವಾಗಿ ದಿನಾಂಕ ನಿಗದಿಪಡಿಸಿಕೊಂಡು ಬರಬೇಕು ಎಂದು ಹೇಳಿದ್ದಾರೆ.

ದುಡ್ಡಿನಂಥಾ ಮಾತು

ಹೂಡಿಕೆ ಮಾಡುವುದು ಅಂದರೆ ವಿಶ್ವಾಸದ ಆಧಾರದಲ್ಲಿ ಮೂಡಿದ ಬದ್ಧತೆಗಳನ್ನು ತೋರಿಸುವ ಕೆಲಸ. ಈಗಿನ ಖರೀದಿಯೊಂದನ್ನು ಭವಿಷ್ಯದ ಉದ್ದೇಶಕ್ಕಾಗಿ ಮುಂದಕ್ಕೆ ಹಾಕಲು ಮನಸ್ಸು ಮಾಡುವ ಕೆಲಸ ಅದು.

ಪರಾಗ್ ಪಾರೀಖ್, ಲೇಖಕ, ಹೂಡಿಕೆದಾರ

ಅಲ್ಪಾವಧಿ ಏರಿಳಿತ
ಹೂಡಿಕೆದಾರರಲ್ಲಿ ಆತಂಕವೇಕೆ?



ಜಾಗತಿಕ ಮಟ್ಟದಲ್ಲಿ ಯುದ್ಧಗಳು ನಡೆದಾಗ, ಷೇರುಪೇಟೆಯಲ್ಲಿ ಷೇರುಗಳ ಮೌಲ್ಯವು ದುಬಾರಿ ಎಂದು ಹೂಡಿಕೆದಾರರಿಗೆ ಅನ್ನಿಸಿದಾಗ ಷೇರುಪೇಟೆ ಸೂಚ್ಯಂಕಗಳು ಇಳಿಜಾರಿನ ಹಾದಿಹಿಡಿಯುವುದು ಸಹಜ. ಆದರೆ ಅಂತಹ ಸಂದರ್ಭಗಳು ಎದುರಾದಾಗ ದೀರ್ಘಾವಧಿ ಹೂಡಿಕೆದಾರರು ಅಧೀರರಾಗಬೇಕಿಲ್ಲ. ಕುಸಿತವು ಖರೀದಿಗೆ ಸಿಗುವ ಉತ್ತಮ ಅವಕಾಶ!

• ವಿ.ಕೆ. ವಿಜಯಕುಮಾರ್

ದೇಶದ ಷೇರುಪೇಟೆಗಳ ಮೇಲೆ ಏಪ್ರಿಲ್ ತಿಂಗಳಲ್ಲಿ ಹಾಗೂ ಮೇ ತಿಂಗಳ ಆರಂಭದಲ್ಲಿ ಬಹಳ ದೊಡ್ಡದಾದ ಬಿರುಗಾಳಿಯೊಂದು ಅಪ್ಪಳಿಸಿತು. ದುರದೃಷ್ಟದ ಸಂಗತಿಯೆಂದರೆ ಈ ಬಿರುಗಾಳಿಯು ಜೂನ್ ತಿಂಗಳಿನಲ್ಲಿಯೂ ಮುಂದುವರಿಯಿತು.

ಇವೆಲ್ಲ ಆರಂಭವಾಗಿದ್ದು ಏಪ್ರಿಲ್ 2ರಂದು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಆ ದಿನ, ಅಮೆರಿಕದ ವಾಣಿಜ್ಯ ಪಾಲುದಾರ ದೇಶಗಳ ಮೇಲೆ ವಿವಾದಿತ 'ಪ್ರತಿಸುಂಕ'ವನ್ನು ಪ್ರಕಟಿಸಿದರು. ಈ ಘೋಷಣೆ ಆದ ನಂತರ ವಿಶ್ವದಾದ್ಯಂತ ಷೇರುಪೇಟೆಗಳು ಕುಸಿತ ಕಂಡವು. ಆದರೆ ಟ್ರಂಪ್ ನೇತೃತ್ವದ ಆಡಳಿತಕ್ಕೆ ಸಾಲಪತ್ರಗಳ ಮಾರುಕಟ್ಟೆಯಿಂದ ಅನಿರೀಕ್ಷಿತವಾದ ಅಡ್ಡಿ ಎದುರಾಯಿತು. ಈ ಅಡ್ಡಿಯ ಕಾರಣದಿಂದಾಗಿ ಅಮೆರಿಕದ ಅಧ್ಯಕ್ಷರು 'ಪ್ರತಿಸುಂಕ' ವಿಧಿಸುವ ಕ್ರಮವನ್ನು 90 ದಿನಗಳ ಮಟ್ಟಿಗೆ ತಡೆಹಿಡಿದರು. ಇದಾದ ನಂತರ ಷೇರುಪೇಟೆಗಳು ಚೇತರಿಕೆಯ ಹಾದಿಗೆ ಮರಳಿದವು.

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯ ನಂತರದ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷವು ಷೇರುಪೇಟೆಗಳ ಮೇಲೆ ಅಲ್ಪ ಅವಧಿಗೆ ಪರಿಣಾಮ ಉಂಟುಮಾಡಿತು. ದೇಶದ ರಕ್ಷಣಾ ಪಡೆಗಳು ತೋರಿದ ಶೌರ್ಯದ ಕಾರಣದಿಂದಾಗಿ ದೊರೆತ ನೈತಿಕ ಸ್ಥೈರ್ಯವು, ನಿಫ್ಟಿ ಸೂಚ್ಯಂಕವು ಮೇ 11ರಂದು ರಾಕೆಟ್ ವೇಗದಲ್ಲಿ ಮೇಲಕ್ಕೆ ಜಿಗಿಯುವಂತೆ ಮಾಡಿತು. ಆ ದಿನ ನಿಫ್ಟಿ ಸೂಚ್ಯಂಕ ಶೇ 3.82ರಷ್ಟು ಏರಿಕೆ ಕಂಡಿತು. ಇಡೀ ಮಾರುಕಟ್ಟೆಯು ಅಂದು ಶೇ 4ರಷ್ಟು ಏರಿಕೆ ಕಂಡಿತು. ಇದು ನಾಲ್ಕು ವರ್ಷಗಳಲ್ಲಿ ಕಂಡ ಅತ್ಯುತ್ತಮ ಏರಿಕೆ ಆಗಿತ್ತು.

ಈ ನಡುವೆ ರಷ್ಯಾ ಮತ್ತು ಉಕ್ರೇನ್ ನಡುವಿನ ಸಮರ ಹಾಗೂ ಗಾಜಾದಲ್ಲಿನ ಸಂಘರ್ಷ ಮುಂದುವರಿದಿವೆ. ಆದರೆ ಈ ಜಾಗತಿಕ ಬಿಕ್ಕಟ್ಟುಗಳು ಷೇರುಪೇಟೆಗಳ ಮೇಲೆ ಗಣನೀಯ ಪರಿಣಾಮ ಉಂಟುಮಾಡಿಲ್ಲ. ಕಚ್ಚಾ ತೈಲದ ಬೆಲೆಯು ಕಡಿಮೆ ಮಟ್ಟದಲ್ಲಿಯೇ ಇದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 67.30 ಡಾಲರ್‌ನಷ್ಟು ಇದೆ. ಆದರೆ ಇಸ್ರೇಲ್ ಸೇನೆಯು ಇರಾನ್ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ದೊಡ್ಡ ಕಂಪನ ಸೃಷ್ಟಿಯಾಯಿತು. ಆ ಸಂದರ್ಭದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಸರಿಸುಮಾರು ಶೇ 10ರಷ್ಟು ಏರಿಕೆ ಕಂಡು, ಪ್ರತಿ ಬ್ಯಾರೆಲ್‌ಗೆ 75 ಡಾಲರ್‌ಗೆ ತಲುಪಿತ್ತು. ಹೀಗಿದ್ದರೂ ನಂತರದಲ್ಲಿ ಅದರ ಬೆಲೆಯು ಇಳಿಕೆ ಆಗಿದೆ.

ಇರಾನ್ ಮತ್ತು ಇಸ್ರೇಲ್ ನಡುವಿನ ಸಮರವು ಇನ್ನಷ್ಟು ತೀವ್ರಗೊಳ್ಳುತ್ತದೆಯೇ, ಅದು ಇನ್ನಷ್ಟು ವಿಸ್ತರಣೆ ಕಾಣುತ್ತದೆಯೇ ಎಂಬ ಪ್ರಶ್ನೆ ಇತ್ತು. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಇನ್ನಷ್ಟು ತೀವ್ರಗೊಂಡರೆ, ಅದು ಹೊರ್ಮುಜ್ ಜಲಸಂಧಿ ಬಂದ್ ಆಗುವುದಕ್ಕೆ ದಾರಿ ಮಾಡಿಕೊಡಬಹುದು, ಕಚ್ಚಾ ತೈಲದ ಬೆಲೆಯಲ್ಲಿ ದೊಡ್ಡ ಏರಿಕೆ ಆಗಬಹುದು ಎಂಬ ಭೀತಿ ಎದುರಾಗಿತ್ತು. ಆ ರೀತಿ ಆಗಿದ್ದಿದ್ದರೆ ಷೇರುಪೇಟೆಗಳ ಮೇಲೆ ದೊಡ್ಡ ಪರಿಣಾಮ ಉಂಟಾಗುತ್ತಿತ್ತು. ಆದರೆ ಈಗ ಇರಾನ್ ಮತ್ತು ಇಸ್ರೇಲ್ ನಡುವೆ ಕದನ ವಿರಾಮ ಘೋಷಣೆ ಆಗಿದೆ, ಭೀತಿಯು ದೂರವಾಗಿದೆ. ಹೀಗಾಗಿ, ಷೇರುಪೇಟೆಗಳ ಮುನ್ನೋಟವು ಬಹಳ ಸಕಾರಾತ್ಮಕವಾಗಿದೆ.


ಲೇಖಕ ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಮುಖ್ಯ ಹೂಡಿಕೆ ತಜ್ಞ

ಭಾರತದ ಷೇರುಪೇಟೆ ದುಬಾರಿ ಆಗಿದೆಯೇ?

ದೇಶದ ಅರ್ಥ ವ್ಯವಸ್ಥೆಯು ಸುಸ್ಥಿತಿಯಲ್ಲಿ ಇದೆ. ಅರ್ಥ ವ್ಯವಸ್ಥೆಯ ಆರೋಗ್ಯವನ್ನು ಹೇಳುವ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರ, ಹಣದುಬ್ಬರ ದರ, ವಿತ್ತೀಯ ಕೊರತೆ ಪ್ರಮಾಣ, ಚಾಲ್ತಿ ಖಾತೆ ಕೊರತೆ, ವಿದೇಶಿ ವಿನಿಮಯ ಮೀಸಲು... ಇವೆಲ್ಲ ಸುಸ್ಥಿತಿಯಲ್ಲಿ ಇವೆ. ಆದರೆ ಕಂಪನಿಗಳ ವರಮಾನ ಹೆಚ್ಚಳವು ಮಂದಗತಿಯಲ್ಲಿ ಇರುವುದೊಂದೇ ದೊಡ್ಡ ಸಮಸ್ಯೆ. ಸತತ ಮೂರು ವರ್ಷಗಳ ಅವಧಿಗೆ ಕಂಪನಿಗಳ ವರಮಾನ ಹೆಚ್ಚಳದ ಪ್ರಮಾಣವು ಶೇ 20ಕ್ಕಿಂತ ಜಾಸ್ತಿ ಇತ್ತು. ಆದರೆ ಈ ಪ್ರಮಾಣವು 2024–25ನೇ ಆರ್ಥಿಕ ವರ್ಷದಲ್ಲಿ ಶೇ 5ಕ್ಕೆ ಕುಸಿದಿದೆ. ನಿಫ್ಟಿ–50 ಸೂಚ್ಯಂಕದಲ್ಲಿನ ಕಂಪನಿಗಳ ವರಮಾನ ಏರಿಕೆಯು ಸರಾಸರಿ ಶೇ 1ರಷ್ಟು ಮಾತ್ರ ಆಗಿದೆ.

ಕಂಪನಿಗಳ ವರಮಾನದಲ್ಲಿನ ಏರಿಕೆಯು ಹೆಚ್ಚಿನ ಮಟ್ಟದಲ್ಲಿ ಇಲ್ಲದಿರುವುದು ಷೇರುಗಳ ಮೌಲ್ಯವನ್ನು ದುಬಾರಿ ಆಗಿಸಿದೆ. 24,600ರ ಮಟ್ಟದಲ್ಲಿ ನಿಫ್ಟಿ ಸೂಚ್ಯಂಕವು, ಕಂಪನಿಗಳ 2025–26ನೆಯ ಹಣಕಾಸು ವರ್ಷದ ಅಂದಾಜು ವರಮಾನಕ್ಕಿಂತ 22 ಪಟ್ಟು ಹೆಚ್ಚಿನ ಮೌಲ್ಯ ಹೊಂದಿದಂತೆ ಆಗಿದೆ. ಇದು ಕಳೆದ 10 ವರ್ಷಗಳ ಸರಾಸರಿ ಮೌಲ್ಯವಾದ 18.5ಕ್ಕಿಂತ ಬಹಳ ಹೆಚ್ಚು. ಮಾರುಕಟ್ಟೆಯಲ್ಲಿ ಷೇರುಗಳ ಮೌಲ್ಯವು ದುಬಾರಿ ಆಗಿರುವ ಕಾರಣಕ್ಕೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಷೇರು ಮಾರಾಟಕ್ಕೆ ಮುಂದಾಗುವ ಅಪಾಯ ಇದೆ.

ಹೀಗಾಗಿ, ಹೂಡಿಕೆದಾರರು 2025ರಲ್ಲಿ ದೊಡ್ಡ ಮಟ್ಟದ ಲಾಭದ ನಿರೀಕ್ಷೆಯನ್ನು ಹೊಂದಬಾರದು. ಜಾಗತಿಕ ಮಟ್ಟದಲ್ಲಿನ ನಕಾರಾತ್ಮಕ ಸಂಗತಿಗಳು ಹಾಗೂ ಕಂಪನಿಗಳ ವರಮಾನದಲ್ಲಿನ ಏರಿಕೆಯು ಅಷ್ಟೇನೂ ದೊಡ್ಡ ಮಟ್ಟದಲ್ಲಿ ಇಲ್ಲದಿರುವುದು ಷೇರು-ಪೇಟೆಗಳಲ್ಲಿ ಸ್ಥಿರವಾದ ಏರಿಕೆ ಸಾಧ್ಯವಾಗದಂತೆ ಮಾಡುತ್ತವೆ.



ಭವಿಷ್ಯ ಉಜ್ವಲವಾಗಿದೆ

ಹೀಗಿದ್ದರೂ, ಅಲ್ಪಾವಧಿಯಲ್ಲಿ ಕಾಣುವ ಅನಿಶ್ಚಿತತೆಗಳು ದೀರ್ಘಾವಧಿ ಹೂಡಿಕೆದಾರರ ತಲೆಬಿಸಿಗೆ ಕಾರಣವಾಗಬಾರದು. ಪ್ರಗತಿಯ ಪಥದಲ್ಲಿ ಭಾರತವು ಮಹತ್ವದ ಪರಿವರ್ತನೆಯ ಪರ್ವ-ಕಾಲದಲ್ಲಿ ಇದೆ, ಭಾರತವು ಆರ್ಥಿಕ ಶಕ್ತಿಕೇಂದ್ರವಾಗಿ ಬೆಳೆಯುವ ಕಾಲಘಟ್ಟದಲ್ಲಿ ಇದೆ. ಭಾರತವು ಈಗ ವಿಶ್ವದ ನಾಲ್ಕನೆಯ ಅತಿದೊಡ್ಡ ಅರ್ಥ ವ್ಯವಸ್ಥೆ ಆಗಿದೆ. 2027–28ನೆಯ ಆರ್ಥಿಕ ವರ್ಷದಲ್ಲಿ ಭಾರತವು ವಿಶ್ವದ ಮೂರನೆಯ ಅತಿದೊಡ್ಡ ಅರ್ಥವ್ಯವ-ಸ್ಥೆ ಆಗುವ ನಿರೀಕ್ಷೆ ಇದೆ.

ಊಹಿಸಲು ಸಾಧ್ಯವಾಗದ ಸಂದರ್ಭಗಳು ಎದುರಾಗದೆ ಇದ್ದರೆ, 2032ರ ವೇಳೆಗೆ ಭಾರತದ ಅರ್ಥವ್ಯವಸ್ಥೆಯ ಗಾತ್ರವು 8 ಟ್ರಿಲಿಯನ್ ಡಾಲರ್ ಆಗಿರಲಿದೆ. ಭಾರತದ ಬಂಡವಾಳ ಮಾರುಕಟ್ಟೆಗಳ ಮೌಲ್ಯವು 10 ಟ್ರಿಲಿಯನ್ ಡಾಲರ್ ಆಗಲಿದೆ. ಇವುಗಳಿಗಿಂತ ಮುಖ್ಯವಾಗಿ, ಭಾರತದ ಷೇರು ಮಾರುಕಟ್ಟೆಗಳು ಕಳೆದ 20 ವರ್ಷಗಳ ಅವಧಿಯಲ್ಲಿ ಜಗತ್ತಿನಲ್ಲಿ ಎರಡನೆಯ ಅತ್ಯುತ್ತಮ ಪ್ರಮಾಣದ ಗಳಿಕೆ ತಂದುಕೊಟ್ಟಿವೆ.

ಭಾರತದ ಅರ್ಥ ವ್ಯವಸ್ಥೆ ಹಾಗೂ ಷೇರುಪೇಟೆಗಳ ಭವಿಷ್ಯ ಉಜ್ವಲವಾಗಿರುವ ಕಾರಣಕ್ಕೆ, ಭಾರತದ ಷೇರುಪೇಟೆಗಳಲ್ಲಿ ಷೇರುಗಳ ಮೌಲ್ಯವು ತುಸು ದುಬಾರಿಯಾಗಿಯೇ ಇರಲಿದೆ. ಹೀಗಾಗಿ, ದೀರ್ಘಾವಧಿ ಹೂಡಿಕೆದಾರರಿಗೆ ಷೇರುಮೌಲ್ಯ ದುಬಾರಿ ಎಂಬುದು ಹೂಡಿಕೆಗೆ ಅಡ್ಡಿಯಾಗಿ ಪರಿಣಮಿಸಬಾರದು. ಹೂಡಿಕೆಗಳನ್ನು, ಷೇರು ಖರೀದಿಯನ್ನು ವ್ಯವಸ್ಥಿತವಾಗಿ ಮಾಡುವ ಮೂಲಕ 'ದುಬಾರಿ'ಯ ಸಮಸ್ಯೆಯನ್ನು ನಿರ್ವಹಿಸಬಹುದು.

ದೀರ್ಘಾವಧಿ ಹೂಡಿಕೆದಾರರ ಪಾಲಿಗೆ ಷೇರುಪೇಟೆಗಳ ಕುಸಿತಗಳು ಖರೀದಿಗೆ ಸಿಗುವ ಒಳ್ಳೆಯ ಅವಕಾಶಗಳು!

ಮ್ಯೂಚುವಲ್ ಫಂಡ್
ಪೋರ್ಟ್‌ಫೋಲಿಯೊ ವಿಶ್ಲೇಷಣೆ


ಮಾಹಿತಿ ಕಣಜ

ಮ್ಯೂಚುವಲ್ ಫಂಡ್‌ಗಳ ಮೂಲಕ ಮಾಡಿರುವ ಹೂಡಿಕೆಗಳು ನಿಜವಾಗಿಯೂ ಉತ್ತಮ ಲಾಭವನ್ನು ತಂದುಕೊಡುತ್ತಿವೆಯೇ? ಈ ಪ್ರಶ್ನೆ ಹಲವಾರು ಮಂದಿ ಸಣ್ಣ ಹೂಡಿಕೆದಾರರನ್ನು ಒಂದಲ್ಲ ಒಂದು ಸಂದರ್ಭದಲ್ಲಿ ಕಾಡಿರಬಹುದು. ಈ ಪ್ರಶ್ನೆಯು ಬಹಳ ಸರಳವಾಗಿ ಕಾಣಿಸಿದರೂ, ಉತ್ತರವು ಬಹಳ ಸುಲಭದಲ್ಲಿ ಸಿಗುವುದಿಲ್ಲ.

ಮ್ಯೂಚುವಲ್ ಫಂಡ್‌ಗಳ ಮೂಲಕ ಈಕ್ವಿಟಿ ಮಾರುಕಟ್ಟೆಯಲ್ಲಿ ಮಾಡಿರುವ ಹೂಡಿಕೆಗಳು ಹಲವು ಅಂಶಗಳನ್ನು ಆಧರಿಸಿ ಲಾಭ ತಂದುಕೊಡುತ್ತವೆ, ಕೆಲವು ಸಂದರ್ಭಗಳಲ್ಲಿ ಅವುಗಳಲ್ಲಿ ನಷ್ಟವನ್ನೂ ಕಾಣಬಹುದು. ಆದರೆ ಮಾಡಿರುವ ಹೂಡಿಕೆ ಸರಿಯಾಗಿ ಇದೆಯೇ, ನಿರ್ದಿಷ್ಟ ಫಂಡ್‌ನಲ್ಲಿ ದೊರೆಯುತ್ತಿರುವ ಲಾಭದ ಪ್ರಮಾಣವು ಅದೇ ಬಗೆಯ ಇತರ ಫಂಡ್‌ಗಳಿಂದ ಸಿಗುತ್ತಿರುವ ಲಾಭಕ್ಕೆ ಸರಿಸಮನಾಗಿ ಇದೆಯೇ, ಮ್ಯೂಚುವಲ್ ಫಂಡ್ ಹೂಡಿಕೆ ಪೋರ್ಟ್‌ಫೋ-ಲಿಯೊದಲ್ಲಿ ಬದಲಾವಣೆ ತರುವ ಅಗತ್ಯ ಇದೆಯೇ ಎಂಬ ಪ್ರಶ್ನೆಗಳಿಗೆ ಸರಳ ಪ್ರಕ್ರಿಯೆಯೊಂದರ ಮೂಲಕ ಉತ್ತರ ಕಂಡುಕೊಳ್ಳಲು ಹಲವು ವೇದಿಕೆಗಳು ನೆರವಾಗುತ್ತಿವೆ.

ಫಿಸ್ಡಮ್ ಸೇರಿದಂತೆ ಕೆಲವು ಮ್ಯೂಚುವಲ್ ಫಂಡ್ ಹೂಡಿಕೆ ವೇದಿಕೆಗಳು ಹೂಡಿಕೆದಾರರಿಗೆ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ನೆರವು ಒದಗಿಸುತ್ತಿವೆ. ಈ ವೇದಿಕೆಗಳಿಗೆ ಭೇಟಿ ನೀಡಿ, ಒಂದು ಬಾರಿ ಬಳಸುವ ಪಾಸ್‌ವರ್ಡ್ (ಒಟಿಪಿ) ಬಳಸಿ ಲಾಗಿನ್ ಆಗಬಹುದು. ಅಲ್ಲಿ ಹೂಡಿಕೆದಾರರು ತಮ್ಮ ಪ್ಯಾನ್ ಸಂಖ್ಯೆ, ಮೊಬೈಲ್ ದೂರವಾಣಿ ಸಂಖ್ಯೆಯ ವಿವರ ನೀಡಿ, ತಮ್ಮ ಹೂಡಿಕೆಗಳ ಪೋರ್ಟ್‌ಫೋಲಿಯೊ ವಿಶ್ಲೇಷಣೆ ನಡೆಸಬಹುದು.

ಫಿಸ್ಡಮ್ ವೇದಿಕೆಯ ಮೂಲಕ ಮ್ಯೂಚುವಲ್ ಫಂಡ್ ಪೋರ್ಟ್‌ಫೋಲಿಯೊ ವಿಶ್ಲೇಷಣೆ ನಡೆಸಿದಲ್ಲಿ, ಹೂಡಿಕೆಯು ಒಟ್ಟಾರೆಯಾಗಿ ಯಾವ ಪ್ರಮಾಣದಲ್ಲಿ ಲಾಭ ತಂದುಕೊಟ್ಟಿದೆ, ದೊರೆತಿರುವ ಲಾಭವು ಸಮರ್ಪಕವಾಗಿ ಇದೆಯೇ, ಲಾಭವನ್ನು ಹೆಚ್ಚು ಮಾಡಿಕೊಳ್ಳಲು ಪೋರ್ಟ್‌ಫೋಲಿಯೊ ದಲ್ಲಿ ಬದಲಾವಣೆಗಳನ್ನು ತರುವ ಅಗತ್ಯ ಇದೆಯೇ, ಬೇರೆ ಬೇರೆ ಫಂಡ್‌ಗಳ ಮೂಲಕ ಮಾಡಿರುವ ಹೂಡಿಕೆಗಳಲ್ಲಿ ಉತ್ತಮ ಲಾಭ ತಂದುಕೊಟ್ಟಿರುವ ಹಾಗೂ ಸಾಧಾರಣ ಮಟ್ಟದ ಲಾಭ ತಂದುಕೊಟ್ಟಿರುವ ಫಂಡ್‌ಗಳು ಯಾವುವು ಎಂಬ ವಿವರಗಳು ಸಿಗುತ್ತವೆ.



ಪೋರ್ಟ್‌ಫೋಲಿಯೊ ವಿಶ್ಲೇಷಣೆ

ಅಷ್ಟೇ ಅಲ್ಲ, ನೀವು ಯಾವ ಬಗೆಯ ಹೂಡಿಕೆದಾರರು – ಅಂದರೆ, ಹೆಚ್ಚು ರಿಸ್ಕ್ ತೆಗೆದುಕೊಂಡು ಹೆಚ್ಚಿನ ಲಾಭ ಬಯಸುವವರೋ ಅಥವಾ ಲಾಭ ಕಡಿಮೆ ಆದರೂ ತೊಂದರೆ ಇಲ್ಲ ರಿಸ್ಕ್ ಕಡಿಮೆ ಇರಲಿ ಎಂದು ಬಯಸುವವರೋ ಎಂಬ ಪ್ರಶ್ನೆಗೂ ಈ ವಿಶ್ಲೇಷಣೆಯ ಮೂಲಕ ಉತ್ತರ ಕಂಡುಕೊಳ್ಳಬಹುದು.

ಹೂಡಿಕೆಯ ಹಣವು ಷೇರುಗಳಲ್ಲಿ ಯಾವ ಪ್ರಮಾಣದಲ್ಲಿ, ಸಾಲಪತ್ರಗಳಲ್ಲಿ ಯಾವ ಪ್ರಮಾಣದಲ್ಲಿ ವಿನಿಯೋಗ ಆಗಿದೆ ಎಂಬುದನ್ನು ಕೂಡ ಈ ವಿಶ್ಲೇಷಣೆಯ ಮೂಲಕ ತಿಳಿಯಬಹುದು. ಮ್ಯೂಚುವಲ್ ಫಂಡ್‌ಗಳ ಈ ವಿಶ್ಲೇಷಣೆಯು ಹೊಸ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಸಂದರ್ಭದಲ್ಲಿ ಹೆಚ್ಚು ಸಹಾಯಕ್ಕೆ ಬರುತ್ತದೆ. ಈಗಾಗಲೇ ಹೂಡಿಕೆ ಮಾಡಿರುವ ಫಂಡ್‌ಗಳಲ್ಲಿ ಇಲ್ಲದ ವಲಯಗಳು, ಷೇರುಗಳಲ್ಲಿ ಹಣ ತೊಡಗಿಸುವ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಒಂದಿಷ್ಟು ಸಹಾಯ ಆಗುತ್ತದೆ. ❖

ಎಚ್‌ಡಿಎಫ್‌ಸಿ ಬ್ಯಾಂಕ್

ಬ್ರೋಕರೇಜ್ ಮಾತು

ದೇಶದ ಖಾಸಗಿ ವಲಯದ ಅತಿದೊಡ್ಡ ಬ್ಯಾಂಕ್ ಆಗಿರುವ ಎಚ್‌ಡಿಎಫ್‌ಸಿ ಬ್ಯಾಂಕ್ 2024–25ನೆಯ ಹಣಕಾಸು ವರ್ಷದ ನಾಲ್ಕನೆಯ ತ್ರೈಮಾಸಿಕದಲ್ಲಿ ₹17 ಸಾವಿರ ಕೋಟಿ ನಿವ್ವಳ ಲಾಭ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ಅವಧಿಯ ಲಾಭಕ್ಕೆ ಹೋಲಿಸಿದರೆ ಶೇಕಡ 7ರಷ್ಟು ಹೆಚ್ಚು. ಅಲ್ಲದೆ, ಈ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು ಶೇ 10.3ರಷ್ಟು ಹೆಚ್ಚಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರು ಮೌಲ್ಯವು ₹2,200ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಅಂದಾಜಿಸಿದೆ. ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣದ ಏರಿಕೆಯು ಶೇ 5.4ರಷ್ಟು ಇದೆ. ಠೇವಣಿಗಳಲ್ಲಿ ಏರಿಕೆಯ ಪ್ರಮಾಣವು ಶೇ 14ರಷ್ಟಾಗಿದೆ ಎಂದು ಸಂಸ್ಥೆ ಹೇಳಿದೆ.

2025–26 ಹಾಗೂ 2026–27ನೆಯ ಹಣಕಾಸು ವರ್ಷಗಳಲ್ಲಿ ಸಾಲ ನೀಡಿಕೆ ಪ್ರಮಾಣವು ಕ್ರಮವಾಗಿ ಶೇ 10ರಷ್ಟು ಹಾಗೂ ಶೇ 13ರಷ್ಟು ಹೆಚ್ಚಳ ಕಾಣಬಹುದು ಎಂದು ಮೋತಿಲಾಲ್ ಓಸ್ವಾಲ್ ಅಂದಾಜು ಮಾಡಿದೆ.

(ಬ್ರೋಕರೇಜ್ ಸಂಸ್ಥೆಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆ ಅಲ್ಲ.)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ?
ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

Second Language ENGLISH
Unit-2 PROSE
There's a Girl by the Tracks!

Speak well

Task -1: ***Imagine some of Roma's colleagues (Ramani, Tejas and Shalini) visit Roma's house some days later, after the incident. They begin to talk. Read the dialogues taking the roles.***

Shalini: Hi! Roma, how're you now? We're sorry to hear about the accident.
Roma: Please come in. I'm ok. Still, That accident haunts me.
Tejas: That's really a pity. We can't even imagine how all that happened.
Roma: Yes, it was really horrible. You know, I was in a hurry that day. Foolishly, I tried to board the running train.
Ramani: Really? You shouldn't have done that!
Roma: Well, with great risk I boarded it. The train was full and I got squeezed and a minute or two later, I was pushed out.
Tejas: How dreadful!
Roma: The very next moment, I was on the track. I didn't know how I got there.
Shalini: How terrible!
Roma: It was all God's grace that I didn't die. A young chap risked his life and saved me.
Tejas: Did he? Anyway, take care Roma. For heaven's sake, don't you ever run any more risks.
Roma: Thank you all.
Ramani: Meet you again. Take care. Bye!
Roma: Bye, friends.

Task 2: ***Imagine something bad has happened in your friend's life. You meet him/her. You need to sympathise with and instill confidence in him/her. Write a dialogue.***

Note: The following expressions are used to convey sympathy.
I'm sorry to hear about ....
That's so sad........
I'm awfully/dreadfully sorry about ......
That's a pity/hard luck/I know how it feels ....
How upsetting/ annoying/ oh, how dreadful/ terrible/ awful ......
You must be very upset ....
I'm extremely sorry to hear that/ I'm/was deeply sorry to hear/ learn about ....
Bad luck ....
Can I help you in any way ...?
Don't worry it'll turn out all right...
It may not be as bad as it looks...
Well, these things happen, don't they ...?

Dialogue -

Me: Hi Vinay! How are you?
Vinay: I am sad friend. I lost my cousin brother in a bike accident last week.
Me: I'm sorry to hear about that.
Vinay: He was just 21 years old.
Me: That's so sad. That's really terrifying.
Vinay: He sustained serious head injuries when his bike hit a half cut electric pole.
Me: Oh! I'm dreadfully sorry about that.
Vinay: Instead of removing the pole completely from bottom with its embeddment in concrete, the pole was cut few inches above road level, resulting in accident.
Me: It's a pity that a young chap had to die for someone else's negligence. I know how it feels...
Vinay: And it happened during the night in a poorly lit street.
Me: How awful..! the maintenance of roads and street lights by municipality is terrible.
Vinay: True.
Me: You must be very upset...
Vinay: Yes, I am very sad for losing my cousin brother for no fault of his. His mother had to be admitted to hospital when she lost her consciousness after hearing about his death.
Me: I'm extremely sorry to hear that ...
Vinay: She is yet to recover from the shock ...
Me: Bad luck ...
Vinay: It is not bad luck but it is the murder by municipality.
Me: Can I help you in any way ...?
Vinay: No, thanks. I will definitely ask for it, if required.
Me: Don't worry it'll turn out all right...She will recover soon...
Vinay: I am praying God that your words come true.
Me: It may not be as bad as it looks...
Vinay: Hope so...
Me: Well, these things happen, don't they ...?
Vinay: Due to the corruption in municipalities, these things are happening more frequently...

Read and respond

Task 1 : Look at the picture- 1 in column 'A'. Some statements are made in column 'B' about the actions as seen in 'A'. Some of the statements are wrong, and some of them are right. If they are wrong, correct them. If they are right mark (√) **(Contd.....)**

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Biology

REPRODUCTION
Human Reproduction

Multiple Choice questions:- *(....Contd)*

81. Sertoli cell secretes hormone........
A) Relaxin B) Testosterone
C) Inhibin D) Gonadotropin

82. Low titre of progesterone and estrogen stimulates production of..........
A) FSH B) FSH-RH
C) LH D) GH

83. Embryo at 16-celled stage is called.........
A) Morula B) Blastomere
C) Blastula D) Gastrula.

84. Sertoli cells are regulated by the pituitary hormone..........
A) FSH B) GH
C) Prolactin D) LH

85. Spermatids are changed into spermatozoa through
A) Spermiogenesis B) Spermition
C) Spermatogenesis D) Spermatosis

86. Notochord, skeletal system and dermis of skin are derived from
A) Ectoderm B) Endoderm
C) Mesoderm D) All the above

87. Which is incorrect about menstruation?
A) At menopause there is abrupt increase in gonadotropic hormones
B) Beginning of cycle of menstruation is called menarche
C) About 40 mL of blood is lost during normal menstruation
D) Menstrual fluid can easily clot.

88. Leyding cells secrete...........
A) Progesterone B) Testosterone
C) Estrogen D) Cortisterone


89. Which germinal layer develops first during embryonic development?
A) Endoderm B) Mesoderm
C) Ectoderm D) Both A & B

90. Celled stage of human embryo is.........
A) Larger than fertilized egg
B) Smaller than fertilized egg
C) Same size as fertilized egg
D) 4 times larger than fertilized egg

91. Signals from fully developed foetus and placenta ultimately lead to parturition which requires the release of............
A) Estrogen from placenta
B) Oxytocin from foetal pituitary
C) Oxytocin from maternal pituitary
D) Relaxin from placenta

92. What happens during fertilization in humans after many sperms reach close to the ovum........
A) Cells of corona radiata trap all the sperms except one
B) Only two sperms nearest the ovum penetrate zona pellucida
C) Secretion of acrosome helps one sperm enter cytoplasm of ovum through zona pellucida
D) All sperms except the one nearest the ovum lose their tails.

93. The figure given here depicts a diagrammatic sectional view of the female reproductive system of humans. Which one set of three parts out of i-vi have been correctly identified




A) iv-oviducal funnel, v-uterus, vi-cervix
B) i-perimetrium, ii-myometrium, iv-fallopian tube
C) ii-endometrium, iii-infundibulum, iv-fimbriae
D) iii-infundibulum, iv-fimbriae, v-cervix

94. About which day in the normal human menstrual cycle does rapid secretion of LH (popularly called LH surge) normally occurs
A) 5th day B) 11th day
C) 14th day D) 20th day

95. Signals for parturition originate from......
A) Placenta
B) Fully developed foetus
C) Both placenta as well as fully developed foetus
D) Oxytocin released from maternal pituitary.

96. Identify the human development stage as well as its place of occurrence and select the right option of the two ....



Development state	*Site of Occurrence*
A) Late morula	Middle part of fallopian tube
B)8-celled morula	Starting point of fallopian tube
C) Blastula	End part of fallopian tube
D) Blastocyst	Uterine wall

97. In human females, ovarian cycle begins as the...............
A) Estrogen level reaches maximum
B) Progesterone level falls precipitously
C) Hypothalamus increases release of FSH and LH
D) Hypothalamus stimulates anterior pituitary to increase FSH and LH output.

Answers: 81)C 82)B 83)A 84)A 85)A 86)C 87)D 88)B 89)A 90)C 91)C 92)C 93)D 94)C 95)C 96)D 97)C

(Contd....)

‘24 ವರ್ಷ ದುಡಿದಿದ್ದೇನೆ; ಬೀದಿಗೆ ದೂಡಬೇಡಿ’

ಪರಿಶಿಷ್ಟ ಜಾತಿಯ ಮುಖ್ಯ ಅಡುಗೆ ತಯಾರಕಿ ನಂಜಮ್ಮ ಅಳಲು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ಮೇಲ್ವರ್ಗಕ್ಕೆ ಸೇರಿದವರು ಅಡುಗೆ ಮಾಡುವಾಗ ಶಾಲೆಯ ಎಲ್ಲ ವಿದ್ಯಾರ್ಥಿಗಳು ಮಧ್ಯಾಹ್ನದ ಬಿಸಿಯೂಟ ಸೇವಿಸುತ್ತಿದ್ದರು. ಪರಿಶಿಷ್ಟ ಜಾತಿಯ ನಾನು ಅಡುಗೆ ಮಾಡಲು ಶುರುಮಾಡಿದಾಗ ನಮ್ಮ ಸಮುದಾಯದ ಮಕ್ಕಳ ಹೊರತಾಗಿ ಯಾರೂ ಊಟ ಮಾಡುತ್ತಿಲ್ಲ..’


ನಂಜಮ್ಮ

–ತಾಲ್ಲೂಕಿನ ಹೊಮ್ಮ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಜಿಲ್ಲಾ ಪಂಚಾಯಿತಿ ಸಿಇಒ ಮೋನಾ ರೋತ್, ಎಸ್‌ಪಿ ಬಿ.ಟಿ. ಕವಿತಾ, ಡಿಡಿಪಿಐ ರಾಮಚಂದ್ರರಾಜೇ ಅರಸ್ ನೇತೃತ್ವದ ತಂಡವು ಬುಧವಾರ ಭೇಟಿ ನೀಡಿದ ಸಂದರ್ಭ ಮುಖ್ಯ ಅಡುಗೆ ಸಿಬ್ಬಂದಿ ನಂಜಮ್ಮ ಹೀಗೆ ತಮ್ಮ ನೋವನ್ನು ತೆರೆದಿಟ್ಟರು.

‘ನಂಜಮ್ಮ ಬಿಸಿಯೂಟ ತಯಾರಿಸುವುದನ್ನು ವಿರೋಧಿಸಿ ಪೋಷಕರು ಮಕ್ಕಳನ್ನು ಶಾಲೆ ಬಿಡಿಸುತ್ತಿದ್ದಾರೆ’ ಎಂಬ ಆರೋಪ ಸಂಬಂಧ ಮಾಹಿತಿ ಪಡೆಯಲು ಅಧಿಕಾರಿಗಳು ಭೇಟಿ ನೀಡಿದ್ದರು.

ಆಗ ಮಾತನಾಡಿದ ನಂಜಮ್ಮ, ‘ಪರಿಶಿಷ್ಟ ಮಹಿಳೆ ಅಡುಗೆ ಮಾಡುತ್ತಿದ್ದಾಳೆ ಎಂಬ ಕಾರಣಕ್ಕೆ ಪೋಷಕರು ಮಕ್ಕಳನ್ನು ಶಾಲೆ ಬಿಡಿಸುತ್ತಿದ್ದಾರೆ. ಶಾಲೆ ಮುಚ್ಚಿದರೆ ಕೆಲಸ ಕಳೆದುಕೊಂಡು ಬೀದಿಗೆ ಬೀಳುತ್ತೇನೆ. 24 ವರ್ಷಗಳಿಂದ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದು, ಸ್ವಚ್ಛತೆ ಕೆಲಸದಿಂದ ಅಡುಗೆಯವರೆಗೂ ಎಲ್ಲ ಕೆಲಸ ಮಾಡುತ್ತಿದ್ದೇನೆ. ಅವಿವಾಹಿತೆಯಾಗಿದ್ದು ದಿಕ್ಕುದಿಸೆ ಯಾರೂ ಇಲ್ಲ, ಕೆಲಸ ಕಿತ್ತುಕೊಳ್ಳಬೇಡಿ’ ಎಂದು ಅಧಿಕಾರಿಗಳ ಮುಂದೆ ಅಂಗಲಾಚಿದರು.

ಮುಖ್ಯಾಂಶಗಳು

- ಪ್ರಸಕ್ತ ಸಾಲಿನಲ್ಲಿ ಶಾಲೆ ತೊರೆದ 12 ವಿದ್ಯಾರ್ಥಿಗಳು
- ನಿತ್ಯ ಬೆರಳೆಣಿಕೆ ವಿದ್ಯಾರ್ಥಿಗಳು ಶಾಲೆಗೆ ಹಾಜರು
- ಮುಚ್ಚುವ ಭೀತಿಯಲ್ಲಿ ಶತಮಾನದ ಹೊಸ್ತಿಲಿನ ಶಾಲೆ

ಶಾಲೆ ತೊರೆದವರಲ್ಲಿ 6 ವಿದ್ಯಾರ್ಥಿಗಳನ್ನು ಮರಳಿ ಶಾಲೆಗೆ ಕರೆತರಲಾಗಿದೆ. ಪೋಷಕರ ಮನವೊಲಿಸಿ ಎಲ್ಲ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲಾಗುವುದು
ರಾಮಚಂದ್ರರಾಜೇ ಅರಸ್, ಡಿಡಿಪಿಐ

‘ಲಿಂಗಾಯತ ಸಮುದಾಯದ ಮುಖ್ಯ ಅಡುಗೆ ತಯಾರಕಿಯು ಆರು ತಿಂಗಳ ಹಿಂದೆ ಅನಾರೋಗ್ಯದ ಕಾರಣದಿಂದ ಕೆಲಸ ತ್ಯಜಿಸಿದಾಗ ನನಗೆ ಜವಾಬ್ದಾರಿ ವಹಿಸಲಾಯಿತು. ನಾನು ಅಡುಗೆ ಮಾಡಲು ಶುರುಮಾಡಿದ ನಂತರ ಪರಿಶಿಷ್ಟ ಜಾತಿಗೆ ಸೇರಿದ 7 ಮಕ್ಕಳು ಮಾತ್ರ ಬಿಸಿಯೂಟ ಮಾಡುತ್ತಿದ್ದು, ಉಳಿದವರು ಮನೆಗೆ ಹೋಗಿ ಊಟ ಮಾಡಿ ಬರುತ್ತಿದ್ದಾರೆ’ ಎಂದರು.

ಗ್ರಾಮಸ್ಥರ ವಾದ: ‘ಕರ್ತವ್ಯ ನಿರ್ಲಕ್ಷ್ಯ ತೋರುತ್ತಿರುವ ಇಬ್ಬರು ಶಿಕ್ಷಕರನ್ನು ಬದಲಾಯಿಸುವಂತೆ ಡಿಡಿಪಿಐಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಲಿಲ್ಲ. ಹೀಗಾಗಿ ಶಾಲೆ ಬಿಡಿಸುವ ತೀರ್ಮಾನಕ್ಕೆ ಬಂದೆವು’ ಎಂದು ಪೋಷಕರು ಪ್ರತಿಪಾದಿಸಿದರು.

‘ನಂಜಮ್ಮ ರುಚಿಯಾಗಿ ಬಿಸಿಯೂಟ ತಯಾರಿಸುತ್ತಿಲ್ಲ, ಶುಚಿತ್ವ ಇರುವುದಿಲ್ಲ. ಮಕ್ಕಳ ಆರೋಗ್ಯ ದೃಷ್ಟಿಯಿಂದ ಮುಖ್ಯ ಅಡುಗೆ ತಯಾರಕರೊಬ್ಬರನ್ನು ನೇಮಿಸಬೇಕು’ ಎಂದು ಒತ್ತಾಯಿಸಿದರು.

‘ಗ್ರಾಮದಲ್ಲಿ ಎಲ್ಲ ಸಮುದಾಯಗಳು ಅನ್ಯೋನ್ಯವಾಗಿದ್ದು ಅಸ್ಪೃಶ್ಯತೆ ಆಚರಿಸುತ್ತಿಲ್ಲ. ಊರಿಗೆ ಕಳಂಕ ತರುವ ಕೆಲಸ ಮಾಡಬಾರದು’ ಎಂದು ಕೆಲವರು ಮಾಧ್ಯಮಗಳ ವಿರುದ್ಧ ಹರಿಹಾಯ್ದರು.

ಸಂಧಾನ: ‘ಮಕ್ಕಳ ಸಂಖ್ಯೆ ಕುಸಿದರೆ ಸರ್ಕಾರಿ ಶಾಲೆ ಮುಚ್ಚಬೇಕಾಗುತ್ತದೆ. ಪೋಷಕರ ದೂರಿನಂತೆ ಕರ್ತವ್ಯ ನಿರ್ಲಕ್ಷ್ಯ ಎಸಗಿರುವ ಇಬ್ಬರು ಶಿಕ್ಷಕರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಬದಲಿ ಶಿಕ್ಷಕರನ್ನು ಕೂಡಲೇ ನಿಯೋಜಿಸಲಾಗುವುದು. ಶಾಲೆ ತೊರೆದಿರುವ ಮಕ್ಕಳನ್ನು ಮರಳಿ ಕರೆತರಲು ಗ್ರಾಮಸ್ಥರು ಸಹಕಾರ ನೀಡಬೇಕು’ ಎಂದು ಜಿಲ್ಲಾ ಪಂಚಾಯಿತಿ ಸಿಇಒ ಹಾಗೂ ಎಸ್‌ಪಿ ಮನವಿ ಮಾಡಿದರು.


ಚಾಮರಾಜನಗರ ತಾಲ್ಲೂಕಿನ ಹೊಮ್ಮ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ನಡೆದ ಅಧಿಕಾರಿಗಳು ಹಾಗೂ ಗ್ರಾಮಸ್ಥರ ಸಭೆಯಲ್ಲಿ ಡಿಡಿಪಿಐ ರಾಮಚಂದ್ರ ರಾಜೇ ಅರಸ್ ಮಾತನಾಡಿದರು

‘ವರದಿ ಸಲ್ಲಿಸಲು ಸೂಚನೆ’

ಪರಿಶಿಷ್ಟ ಜಾತಿಯ ಮಹಿಳೆ ಅಡುಗೆ ತಯಾರಿಸುತ್ತಿರುವ ಕಾರಣಕ್ಕೆ ಪೋಷಕರು ಮಕ್ಕಳನ್ನು ಶಾಲೆ ಬಿಡಿಸುತ್ತಿರುವ ಆರೋಪ ಸಂಬಂಧ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಶಿಕ್ಷಕರು ಸರಿಯಾಗಿ ಪಾಠ ಮಾಡುತ್ತಿಲ್ಲ ಎಂಬ ದೂರಿನ ವಿಚಾರಣೆ ನಡೆಸಲಾಗುವುದು. ಪ್ರತಿದಿನ ಬಿಸಿಯೂಟದ ಗುಣಮಟ್ಟ, ರುಚಿ ಪರಿಶೀಲಿಸಿ ವರದಿ ನೀಡುವಂತೆ ಸಿಆರ್‌ಪಿ, ಬಿಆರ್‌ಸಿಗೆ ನಿರ್ದೇಶನ ನೀಡಲಾಗಿದೆ.

ಮೋನಾ ರೋತ್, ಜಿಲ್ಲಾ ಪಂಚಾಯಿತಿ ಸಿಇಒ

ಸಮಸ್ಯೆ ಅರಿವಿಗೆ ಬಂದರೂ ಬೇಜವಾಬ್ದಾರಿ ತೋರಿ ಅಸ್ಪೃಶ್ಯತೆಗೆ ಬೆಂಬಲ ನೀಡಿದ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು. ಅಸ್ಪೃಶ್ಯತೆ ವಿರುದ್ಧ ಅರಿವು ಮೂಡಿಸಬೇಕು
ಎನ್‌ ನಾಗಯ್ಯ, ಬಿಎಸ್‌ಪಿ ರಾಜ್ಯ ಕಾರ್ಯದರ್ಶಿ

ನಂಜಮ್ಮ ತಯಾರಿಸುವ ಬಿಸಿಯೂಟ ರುಚಿಯಾಗಿಲ್ಲ ಎಂದು ಕೆಲವು ಮಕ್ಕಳು ಸೇವಿಸುತ್ತಿರಲಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ. ಪರಿಶಿಷ್ಟ ಮಹಿಳೆ ಎಂಬ ಕಾರಣಕ್ಕೆ ಊಟ ಮಾಡದಿದ್ದರೆ ಕಾನೂನು ಕ್ರಮ
ಬಿ.ಟಿ.ಕವಿತಾ, ಎಸ್‌ಪಿ

ಕನಕದಾಸರ ಮೂರ್ತಿ ಭಗ್ನ

ಪ್ರಜಾವಾಣಿ ವಾರ್ತೆ

ಕಾರಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಬೇವಿನಾಳ ಗ್ರಾಮದ ವೃತ್ತದಲ್ಲಿರುವ ಕನಕದಾಸ ಮೂರ್ತಿಯನ್ನು ಮಂಗಳವಾರ ತಡರಾತ್ರಿ ಕಿಡಿಗೇಡಿಗಳು ಭಗ್ನಗೊಳಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಗ್ರಾಮದಲ್ಲಿ ಪೊಲೀಸರು ಬೀಡು ಬಿಟ್ಟಿದ್ದಾರೆ.

ಕಿಡಿಗೇಡಿಗಳು ಕನಕದಾಸರ ಮೂರ್ತಿಯ ಬಲಗೈ ತುಂಡರಿಸಿದ್ದು, ತಂಬೂರಿ ಕಿತ್ತುಕೊಂಡು ಹೋಗಿದ್ದಾರೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಜಮಾವಣೆಗೊಂಡ ಹಾಲುಮತ ಸಮಾಜದವರು, ಪಟ್ಟಣದ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ಪ್ರಕರಣ ದಾಖಲಾಗಿದೆ. ತಹಶೀಲ್ದಾರ್ ಎಂ. ಕುಮಾರಸ್ವಾಮಿ, ಪೊಲೀಸ್ ಇನ್‌ಸ್ಪೆಕ್ಟರ್ ಸುಧೀರಕುಮಾರ ಬೆಂಕಿ, ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿ, ಗ್ರಾಮ ಪಂಚಾಯಿತಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸರ್ಕಾರ ಬೀಳಿಸುವುದರಲ್ಲಿ ನಮಗೆ ವಿಶ್ವಾಸ ಇಲ್ಲ: ಬಿಜೆಪಿ

ಪ್ರಜಾವಾಣಿ ವಾರ್ತೆ

ಮಂಗಳೂರು: ‘ರಾಜ್ಯದಲ್ಲಿ ಭ್ರಷ್ಟಾಚಾರದ ವಿಷಯದಲ್ಲಿ ಪೈಪೋಟಿ ನಡೆಯುತ್ತಿರುವುದನ್ನು ಜನ ನೋಡುತ್ತಿದ್ದಾರೆ. ಸರ್ಕಾರ ಬೀಳಿಸುವುದರಲ್ಲಿ ನಮಗೆ ವಿಶ್ವಾಸ ಇಲ್ಲ. ಪ್ರಜಾಸತ್ತಾತ್ಮಕ ರೀತಿಯಲ್ಲೇ ಈ ಸರ್ಕಾರ ಅವಸಾನವಾಗಲಿದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯದ ಬಿಜೆಪಿ ಉಸ್ತುವಾರಿ ರಾಧಾ ಮೋಹನದಾಸ್ ಅಗರ್ವಾಲ್ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಬಿಜೆಪಿಯು ಯಾವತ್ತೂ ರಾಜಕೀಯದಲ್ಲಿ ವ್ಯಾಪಾರ ಮಾಡುವುದಿಲ್ಲ. ಯಾರದೋ ವೈಫಲ್ಯದ ಲಾಭ ಪಡೆಯುವುದು ನಮ್ಮ ಚಿಂತನೆ ಅಲ್ಲ’ ಎಂದರು.

ಚಿಟಿಕೆ ಸುದ್ದಿ

ಮಗಳ ಮದುವೆಗೆ ಹಣದ ಸಮಸ್ಯೆ: ಯೋಧ ಆತ್ಮಹತ್ಯೆ

ಕಲಬುರಗಿ: ಮಗಳ ಮದುವೆಗೆ ಹಣ ಹೊಂದಿಸಲು ಸಾಧ್ಯವಾಗದೇ ಮನನೊಂದ ಸಿಆರ್‌ಪಿಎಫ್ ಯೋಧ ತುಳಜಾರಾಮ ಸೂರ್ಯವಂಶಿ (51) ಅವರು ಸ್ನೇಹಿತನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಯಶವಂತ ನಗರದ ನಿವಾಸಿಯಾದ ಇವರು ಛತ್ತೀಸಗಢದ ದಂತೇವಾಡದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅವರಿಗೆ ಪತ್ನಿ, ಒಬ್ಬಳು ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

‘19 ವರ್ಷದ ಮಗಳ ನಿಶ್ಚಿತಾರ್ಥವು ಜುಲೈನಲ್ಲಿ ನಿಗದಿಯಾಗಿತ್ತು. ರಜೆಯ ಮೇಲೆ ಕಲಬುರಗಿಗೆ ಬಂದಿದ್ದ ತುಳಜಾರಾಮ ಅವರು ಸ್ನೇಹಿತ ಮಳೇಂದ್ರಕುಮಾರ ಅವರ ಮನೆಯ ಕೋಣೆಯಲ್ಲಿ ಉಳಿದುಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸಿಎಂ ಭ್ರಷ್ಟಾಚಾರದ ಪಾಲುದಾರರು’

ಬೀದರ್: ‘ಮುಖ್ಯಮಂತ್ರಿಯವರೇ ಭ್ರಷ್ಟಾಚಾರದ ಪಾಲುದಾರರಾಗಿದ್ದಾರೆ. ಸಿಎಂಗೆ ಹೇಳಿದರೆ ಏನೂ ಪ್ರಯೋಜನವಿಲ್ಲ ಎಂದು ಶಾಸಕ ಬಿ.ಆರ್. ಪಾಟೀಲ ಹೇಳಿದ್ದಾರೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

‘ಕಾಂಗ್ರೆಸ್‌ನಲ್ಲಿ ಗಂಡು ಮಕ್ಕಳು ಇಲ್ಲ ಅಂದುಕೊಂಡಿದ್ದೆ. ಆದರೆ, ಪಾಟೀಲರಿದ್ದಾರೆ. ಅನೇಕ ಭ್ರಷ್ಟ ಕಾಂಗ್ರೆಸ್ಸಿಗರು ಈಗ ಅವರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಸತ್ಯ ಹೇಳುವವರಿಗೆ ಕಾಂಗ್ರೆಸ್‌ನಲ್ಲಿ ಜಾಗ ಇಲ್ಲ ಎನ್ನುವುದು ಈಗ ಸಾಬೀತಾಗಿದೆ’ ಎಂದರು.

‘ನಾನು ಕೂಡ ಕೆಎಂಎಫ್ ಅಧ್ಯಕ್ಷ ಸ್ಥಾನದ ಆಕಾಂಕ್ಷಿ’


ಭೀಮಾ ನಾಯ್ಕ್

ಮರಿಯಮ್ಮನಹಳ್ಳಿ (ವಿಜಯನಗರ ಜಿಲ್ಲೆ): ‘ನಾನು ಸಹ ಕೆಎಂಎಫ್ ಅಧ್ಯಕ್ಷ ಸ್ಥಾನದ ಆಕಾಂಕ್ಷಿ’ ಎಂದು ಮಾಜಿ ಅಧ್ಯಕ್ಷ ಎಲ್.ಬಿ.ಪಿ.ಭೀಮಾ ನಾಯ್ಕ್ ಹೇಳಿದರು.

ಇಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ರಾಯಚೂರು ಬಳ್ಳಾರಿ ಕೊಪ್ಪಳ ವಿಜಯನಗರ (ರಾಬಕೊವಿ) ಹಾಲು ಒಕ್ಕೂಟದ ಚುನಾವಣೆಯಲ್ಲಿ ನಾನೂ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಲಿದ್ದೇನೆ. ಧಾರವಾಡ ಹೈಕೋರ್ಟ್ ಪೀಠ ಚುನಾವಣೆಗೆ ಇದ್ದ ತಡೆಯನ್ನು ತೆರವುಗೊಳಿಸಿದ ಕಾರಣ ಜುಲೈ 10ರಂದು ಈ ಚುನಾವಣೆ ನಡೆಯಲಿದೆ’ ಎಂದರು.

‘ಬಳ್ಳಾರಿಯಿಂದ ನಾನು ಕೆಎಂಎಫ್ ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿ. ಆದರೆ ಇದರ ಬಗ್ಗೆ ಅಂತಿಮವಾಗಿ ಪಕ್ಷದ ವರಿಷ್ಠರು ತೀರ್ಮಾನಿಸುತ್ತಾರೆ’ ಎಂದರು.

ಪರಿಸರ ಪ್ರಶಸ್ತಿಯ ₹1 ಲಕ್ಷ ಸೈನಿಕರ ಕಲ್ಯಾಣ ನಿಧಿಗೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲೆಯಾದ್ಯಂತ ಸಾವಿರಾರು ಗಿಡ-ಮರಗಳನ್ನು ನೆಟ್ಟು ಮಕ್ಕಳಂತೆ ಪೋಷಿಸುತ್ತಿರುವ ಸಾಲುಮರದ ವೆಂಕಟೇಶ್ ಅವರು 2024–25ನೇ ಸಾಲಿನ ರಾಜ್ಯಮಟ್ಟದ ಪರಿಸರ ಪ್ರಶಸ್ತಿಯ ಜೊತೆಗೆ ಪಡೆದಿದ್ದ ₹ 1 ಲಕ್ಷ ನಗದು ಪುರಸ್ಕಾರವನ್ನು ಬುಧವಾರ ಸೈನಿಕರ ಕಲ್ಯಾಣ ನಿಧಿಗೆ ಅರ್ಪಿಸಿದರು.

ಆನ್‌ಲೈನ್ ಮೂಲಕ ನಿಧಿಗೆ ಹಣ ಜಮೆ ಮಾಡಿದ ನಂತರ ಅಧಿಕೃತ ಪ್ರತಿಯನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭ ಪತ್ನಿ ಜಯಲಕ್ಷ್ಮೀ, ಪುತ್ರರಾದ ಹರಿಕೃಷ್ಣ ಹಾಗೂ ನೀಲಕಂಠ ಜತೆಗಿದ್ದರು.

‘ಚಿಕ್ಕಂದಿನಿಂದಲೂ ಸೈನ್ಯದ ಕುರಿತು ಅಪಾರ ಗೌರವ. ಕೈಲಾದಷ್ಟು ಆರ್ಥಿಕ ನೆರವು ನೀಡಬೇಕೆಂಬ ಹಂಬಲವಿತ್ತು. ಆದರೆ, ದುಡಿಮೆಯ ಬಹುಪಾಲು ಹಣ ಪರಿಸರ ಸೇವೆಗೆ ವ್ಯಯವಾಗುತ್ತಿದ್ದರಿಂದ ಬಯಕೆ ಈಡೇರಿರಲಿಲ್ಲ. ಈಗ ಕಾಲ ಕೂಡಿ ಬಂದಿದ್ದು, ರಾಜ್ಯ ಸರ್ಕಾರ ಪರಿಸರ ಪ್ರಶಸ್ತಿ ಜೊತೆಗೆ ನೀಡಿರುವ ನಗದು ಪುರಸ್ಕಾರವನ್ನು ಸಂಪೂರ್ಣವಾಗಿ ಸೇನೆಗೆ ಅರ್ಪಿಸಿದ್ದೇನೆ’ ಎಂದು ಅವರು ತಿಳಿಸಿದರು.

‘ಈ ಪ್ರಶಸ್ತಿಯು ಜೀವಮಾನದ ಅತ್ಯಂತ ಸಾರ್ಥಕ ಕ್ಷಣಗಳಲ್ಲೊಂದು. ಆದರೆ, ಪ್ರಶಸ್ತಿಯೊಂದಿಗೆ ಬಂದ ನಗದು ಭಾರವೆನಿಸುತ್ತಿತ್ತು. ಕುಟುಂಬದ ಸದಸ್ಯರ ಹಾಗೂ ಸಮಾನ ಮನಸ್ಕರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಂಡೆ. ಪಹಲ್ಗಾಮ್‌ನಲ್ಲಿನ ಉಗ್ರರ ದಾಳಿಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ನೆರವಾಗಲು ಹಣ ಬಳಸುವಂತೆ ಕೋರಿದ್ದೇನೆ’ ಎಂದರು. ಲೆಕ್ಕ ಪರಿಶೋಧಕರಾಗಿರುವ ಅವರು ಜಿಲ್ಲೆಯಾದ್ಯಂತ ರಸ್ತೆ ಬದಿಗಳಲ್ಲಿ 15 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಪೋಷಿಸುತ್ತಿದ್ದಾರೆ.


2024–25ನೇ ಸಾಲಿನ ರಾಜ್ಯಮಟ್ಟದ ಪರಿಸರ ಪ್ರಶಸ್ತಿಯ ಜೊತೆಗೆ ಪಡೆದಿದ್ದ ₹ 1 ಲಕ್ಷ ನಗದು ಪುರಸ್ಕಾರವನ್ನು ಪರಿಸರಪ್ರೇಮಿ ಸಿಎಂ ವೆಂಕಟೇಶ್ ಬುಧವಾರ ಸೈನಿಕರ ಕಲ್ಯಾಣ ನಿಧಿಗೆ ಅರ್ಪಿಸಿದರು

ಸುಳ್ಳು ಸುದ್ದಿ ಪತ್ತೆಗೆ ವೇಗ

ಒಂದನೇ ಪುಟದಿಂದ...

ಜತೆಗೆ ಪೋಸ್ಟ್‌ಗಳನ್ನೂ ತೆಗೆದು ಹಾಕಲಾಗುತ್ತಿದೆ. ಒಂದು ವಾರದಲ್ಲಿ 50ಕ್ಕೂ ಹೆಚ್ಚು ಪೋಸ್ಟ್ ತೆಗೆದು ಹಾಕಲಾಗಿದೆ ಎಂದು ಪೊಲೀಸ್ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಕಳೆದ ಎರಡೂವರೆ ವರ್ಷದಲ್ಲಿ ಸುಳ್ಳು ಹಾಗೂ ತಪ್ಪು ಮಾಹಿತಿ ಹಂಚಿಕೊಂಡಿದ್ದ 894 ಪೋಸ್ಟ್‌ಗಳನ್ನು ಅಳಿಸಿ ಹಾಕಲಾಗಿದೆ. 178 ಖಾತೆಗಳನ್ನು ತೆಗೆದು ಹಾಕಲಾಗಿದೆ. ಆರು ತಿಂಗಳಲ್ಲೇ 285 ಪೋಸ್ಟ್ ತೆಗೆದುಹಾಕಿ, 54 ಖಾತೆ ರದ್ದುಗೊಳಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಕಳೆದ ಎರಡೂವರೆ ವರ್ಷದಲ್ಲಿ 218 ಮಂದಿ ದ್ವೇಷ ಭಾಷಣ ಮಾಡಿರುವುದು ವರದಿ ಆಗಿತ್ತು. ಆ ಪೈಕಿ 48 ಪಿಎಆರ್ ದಾಖಲಿಸಿಕೊಂಡು, 127 ಮಂದಿಯನ್ನು ಬಂಧಿಸಲಾಗಿತ್ತು. ಕಳೆದ ಆರು ತಿಂಗಳಲ್ಲಿ 22 ಮಂದಿಯನ್ನು ಬಂಧಿಸಲಾಗಿದೆ’ ಎಂದರು.

‘ಸುಳ್ಳು ಸುದ್ದಿಗೆ ಸಂಬಂಧಿಸಿದಂತೆ ಆರೋಪಿಗಳಿಗೆ ಶಿಕ್ಷೆಯ ಪ್ರಮಾಣ ಕಡಿಮೆ ಆಗುತ್ತಿದೆ. ಆರೋಪಿಗಳಿಗೆ ಶಿಕ್ಷೆ ಆಗುವಂತೆ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬೇಕೆಂದು ತನಿಖಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

‘ರಾಜಧಾನಿಯಲ್ಲಿ ಈ ರೀತಿಯ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿದ್ದು, ಆರೋಪಿಗಳ ಪತ್ತೆ, ತನಿಖೆ ಚುರುಕು ಮಾಡುವಂತೆ ‘ಸಾಮಾಜಿಕ ಜಾಲತಾಣಗಳ ಮೇಲ್ವಿಚಾರಣಾ ದಳ’ದ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಅಪರಾಧ ವಿಭಾಗದ ಸಿಬ್ಬಂದಿ, ಠಾಣೆಯ ಗುಪ್ತವಾರ್ತೆ ಸಿಬ್ಬಂದಿ ಹಾಗೂ ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ವಹಿಸಲು ನೇಮಿಸಲಾಗಿರುವ ಸಿಬ್ಬಂದಿ ಸಮನ್ವಯದಿಂದ ಕೆಲಸ ಮಾಡುವಂತೆ ತಿಳಿಸಲಾಗಿದೆ. ತಪ್ಪು ಮಾಹಿತಿಯಿಂದ ಕೋಮು ಸಂಘರ್ಷಕ್ಕೆ ಕಾರಣವಾಗುವ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದೂ ಸಿಬ್ಬಂದಿಗೆ ಸಭೆಯಲ್ಲಿ ಸೂಚನೆ ನೀಡಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಕಲಾವಿದರ ಮಾಸಾಶನ ₹2,500ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ನೀಡುವ ಕಲಾವಿದರ ಮಾಸಾಶನವನ್ನು ₹2,500ಕ್ಕೆ ಹೆಚ್ಚಿಸಲು ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಸಂಕಷ್ಟದಲ್ಲಿರುವ ಕಲಾವಿದರಿಗೆ ₹2,000 ಮಾಸಾಶನ ನೀಡುತ್ತಿದ್ದು ಇದನ್ನು ₹2,500ಕ್ಕೆ ಹೆಚ್ಚಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. 2025–26ನೇ ಸಾಲಿಗೆ ಮಾಸಾಶನ ಪಾವತಿಸಲು ₹32.94 ಕೋಟಿ ಅನುದಾನ ಬಿಡುಗಡೆ ಮಾಡಿ ಇಲಾಖೆ ಆದೇಶ ಹೊರಡಿಸಿದೆ.

ಅಕಾಲಿ ದಳದ ನಾಯಕ ಮಜಿಠಿಯಾ ಬಂಧನ

ಚಂಡೀಗಢ (ಪಿಟಿಐ): ಶಿರೋಮಣಿ ಅಕಾಲಿ ದಳದ ಹಿರಿಯ ನಾಯಕ ಬಿಕ್ರಮ್ ಸಿಂಗ್ ಮಜಿಠಿಯಾ ಅವರನ್ನು ಪಂಜಾಬ್ ವಿಚಕ್ಷಣಾ ದಳ ಬುಧವಾರ ಬಂಧಿಸಿದೆ.

ಮಜಿಠಿಯಾ ನಿವಾಸ ಸೇರಿ 25 ಸ್ಥಳಗಳಲ್ಲಿ ಶೋಧ ನಡೆಸಿದ ಬಳಿಕ ಮಜಿಠಿಯಾ ಅವರನ್ನು ಬಂಧಿಸಲಾಗಿದೆ. ಮಜಿಠಿಯಾ ವಿರುದ್ಧ ಅಕ್ರಮ ಆಸ್ತಿ ಗಳಿಕೆ ಪ್ರಕರಣ ದಾಖಲಾಗಿರುವುದಾಗಿ ಅವರ ಪತ್ನಿ, ಶಾಸಕಿ ಗನಿವ್ ಕೌರ್ ಅವರು ತಿಳಿಸಿದ್ದಾರೆ. ಆದರೆ ವಿಚಕ್ಷಣಾ ದಳವು ಬಂಧನದ ಕಾರಣವನ್ನು ಬಹಿರಂಗಪಡಿಸಿಲ್ಲ.

ಮಜಿಠಿಯಾ ನಿವಾಸದಲ್ಲಿ ವಿಚಕ್ಷಣಾ ದಳ ಶೋಧ ನಡೆಸುತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಸುದ್ದಿಗಳು ಬಿತ್ತರವಾಗುತ್ತಿದ್ದಂತೆ ಅಕಾಲಿ ದಳದ ನಾಯಕರು ಮತ್ತು ಬೆಂಬಲಿಗರು ಮಜೀಥಿಯಾ ನಿವಾಸದತ್ತ ದೌಡಾಯಿಸಿದರು, ಭಗವಂತ್ ಮಾನ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಶಿರೋಮಣಿ ಅಕಾಲಿ ದಳದ ನಾಯಕ ಸುಖ್‌ಬೀರ್ ಸಿಂಗ್ ಬಾದಲ್ ಅವರ ಸಂಬಂಧಿಯಾಗಿರುವ ಮಜಿಠಿಯಾ ವಿರುದ್ಧ 2021ರಲ್ಲಿ ಡ್ರಗ್ಸ್ ಪ್ರಕರಣ ದಾಖಲಾಗಿದ್ದು, ಇದರ ತನಿಖೆಯು ನಡೆಯುತ್ತಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಾಡಿನ ಸಂಪತ್ತನ್ನು ಪೋಷಿಸಬೇಕಾದವರು ಆಪೋಶಿಸಲು ಶುರುವಿಟ್ಟಿರುವುದೇ ನಮ್ಮ ದುರದೃಷ್ಟ.

-ಕೆ.ಎಸ್.ನಿಸಾರ್ ಅಹಮದ್

ಸಂಪಾದಕೀಯ

ಸುಳ್ಳನ್ನು ಸೋಲಿಸುವ ಕಾನೂನು ಸತ್ಯದ ಬಾಯಿ ಮುಚ್ಚಿಸಬಾರದು

ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗುವ ಕೆಲವು ಪೋಸ್ಟ್‌ಗಳು ಸಾಮಾಜಿಕವಾಗಿ ಬೀರುವ ಪ್ರಭಾವವು ಜನರ ಅರಿವಿಗೆ ಈಗಾಗಲೇ ಬಂದಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವು 'ಕರ್ನಾಟಕ ತಪ್ಪು ಮಾಹಿತಿ ಮತ್ತು ಸುಳ್ಳುಸುದ್ದಿ (ನಿಷೇಧ) ಕಾಯ್ದೆ' ಜಾರಿಗೆ ತರಲು ಉದ್ದೇಶಿಸಿರುವುದು ಡಿಜಿಟಲ್ ವೇದಿಕೆಗಳ ಮೂಲಕ ಸುಳ್ಳುಸುದ್ದಿ ಹರಡುವುದನ್ನು ತಡೆಯುವ ತುರ್ತು ಇರುವುದನ್ನು ಸೂಚಿಸುತ್ತಿದೆ. ಸುಳ್ಳುಸುದ್ದಿ, ತಪ್ಪು ಮಾಹಿತಿ ಮತ್ತು ನಿಂದನಾತ್ಮಕ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಸಾರ ಆಗುವುದನ್ನು ತಡೆಯುವ ಉದ್ದೇಶವು ಇದಕ್ಕೆ ಇದೆ. ತಪ್ಪು ಮಾಡಿದವರಿಗೆ ಗರಿಷ್ಠ ಏಳು ವರ್ಷಗಳವರೆಗೆ ಜೈಲು ಶಿಕ್ಷೆ, ₹10 ಲಕ್ಷದವರೆಗೆ ದಂಡ ವಿಧಿಸುವ ಅವಕಾಶವನ್ನು ಈ ಕಾನೂನು ಕಲ್ಪಿಸಲಿದೆ. ಈ ಕಾನೂನಿನ ಅಡಿಯಲ್ಲಿ ಅಪರಾಧ ಎಂದು ಗುರುತಿಸುವ ಕೃತ್ಯಗಳ ವಿಚಾರಣೆ ನಡೆಸಲು ವಿಶೇಷ ನ್ಯಾಯಾಲಯಗಳ ಸ್ಥಾಪನೆ, ತಪ್ಪುದಾರಿಗೆ ಎಳೆಯುವ ಮಾಹಿತಿಯನ್ನು ಸರಿಪಡಿಸುವ ಅಧಿಕಾರವಿರುವ ನಿಯಂತ್ರಣ ಪ್ರಾಧಿಕಾರದ ರಚನೆಯು ಕಾನೂನಿನ ಭಾಗವಾಗಿ ಇರಲಿವೆ. ಸುಳ್ಳುಸುದ್ದಿ ನಿಯಂತ್ರಣದ ವಿಚಾರವಾಗಿ ರಾಜ್ಯ ಸರ್ಕಾರ ಹೊಂದಿರುವ ಕಳಕಳಿಯು ಸರಿಯಾಗಿಯೇ ಇದೆ. ವಿಶ್ವ ಆರ್ಥಿಕ ವೇದಿಕೆಯ 2024ರ ವರದಿಯೊಂದು, ಸುಳ್ಳು ಸುದ್ದಿ ಹಾಗೂ ತಪ್ಪುಮಾಹಿತಿಯ ಕೆಟ್ಟ ಪರಿಣಾಮಕ್ಕೆ ಒಳಗಾಗುವ ಸಾಧ್ಯತೆ ಅತಿಹೆಚ್ಚಾಗಿರುವ ದೇಶ ಭಾರತ ಎಂದು ಹೇಳಿದೆ. ಅಮೆರಿಕ, ಫ್ರಾನ್ಸ್ ಮತ್ತು ಬ್ರಿಟನ್ನಿನ ಜನರಿಗಿಂತ ಭಾರತದ ಜನ ಸುಳ್ಳುಸುದ್ದಿ ಪ್ರಭಾವಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚು ಎಂದು ಈ ವರ್ಷದ ಮೇ ತಿಂಗಳಲ್ಲಿ ಪ್ರಕಟವಾದ ಇನ್ನೊಂದು ಅಧ್ಯಯನ ವರದಿ ಹೇಳಿದೆ. ಭಾರತದಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆಯು ಹೆಚ್ಚಿರುವುದು, ಡಿಜಿಟಲ್ ವೇದಿಕೆಗಳನ್ನು ಹಲವರು ಸುದ್ದಿ ತಿಳಿಯಲು ಪ್ರಧಾನ ಮೂಲವಾಗಿ ನೆಚ್ಚಿಕೊಂಡಿರುವುದು ಸಮಸ್ಯೆಯನ್ನು ಇನ್ನಷ್ಟು ತೀವ್ರವಾಗಿಸಿವೆ. ರಾಜಕೀಯ ಧ್ರುವೀಕರಣ ಹೆಚ್ಚಾಗುತ್ತಿರುವ ಹಾಗೂ ತಪ್ಪು ಮಾಹಿತಿಯನ್ನು ಅಸ್ತ್ರವನ್ನಾಗಿ ಬಳಸುವ ಪ್ರವೃತ್ತಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಸುಳ್ಳುಸುದ್ದಿಗಳಿಂದ ಆಗುವ ಅಪಾಯ ದೊಡ್ಡದಾಗಿರುತ್ತದೆ.



ರಾಜಕೀಯ ಧ್ರುವೀಕರಣ ಹೆಚ್ಚಾಗುತ್ತಿರುವ ಹಾಗೂ ತಪ್ಪು ಮಾಹಿತಿಯನ್ನು ಅಸ್ತ್ರವನ್ನಾಗಿ ಬಳಸುವ ಪ್ರವೃತ್ತಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಸುಳ್ಳುಸುದ್ದಿಗಳಿಂದ ಆಗುವ ಅಪಾಯ ದೊಡ್ಡದಾಗಿರುತ್ತದೆ

ಆನ್‌ಲೈನ್ ಮೂಲಕ ಬಿತ್ತರವಾಗುವ ಸುಳ್ಳು ಮಾಹಿತಿಗಳನ್ನು ನಿರ್ವಹಿಸಲು ಕರಡು ಮಸೂದೆಯು ವ್ಯವಸ್ಥಿತವಾದ ಚೌಕಟ್ಟೊಂದನ್ನು ಒದಗಿಸಿಕೊಡುತ್ತದೆ ಎಂದು ಅದರ ಪರವಾಗಿ ಇರುವವರು ವಾದಿಸುತ್ತಿದ್ದಾರೆ. ಕಾನೂನಿನ ಚೌಕಟ್ಟೊಂದನ್ನು ರೂಪಿಸುವ ಮೂಲಕ ಸರ್ಕಾರವು ಅಪಾಯಕಾರಿ ಮಾಹಿತಿಯ ವಿರುದ್ಧ ತ್ವರಿತವಾಗಿ ಕ್ರಮ ಜರುಗಿಸುವ ಉದ್ದೇಶ ಹೊಂದಿದೆ. ಅಸಭ್ಯ, ಸ್ತ್ರೀದ್ವೇಷಿ ಹಾಗೂ ಸನಾತನ ಧರ್ಮಕ್ಕೆ ಅಗೌರವ ತರುವಂತಹ ವಿಷಯಗಳನ್ನು ನಿಷೇಧಿಸುವ ಮೂಲಕ ಸರ್ಕಾರವು ಸಾಂಸ್ಕೃತಿಕ ಭಾವನೆಗಳನ್ನು ರಕ್ಷಿಸುವ ಇರಾದೆಯನ್ನೂ ಹೊಂದಿದೆ. ಆದರೆ, ಇತರ ಧರ್ಮಗಳಿಗೆ ಅವಮಾನ ಎಸಗುವ ಪೋಸ್ಟ್‌ಗಳ ಬಗ್ಗೆ ಯಾವ ಕ್ರಮ ಜರುಗಿಸಲಾಗುತ್ತದೆ ಎಂಬ ಪ್ರಶ್ನೆ ಇಲ್ಲಿ ಎದುರಾಗುತ್ತದೆ. ಆನ್‌ಲೈನ್ ವರ್ತನೆಗಳು ಜವಾಬ್ದಾರಿಯುತವಾಗಿ ಇರುವಂತೆ ನೋಡಿಕೊಳ್ಳುವ ಹಾಗೂ ಮಾಹಿತಿ ಖಚಿತವಾಗಿರುವಂತೆ ನೋಡಿಕೊಳ್ಳುವ ಗುರಿಯನ್ನು ಉದ್ದೇಶಿತ ಕಾನೂನು ಹೊಂದಿದೆ. ಆದರೆ ಈ ಕಾನೂನು ಒಂದಿಷ್ಟು ಕಳವಳಗಳನ್ನೂ ಮೂಡಿಸುತ್ತದೆ. ಅವುಗಳ ಪೈಕಿ ಬಹಳ ಮುಖ್ಯವಾದುದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎದುರಾಗಬಹುದಾದ ಅಪಾಯ. 'ಸುಳ್ಳುಸುದ್ದಿ' ಹಾಗೂ 'ತಪ್ಪು ಮಾಹಿತಿ' ಎಂಬ ಪದಗಳ ವ್ಯಾಖ್ಯಾನವು ಬಹಳ ಅಸ್ಪಷ್ಟ. ಹೀಗಾಗಿ ಅವುಗಳನ್ನು ವಿಶಾಲಾರ್ಥದಲ್ಲಿ ವ್ಯಾಖ್ಯಾನಿಸಲು ಸಾಧ್ಯವಾಗುತ್ತದೆ. ಅಭಿಪ್ರಾಯ, ವ್ಯಂಗ್ಯ, ಧಾರ್ಮಿಕ ಕರೆ ಮುಂತಾದವನ್ನು ಕಾನೂನಿನ ವ್ಯಾಪ್ತಿಯಿಂದ ಹೊರಗಿಡಲಾಗುತ್ತದೆ ಎಂದು ಕರಡು ಮಸೂದೆ ಹೇಳಿದೆ. ಆದರೆ ರಾಜಕೀಯವಾಗಿ ಬಹಳ ಸೂಕ್ಷ್ಮವಾಗಿರುವ ಈಗಿನ ಕಾಲಘಟ್ಟದಲ್ಲಿ ಇವುಗಳ ನಡುವಿನ ವ್ಯತ್ಯಾಸವು ಬಹಳ ತೆಳುವಾಗಿಬಿಡುತ್ತದೆ. ಹೀಗಾಗಿ, ಕರಡು ಮಸೂದೆಯ ಬಗ್ಗೆ ಇನ್ನಷ್ಟು ಚರ್ಚೆ ಆಗುವ ಅಗತ್ಯ ಇದೆ ಎಂದು ಐ.ಟಿ., ಬಿ.ಟಿ. ಸಚಿವ ಪ್ರಿಯಾಂಕ್ ಖರ್ಗೆ ಹೇಳಿರುವುದು ಸ್ವಾಗತಾರ್ಹ.

ಪತ್ರಿಕಾ ಸ್ವಾತಂತ್ರ್ಯದ ಸೂಚ್ಯಂಕದಲ್ಲಿ ಭಾರತವು 180 ದೇಶಗಳ ಪೈಕಿ 159ನೇ ಸ್ಥಾನದಲ್ಲಿದೆ. ಸತ್ಯ ಯಾವುದು ಎಂಬುದನ್ನು ತೀರ್ಮಾನಿಸುವ ಅಧಿಕಾರವನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವರ ನೇತೃತ್ವದ ಸಮಿತಿಯೊಂದಕ್ಕೆ ನೀಡುವುದು ಅಪಾಯಕಾರಿ ಕ್ರಮ ಆಗುತ್ತದೆ. ಹೀಗೆ ಮಾಡುವುದರಿಂದ, ರಾಜ್ಯ ಸರ್ಕಾರಕ್ಕೆ ಅಗತ್ಯಕ್ಕಿಂತ ಹೆಚ್ಚಿನ ಅಧಿಕಾರ ಕೊಟ್ಟಂತೆಯೂ ಆಗುತ್ತದೆ. ಈ ಮಸೂದೆಯ ಕರಡನ್ನು ಸಿದ್ಧಪಡಿಸುವಾಗ ರಾಜ್ಯ ಸರ್ಕಾರವು ಸಾರ್ವಜನಿಕರ ಜೊತೆ ಸಮಾಲೋಚನೆ ನಡೆಸಿಲ್ಲ. ಇದು ಗಂಭೀರ ಲೋಪ. ಸುಳ್ಳುಸುದ್ದಿಗಳಿಗೆ ಹಿಂಸಾಕೃತ್ಯಗಳನ್ನು ಪ್ರಚೋದಿಸುವ ಶಕ್ತಿ ಇದೆ. ಹೀಗಿರುವಾಗ, ಇಂತಹ ಸುದ್ದಿಗಳನ್ನು ನಿಗ್ರಹಿಸುವುದು ಅಗತ್ಯ ಹೌದು. ಹಾಗೆಂದ ಮಾತ್ರಕ್ಕೆ, ಸುಳ್ಳುಸುದ್ದಿಯ ಸಮಸ್ಯೆಯನ್ನು ಪರಿಹರಿಸಲು ತರುವ ಕ್ರಮವು ಮೂಲ ಸಮಸ್ಯೆಗಿಂತಲೂ ಹೆಚ್ಚು ಅಪಾಯಕಾರಿ ಆಗಿಬಿಡಬಾರದು! ಹಕ್ಕುಗಳನ್ನು ರಕ್ಷಿಸುವ ಕ್ರಮಗಳನ್ನು, ಪಾರದರ್ಶಕತೆಯನ್ನು ಖಾತರಿಪಡಿಸುವ ಅಂಶಗಳನ್ನು, ಇಡೀ ಪ್ರಕ್ರಿಯೆಯಲ್ಲಿ ನ್ಯಾಯಾಂಗದ ಮೇಲ್ವಿಚಾರಣೆ ಇರುವಂತೆ ಮಾಡುವುದನ್ನು ಕಾನೂನಿನಲ್ಲಿ ಸೇರಿಸಬೇಕು. ಇಲ್ಲವಾದರೆ, ಸುಳ್ಳನ್ನು ಸೋಲಿಸುವ ಹೆಸರಿನಲ್ಲಿ ಸತ್ಯದ ಬಾಯಿ ಮುಚ್ಚಿಸುವ ಕೆಲಸ ಆಗಿಬಿಡಬಹುದು.

ಅತಿಯಾದರೆ ಭಾವುಕತೆಯೂ ಕುತ್ತು



ಪಡಸಾಲೆ

ರಘುನಾಥ ಚ.ಹ.

ಭಾವುಕತೆ ಇಲ್ಲದೆ ಹೋದರೆ ದೇಶ, ಭಾಷೆ, ಸಮುದಾಯ, ಸಮಾಜ ಸೇರಿದಂತೆ ನಮ್ಮ ಬದುಕಿನ ಭಾಗವಾದ ಯಾವುದರೊಂದಿಗೂ ಗಾಢ ಸಂಬಂಧ ಉಳಿಸಿಕೊಳ್ಳಲಾರೆವು. ಆದರೆ, ಕೆಲವೊಮ್ಮೆ ಈ ಭಾವುಕತೆಯೇ ನಮ್ಮ ವಿವೇಕವನ್ನು ಮಸುಕು ಮಾಡುತ್ತದೆ ಹಾಗೂ ಭಾವುಕತೆಯ ಅತಿರೇಕದಲ್ಲಿ ನಮ್ಮ ಜೀವಕೋಶಕ್ಕೆ ನಾವೇ ಹಾನಿ ಮಾಡಿಕೊಳ್ಳುತ್ತಿರುತ್ತೇವೆ. ಇದಕ್ಕೆ ಹೊಸ ಉದಾಹರಣೆ, ಕನ್ನಡದ ಬಗ್ಗೆ ತಪ್ಪು ಗ್ರಹಿಕೆಯಿಂದ ಮಾತನಾಡಿರುವ ಚಿತ್ರನಟ ಕಮಲ್ ಹಾಸನ್ ವಿರುದ್ಧ ಕನ್ನಡಿಗರು ಮುಗಿಬಿದ್ದ ಪ್ರಕರಣ.

'ತಮಿಳಿನಿಂದ ಕನ್ನಡ ಹುಟ್ಟಿತು' ಎನ್ನುವ ಕಮಲ್ ಹಾಸನ್ ಅವರ ಹೇಳಿಕೆಯನ್ನು ಕನ್ನಡಿಗರು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತಲೇ, ಆ ಹೇಳಿಕೆಗೆ ಸಂಬಂಧಿಸಿದಂತೆ ನಮ್ಮ ಪ್ರತಿಕ್ರಿಯೆಗಳಿಂದ ಕನ್ನಡದ ಘನತೆಯೇನೂ ಹೆಚ್ಚಲಿಲ್ಲ ಎನ್ನುವುದನ್ನೂ ಒಪ್ಪಿಕೊಳ್ಳಬೇಕು. ನಟನೆಯ ಸೂಕ್ಷ್ಮಗಳನ್ನು ಅರಗಿಸಿಕೊಂಡ ಭಾರತದ ಕೆಲವೇ ಕೆಲವು ಸಂವೇದನಾಶೀಲ ಕಲಾವಿದರಲ್ಲಿ ಕಮಲ್ ಅವರೂ ಒಬ್ಬರು. ಆದರೆ, ಕನ್ನಡಕ್ಕೆ ಸಂಬಂಧಿಸಿದಂತೆ ಅವರು ಆಡಿದ ಮಾತು ಓರ್ವ ಪ್ರಬುದ್ಧ ಕಲಾವಿದನಿಗೆ ತಕ್ಕಂತಿರದೆ, ವೇದಿಕೆಯ ಔಚಿತ್ಯವನ್ನು ಮರೆತು ವಾಚಾಳಿಯಾಗುವ ರಾಜಕಾರಣಿಯ ನಡವಳಿಕೆಯಂತಿತ್ತು. ಯಾವ ಭಾಷೆ ಯಾವುದರ ತಾಯಿ ಎನ್ನುವುದನ್ನು ನಿರ್ಣಯಿಸುವುದಕ್ಕೆ ಕಮಲ್ ಹಾಸನ್ ಭಾಷಾತಜ್ಞರಲ್ಲ ಹಾಗೂ ತಮ್ಮ ಮಾತಿಗವರು ಯಾವ ದಾಖಲೆಯನ್ನೂ ನೀಡಿಲ್ಲ. ಕನ್ನಡದ ಹುಟ್ಟಿನ ಬಗೆಗಿನ ಅವರ ಮಾತು ಅವಿವೇಕದಿಂದ ಕೂಡಿದ್ದು ಮಾತ್ರವಲ್ಲ, ಉದ್ಧಟತನದ್ದೂ ಹೌದು.

ಆದರೆ, ಕಮಲ್ ಅವರ ಮಾತಿಗೆ ಕನ್ನಡಿಗರಾದ ನಾವು ನೀಡಿದ ಪ್ರತಿಕ್ರಿಯೆಯೂ ಭಾವಾತಿರೇಕದಿಂದ ಕೂಡಿತ್ತು, ಒರಟಾಗಿತ್ತು ಎನ್ನುವುದನ್ನು ವಿಷಾದದಿಂದಲೇ ಹೇಳಬೇಕಾಗಿದೆ. ದೇಶದಲ್ಲಿ ಚಾಲ್ತಿಯಲ್ಲಿರುವ ಭಾಷಾ ರಾಜಕಾರಣದ ಹಿನ್ನೆಲೆಯಲ್ಲಿ ನೋಡಿದರೂ ನಮ್ಮ ಪ್ರತಿಕ್ರಿಯೆ ಅಸೂಕ್ಷ್ಮವಾದುದೇ ಆಗಿದೆ.

ಕ್ಷಮೆ ಕೋರುವಂತೆ ಕಮಲ್ ಹಾಸನ್ ಅವರ ಮೇಲೆ ಒತ್ತಾಯ ಹೇರಿದ್ದು ಹಾಗೂ ಕ್ಷಮೆ ಕೋರದೆ ಹೋದರೆ ಅವರ ಅಭಿನಯದ 'ಥಗ್ ಲೈಫ್' ಸಿನಿಮಾಕ್ಕೆ ಕರ್ನಾಟಕದಲ್ಲಿ ತೆರೆಕಾಣಲು ಅವಕಾಶ ನೀಡುವುದಿಲ್ಲವೆನ್ನುವ ಮನಃಸ್ಥಿತಿ ಆತಂಕ ಹುಟ್ಟಿಸುವಂತಹದ್ದು; ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹಂಬಲಿಸುವವರು ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಂಬಿಕೆಯುಳ್ಳವರು ಒಪ್ಪಲು ಸಾಧ್ಯವಿಲ್ಲದಂತಹದ್ದು.

ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಕಮಲ್ ಅವರಿಗೆ ಸ್ವಾತಂತ್ರ್ಯವಿದೆ ಹಾಗೂ ಅದನ್ನು ವಿರೋಧಿಸಲಿಕ್ಕೆ ನಮಗೂ ಹಕ್ಕಿದೆ. ತಮಿಳಿನಿಂದ ಕನ್ನಡ ಹುಟ್ಟಿದೆ ಎನ್ನುವಂತಹ ಅಭಿಪ್ರಾಯಗಳು ವ್ಯಕ್ತವಾದಾಗ, ಅವುಗಳ ಹುಸಿತನವನ್ನು ಸಾಬೀತುಪಡಿಸುವ ಅಕಡೆಮಿಕ್ ಪ್ರಯತ್ನಗಳು ನಡೆಯಬೇಕು. ದುರದೃಷ್ಟವಶಾತ್, ಮಾಧ್ಯಮಗಳಲ್ಲಿನ ಕೆಲವು ಅವಸರದ ಬರಹಗಳ ಹೊರತು, ಕನ್ನಡದ ಅನನ್ಯತೆ ಹಾಗೂ ದಕ್ಷಿಣದ ಭಾಷೆಗಳ ನಡುವಿನ ಒಡಹುಟ್ಟು ನಂಟನ್ನು ಮನವರಿಕೆ ಮಾಡಿಕೊಡುವ ಪ್ರಯತ್ನಗಳು ನಡೆದದ್ದು ವಿರಳ.

ಕನ್ನಡದ ಮೇಲಿನ ತಮ್ಮ ಪ್ರೀತಿಯನ್ನು ಕಮಲ್ ಹೇಳಿಕೊಂಡ ನಂತರವೂ, ಅವರ ಮೇಲಿನ ಮಾತಿನ ದಾಳಿ ಮುಂದುವರೆಯಿತು. ಕ್ಷಮೆ ಕೇಳದ ಹೊರತು ಕಮಲ್ ಜೊತೆ ಮತ್ತೊಂದು ಮಾತು ಸಾಧ್ಯವೇ ಇಲ್ಲ ಎನ್ನುವ ಮನಃಸ್ಥಿತಿ ಪ್ರದರ್ಶನಗೊಂಡಿತು.

ನಮ್ಮ ಪ್ರತಿಕ್ರಿಯೆಗಳ ಭರಾಟೆ ಎಷ್ಟರಮಟ್ಟಿಗಿತ್ತೆಂದರೆ, ವಿವಾದಕ್ಕೆ ಕಾರಣವಾದ ಮಾತನ್ನು ಕಮಲ್ ಆಡಿದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕಾರಣಕ್ಕೆ ನಟ ಶಿವರಾಜ್‌ಕುಮಾರ್ ಅವರೂ ಟೀಕೆಗಳನ್ನು ಎದುರಿಸಬೇಕಾಯಿತು. ಯಾವ ಭಾಷೆಯ ಹುಟ್ಟು ಯಾವುದರಿಂದ ಎನ್ನುವುದು ತಿಳಿಯಲಿಕ್ಕೆ ಶಿವರಾಜ್‌ಕುಮಾರ್ ಅವರೇನು ಭಾಷಾತಜ್ಞರೇ? ಶಿವರಾಜ್‌ಕುಮಾರ್ ಕನ್ನಡ ಪ್ರೇಮವನ್ನು ಶಂಕಿಸಿದವರಿಗೆ, ಅವರ ತಂದೆ ರಾಜ್‌ಕುಮಾರ್ ಕನ್ನಡ ಚಳವಳಿಗೆ ಜೀವಶಕ್ತಿಯಾಗಿ ಪರಿಣಮಿಸಿದ್ದುದಾದರೂ ನೆನಪಿರಬೇಕಾಗಿತ್ತು. ನಡೆದುಬಂದ ದಾರಿಯನ್ನು ಮರೆಯುವುದಾದರೆ, ಭಾಷೆಯ ಬಗೆಗಿನ ನಮ್ಮ ಅಭಿಮಾನ ಪೊಳ್ಳುತನದಿಂದ ಕೂಡಿದ್ದು ಎಂದು ಭಾವಿಸಬೇಕಾಗುತ್ತದೆ.

ನಾಡು- ನುಡಿಗೆ ಸಂಬಂಧಿಸಿದ ವಿದ್ಯಮಾನಗಳಿಗೆ ಶ್ರೀಸಾಮಾನ್ಯರು ಹಾಗೂ ಕನ್ನಡ ಚಳವಳಿಯಲ್ಲಿ ತೊಡಗಿಕೊಂಡವರು ಭಾವಾವೇಶದಿಂದ ಪ್ರತಿಕ್ರಿಯಿಸುವುದು ಸಹಜ. ಆದರೆ, ಹೈಕೋರ್ಟ್ ಹಾಗೂ ಸರ್ಕಾರದ ಪ್ರತಿನಿಧಿಗಳೂ ಜನರ ಭಾವೋದ್ವೇಗದ ಭಾಗವಾಗಿ ಕಮಲ್ ಕ್ಷಮೆಗೆ ಒತ್ತಾಯಿಸಿದ್ದು ಆಶ್ಚರ್ಯಕರ. ಜನಪರ ಚಿಂತನೆಗಳ ಲೇಖಕರೊಂದಿಗೆ ಬಲಪಂಥದ ಒಲವಿನವರೂ ಕಮಲ್ ವಿರುದ್ಧ ದನಿಯೆತ್ತಿದ್ದು ಕನ್ನಡ ಸಾಂಸ್ಕೃತಿಕ ಲೋಕದ ಇತ್ತೀಚಿನ ವರ್ಷಗಳಲ್ಲಿನ ವಿಸ್ಮಯಗಳಲ್ಲೊಂದು.

ಇವೆಲ್ಲ ಅನಪೇಕ್ಷಿತ ಘಟನೆಗಳ ಹಿನ್ನೆಲೆಯಲ್ಲಿ, ಕಮಲ್ ಕ್ಷಮೆ ಕೇಳುವ ಮೂಲಕ ಪ್ರಕರಣ ಅತಿರೇಕಕ್ಕೆ ಹೋಗದಂತೆ ನೋಡಿಕೊಳ್ಳಬಹುದಿತ್ತು ಎಂದು ಹೇಳಬಹುದು. ಆದರೆ, ತನ್ನ ಮಾತು ಕ್ಷಮೆ ಕೇಳುವಷ್ಟು ಘೋರವಾದುದಲ್ಲ ಎಂದು ಕಮಲ್‌ಗೆ ಅನ್ನಿಸಿದಾಗ, ಅವರಿಂದ ಬಲವಂತವಾಗಿ ಕ್ಷಮೆ ಕೇಳಿಸುವುದರಲ್ಲಿ ಅರ್ಥವಿಲ್ಲ. ಸ್ವಯಂಪ್ರೇರಣೆಯಿಂದ ಹೃದಯಪೂರ್ವಕವಾಗಿ ಕೋರುವ ಕ್ಷಮೆಗೂ ಒತ್ತಾಯಪೂರ್ವಕವಾದ ಕ್ಷಮೆಗೂ ವ್ಯತ್ಯಾಸವಿದೆ. ಒತ್ತಡ, ಭಯ, ಅಳುಕು, ಲಾಭದ ಲೆಕ್ಕಾಚಾರಗಳಿಂದ ಕೂಡಿದ ಕ್ಷಮೆಯನ್ನು ಅಪೇಕ್ಷಿಸುವುದು ಕನ್ನಡ ಪ್ರತಿಪಾದಿಸುವ 'ವಿವೇಕ ಪರಂಪರೆ'ಗೆ ತಕ್ಕುದಾದುದಲ್ಲ.

> ಕನ್ನಡ ತಮಿಳುಜನ್ಯ ಎಂದು ಹೇಳಿದ ನಟ ಕಮಲ್ ಹಾಸನ್ ವಿರುದ್ಧ ಕನ್ನಡಿಗರು ಮುಗಿಬಿದ್ದರು. ಆದರೆ, ಆ ಪ್ರತಿರೋಧ ವಿವೇಕದ ನಡೆಯಾಗಿತ್ತೇ? ಕನ್ನಡದ ಹಿತಕ್ಕೆ ಪೂರಕವಾಗಿತ್ತೇ? ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವಂತೆ ಇತ್ತೇ? ಕ್ಷಮೆಯನ್ನು ಅಪೇಕ್ಷಿಸಿದ ರೀತಿಯು ಕನ್ನಡ ಪ್ರತಿಪಾದಿಸುವ 'ವಿವೇಕ ಪರಂಪರೆ'ಗೆ ತಕ್ಕುದಾಗಿತ್ತೇ?

ಕಮಲ್ ಅವರಿಗೆ ಎದುರಾದ ಟೀಕೆಗಳಲ್ಲಿ, ತಮಿಳಿನ ಬಗ್ಗೆ ಕನ್ನಡಿಗರ ಮನಸ್ಸಿನಲ್ಲಿ ಇರಬಹುದಾದ ಸುಪ್ತ ಅಸಮಾಧಾನದ ಪಾತ್ರವೂ ಇರುವಂತಿದೆ. ಕನ್ನಡ ಮತ್ತು ತಮಿಳನ್ನು ವಿರುದ್ಧ ಪದಗಳ ರೂಪದಲ್ಲಿ ನೋಡಲಿಕ್ಕೆ ಕನ್ನಡ ಚಳವಳಿಯ ಇತಿಹಾಸ ಒತ್ತಾಯಿಸುತ್ತದೆ. ಆದರೆ, ವರ್ತಮಾನದಲ್ಲಿ ಒಟ್ಟಿಗೆ ಹೆಜ್ಜೆ ಹಾಕುವುದರಿಂದ ಎರಡೂ ಭಾಷೆಗಳಿಗೆ ಲಾಭವಿದೆ. ತಮಿಳನ್ನು ಎದುರು ಪಾಳಯದಲ್ಲಿ ನಿಲ್ಲಿಸುವುದರಿಂದ ಕನ್ನಡಕ್ಕೆ ಯಾವ ಉಪಯೋಗವೂ ಇಲ್ಲ. ತಮಿಳಿನೊಂದಿಗಿನ ತಿಕ್ಕಾಟದಲ್ಲಿ ಹಿಂದಿ ವಿರುದ್ಧದ ದಕ್ಷಿಣದ ದನಿ ದುರ್ಬಲಗೊಳ್ಳುತ್ತದೆ. ತಮಿಳಿನಿಂದ ಕನ್ನಡ ಜನಿಸಿದೆ ಎನ್ನುವ ಮಾತನ್ನು ಒಪ್ಪಿಕೊಳ್ಳಲಾಗದು. ಆದರೆ, ತಾಯ್ನುಡಿಯನ್ನು ಎತ್ತಿಹಿಡಿಯುವುದರಲ್ಲಿ ಹಾಗೂ ಹಿಂದಿ ವಿರೋಧಿ ಆಂದೋಲನದಲ್ಲಿ ತಮಿಳುನಾಡು ಮುಂಚೂಣಿಯಲ್ಲಿರುವುದನ್ನು ಅಲ್ಲಗಳೆಯಲಾದೀತೆ? ತಮಿಳು ಹಾಗೂ ತಮಿಳರನ್ನು ಹೊರತುಪಡಿಸಿ ಹಿಂದಿಯ ಸೊಲ್ಲಿಗೆ ಪರಿಣಾಮಕಾರಿ ಪ್ರತಿರೋಧ ರೂಪಿಸುವುದು ಕಷ್ಟ.

ಕಮಲ್ ಅವರ ಮಾತಿಗೆ ಎದುರಾದ ತೀವ್ರ ಟೀಕೆಗಳು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಇಂಗ್ಲಿಷ್ ಬಗೆಗಿನ ಮಾತಿಗೆ ವ್ಯಕ್ತವಾಗದಿರುವುದು ಭಾಷಾ ರಾಜಕಾರಣಕ್ಕೆ ಸಂಬಂಧಿಸಿದ ನಮ್ಮ ಅಸ್ಪಷ್ಟತೆ ಹಾಗೂ ದ್ವಂದ್ವಕ್ಕೆ ನಿದರ್ಶನದಂತಿದೆ. 'ಇಂಗ್ಲಿಷ್ ಮಾತನಾಡುವವರು ನಾಚಿಕೊಳ್ಳುವ ಕಾಲ ಬರಲಿದೆ' ಎನ್ನುವ ಅಮಿತ್ ಶಾ ಅವರ ಮಾತಿನ ಹಿನ್ನೆಲೆಯಲ್ಲಿರುವುದು ಹಿಂದಿ ವ್ಯಾಪಾರಿಯ ಮನಸ್ಸು ಎನ್ನುವುದು ಭಾಷಾ ರಾಜಕಾರಣ ಬಲ್ಲ ಯಾರಿಗಾದರೂ ಸುಲಭವಾಗಿ ಅರ್ಥ ಆಗುವಂತಹದ್ದು. ಮುಂದೆಂದೋ ಒಮ್ಮೆ ಇಂಗ್ಲಿಷ್ ಮಾತನಾಡಿದರೆ ನಾಚುವ ಕಾಲ ಬರುತ್ತದೆಯೋ ಇಲ್ಲವೋ ತಿಳಿಯದು. ಆದರೆ, ಕನ್ನಡ ಮಾತನಾಡಲು ನಾಚುವ ಹಾಗೂ ಅಳುಕುವ ಕಾಲವಂತೂ ಬಂದಾಗಿದೆ. ಬೆಂಗಳೂರಿನ ಕಾಲೇಜೊಂದರಲ್ಲಿ ಕನ್ನಡ ಮಾತನಾಡಿದ ಬೋಧಕರೊಬ್ಬರ ಕೆಲಸಕ್ಕೆ ಕುತ್ತೊದಗಿದ್ದ ಪ್ರಕರಣ ಇತ್ತೀಚೆಗಷ್ಟೇ ನಡೆದಿದೆ.

ಇಂಗ್ಲಿಷನ್ನು ಹೀಗಳೆವ ಅಮಿತ್ ಶಾ ಅವರ ಮಾತಿನ ಹಿಂದಿರುವುದು ಹಿಂದಿ ಪ್ರೇಮವೇ ಹೊರತು, ದಕ್ಷಿಣದ ಭಾಷೆಗಳ ಬಗೆಗಿನ ಒಲವಲ್ಲ. 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯ ವರದಿ, ಕಳೆದ ಹತ್ತು ವರ್ಷಗಳ (2014-2025) ಅವಧಿಯಲ್ಲಿ ಸಂಸ್ಕೃತದ ಪ್ರಚಾರಕ್ಕಾಗಿ ಕೇಂದ್ರ ಸರ್ಕಾರ ₹2,532.59 ಕೋಟಿ ಖರ್ಚು ಮಾಡಿದೆ ಎಂದು ಹೇಳುತ್ತಿದೆ. ಇದೇ ಅವಧಿಯಲ್ಲಿ, ಹಿಂದಿ, ಸಿಂಧಿ ಹಾಗೂ ಉರ್ದು ಭಾಷೆಗಳಿಗೆ ₹1,317.96 ಕೋಟಿ ಅನುದಾನ ದೊರೆತಿದೆ. ಶಾಸ್ತ್ರೀಯ ಭಾಷೆಗಳೆಂದು ಕೇಂದ್ರ ಸರ್ಕಾರದ ಮಾನ್ಯತೆ ಪಡೆದಿರುವ ಕನ್ನಡ, ತಮಿಳು, ತೆಲುಗು, ಮಲಯಾಳ ಹಾಗೂ ಒಡಿಯಾ ಭಾಷೆಗಳ ಅಭಿವೃದ್ಧಿಗೆ ದೊರೆತಿರುವ ಅನುದಾನ ₹147.56 ಕೋಟಿಯಷ್ಟೇ. ಈ ವ್ಯತ್ಯಾಸವೇ ಕೇಂದ್ರ ಸರ್ಕಾರದ ಭಾಷಾ ಆದ್ಯತೆ ಯಾವ ಬಗೆಯದೆನ್ನುವುದನ್ನು ಸೂಚಿಸುವಂತಿದೆ.

ಸಂಸ್ಕೃತಕ್ಕೆ ಪ್ರತಿವರ್ಷ ಸರಾಸರಿ ಸುಮಾರು ₹230 ಕೋಟಿಗೂ ಹೆಚ್ಚು ಮೊತ್ತ ದೊರೆತಿದ್ದರೆ, ಉಳಿದ ಐದು ಭಾಷೆಗಳಿಗೆ ವಾರ್ಷಿಕವಾಗಿ ದೊರೆತಿರುವುದು ₹13.41 ಕೋಟಿ ಮಾತ್ರ. ಸಂಸ್ಕೃತಕ್ಕೆ ದೊರೆತಿರುವ ಗಂಟಿನ ಶೇ 5ರಷ್ಟು ತಮಿಳಿಗೆ ದೊರೆತಿದ್ದರೆ, ಕನ್ನಡ ಹಾಗೂ ತೆಲುಗು ಭಾಷೆಗಳಿಗೆ ದೊರೆತಿರುವುದು ಶೇ 0.5ಕ್ಕೂ ಕಡಿಮೆ. ಸಂಸ್ಕೃತ ಹಾಗೂ ಹಿಂದಿಗಾಗಿ ತಮ್ಮ ಹೃದಯ ಮಿಡಿತವನ್ನು ಮೀಸಲಾಗಿ ಇರಿಸುವವರಿಂದ ಕನ್ನಡವೂ ಸೇರಿದಂತೆ ದಕ್ಷಿಣದ ಭಾಷೆಗಳ ಹಿತ ಸಾಧ್ಯವಾದೀತೆ?

ಹಿಂದಿ ಆಕ್ಟೋಪಸ್‌ನಂತೆ ಕನ್ನಡದ ಪರಿಸರವನ್ನು ಆವರಿಸಿಕೊಳ್ಳುತ್ತಿದೆ. ಬೆಂಗಳೂರಿನ ಕಾರ್ಪೊರೇಟ್ ಸಂಸ್ಥೆಗಳ ಕಚೇರಿಗಳಲ್ಲಿ, ಬ್ಯಾಂಕುಗಳಲ್ಲಿ, ಕೆಲವು ಅಂಚೆ ಕಚೇರಿಗಳಲ್ಲಿ ಕನ್ನಡೇತರರು ತುಂಬಿಕೊಂಡಿದ್ದಾಗಿದೆ. ಇವರಲ್ಲಿ ಅನೇಕರು ಹಿಂದಿ ಬಾರದವರನ್ನು ಕೇವಲವಾಗಿ ನೋಡುವವರು ಹಾಗೂ ಕನ್ನಡದ ಬಗ್ಗೆ ತಿರಸ್ಕಾರವುಳ್ಳವರು. ನಡೆ- ನುಡಿಯಲ್ಲಿ ಮೇಲರಿಮೆಯನ್ನು ಆವಾಹಿಸಿಕೊಂಡಿರುವವರು ಕನ್ನಡವನ್ನಷ್ಟೇ ಮಾತನಾಡುವವರಲ್ಲಿ ನಾಚಿಕೆ ಹುಟ್ಟಿಸಬಲ್ಲರು. ಶಾಲಾ- ಕಾಲೇಜುಗಳಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಕನ್ನಡದ ವಿದ್ಯಾರ್ಥಿಗಳು ಭಾಷಾ ದಲಿತರು. ಬಹುತೇಕ ಶಾಲಾ-ಕಾಲೇಜುಗಳ ಪರಿಸರದಲ್ಲಿ ಕನ್ನಡ ನಾಚಿಕೆ ಹುಟ್ಟಿಸುವ ಭಾಷೆಯಾಗಿ ಸಾಕಷ್ಟು ವರ್ಷಗಳಾದವು. ಕನ್ನಡಿಗರಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ ಎಂದು ನಂಬಿದವರು ಲೋಕದ ಕಣ್ಣಿಗೀಗ ಬದುಕಲು ಗೊತ್ತಿಲ್ಲದವರು.

ಹಿಂದಿ ಹೇರಿಕೆಯಲ್ಲಿ ನಿರತರಾಗಿರುವ ರಾಜಕಾರಣಿಗಳ ಮೈಮನಸ್ಸಿನ ತುಂಬೆಲ್ಲ ಕೋಮುವಾದ ಆವರಿಸಿಕೊಂಡಿರುವುದನ್ನು ನೋಡಿದರೆ, ಹಿಂದಿ ಹೇರಿಕೆಯ ವಿರೋಧ ಭಾರತೀಯ ಸಮಾಜದ ಜಾತ್ಯತೀತ ಸ್ವರೂಪದ ಸಂಕೇತವೂ ಹೌದು. ಹಿಂದಿ ಹೇರಿಕೆಯ ಅಪಾಯಗಳ ಬಗ್ಗೆ ಸ್ಪಷ್ಟತೆಯಿದ್ದಾಗ, ಕನ್ನಡದ ಬಗ್ಗೆ ನೆರೆಹೊರೆಯ ಯಾರಾದರೂ ಲಘುವಾಗಿ ಮಾತನಾಡಿದಾಗ ನಾವು ವಿವೇಚನೆ ಕಳೆದುಕೊಳ್ಳುವುದಿಲ್ಲ. ಕಮಲ್ ಅಂಥವರಿಗೆ ಬುದ್ಧಿ ಹೇಳಿ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕೇ ಹೊರತು, ನಿರಾಕರಿಸುವುದು ಹಾಗೂ ನಡೆಯಬೇಕಾದ ದಾರಿಯಲ್ಲಿ ಒಂಟಿಯಾಗಿ ಉಳಿಯುವುದು ವಿವೇಕವಲ್ಲ, ಅದರಲ್ಲಿ ಕನ್ನಡದ ಹಿತವೂ ಇಲ್ಲ.

ವಾಚಕರ ವಾಣಿ

ಕಾಲದ ಕೇಡು ಎನ್ನೋಣವೇ?

ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ತಮ್ಮ ಲೇಖನದಲ್ಲಿ (ಪ್ರ.ವಾ., ಜೂನ್ 24) ತುರ್ತು ಪರಿಸ್ಥಿತಿಯ ಕಾಲಘಟ್ಟವನ್ನು ನೆನಪಿಸಿಕೊಂಡಿದ್ದಾರೆ. ತುರ್ತು ಪರಿಸ್ಥಿತಿಯು ದೇಶದ ಪ್ರತಿಯೊಬ್ಬ ರಾಜಕೀಯ ವಿದ್ಯಾರ್ಥಿಯು ಅಧ್ಯಯನ ಮಾಡಬೇಕಾದ 'ಕರಾಳ ಅಧ್ಯಾಯ' ಎಂದು ಹೇಳಿದ್ದಾರೆ.

ತುರ್ತು ಪರಿಸ್ಥಿತಿಯನ್ನು ಕೇವಲ ಅಧ್ಯಯನದ ದೃಷ್ಟಿಯಿಂದ ನೋಡಿದರೆ ಸಾಕೆ? ಅದರ ಐತಿಹಾಸಿಕ ಮಾಹಿತಿ ತಿಳಿದುಕೊಂಡು ಏನು ಮಾಡಬೇಕಿದೆ? ಕೇಂದ್ರದಲ್ಲಿನ ಬಿಜೆಪಿ ಆಡಳಿತವೂ 'ಅಘೋಷಿತ ತುರ್ತು ಪರಿಸ್ಥಿತಿ'ಯಾಗಿದೆ ಎಂದು ಹೇಳಲಾಗುತ್ತಿದೆಯಲ್ಲ? ಇವತ್ತಿನ ಆಡಳಿತದ ವೈಖರಿ ಹಾಗೂ ಇಂದಿರಾ ಗಾಂಧಿ ಹೇರಿದ್ದ ತುರ್ತು ಪರಿಸ್ಥಿತಿಯನ್ನು ಮುಖಾಮುಖಿ ಮಾಡಲು ಯಾಕೆ ಹಿಂಜರಿದಿದ್ದಾರೆ? ತುರ್ತು ಪರಿಸ್ಥಿತಿಯಿಂದ ಇತರ ಆಡಳಿತ ಪಕ್ಷಗಳು ಏನನ್ನು ಕಲಿತಿವೆ ಅಥವಾ ಕಲಿಯುತ್ತಿವೆ? ಏನನ್ನೂ ಕಲಿಯುತ್ತಿಲ್ಲವೆಂದರೆ; ಅಂತಹ ಸ್ಥಿತಿಯ ಪುನರಾವರ್ತನೆಯಾಗುತ್ತಿದೆ ಎಂದರೆ ಭೂತವನ್ನು ತೋರಿಸಿ ವರ್ತಮಾನವನ್ನು ಮರೆಮಾಚುವುದು ಸುರೇಶ್ ಕುಮಾರ್ ಅವರಂತಹವರಿಗೆ ಆತ್ಮವಂಚನೆ ಎನಿಸುವುದಿಲ್ಲವೇ?

ತುರ್ತು ಪರಿಸ್ಥಿತಿ ವೇಳೆ ನೋವು ಅನುಭವಿಸಿದ್ದು ದೇಶಭಕ್ತಿ ಸರಿ. ಆದರೆ, ವರ್ತಮಾನದ ಆಡಳಿತ ಕುರಿತು ಮಾತನಾಡದಿರುವ ಮೌನ ದೇಶಭಕ್ತಿಯೇ? ಕಾಂಗ್ರೆಸ್ ಪಕ್ಷದ ತುರ್ತು ಪರಿಸ್ಥಿತಿಯ ಕನ್ನಡಿಯಲ್ಲಿ ಬಿಜೆಪಿ ಆಡಳಿತದ ಚಿತ್ರ ಕಾಣುತ್ತಿದೆಯಲ್ಲ. ಅದನ್ನು ನೋಡಲು ನೈತಿಕತೆ, ಆತ್ಮಸಾಕ್ಷಿ ಜೀವಂತ ಇರಬೇಡವೇ? ಅನ್ಯರ ತಪ್ಪು ತೋರಿ, ತಮ್ಮ ತಪ್ಪು ಮರೆಮಾಚುವುದನ್ನು ಕಾಲದ ಕೇಡು ಎನ್ನೋಣವೇ?

ದೊಡ್ಡಿಶೇಖರ್, ಆನೇಕಲ್

ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸಿ

ಪುಸ್ತಕ ಓದುವ ಹವ್ಯಾಸ ಈಗ ಕಡಿಮೆಯಾಗುತ್ತಿದೆ. ಮಕ್ಕಳಲ್ಲಿ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಲು ಪ್ರತಿ ಶಾಲೆ- ಕಾಲೇಜು, ಬಸ್ ನಿಲ್ದಾಣ, ರೈಲು ನಿಲ್ದಾಣ, ದೇವಸ್ಥಾನದ ಮುಂದೆ ಸಂಚಾರ ಗ್ರಂಥಾಲಯಕ್ಕೆ ಚಾಲನೆ ನೀಡಬೇಕಿದೆ. ವಾರಕ್ಕೆ ಮೂರು ದಿನವಾದರೂ ಈ ಗ್ರಂಥಾಲಯ ಚಾಲನೆಯಲ್ಲಿರಬೇಕು. ಎಲ್ಲಾ ವಯೋಮಾನದ ಮಕ್ಕಳಿಗೂ ಪುಸ್ತಕಗಳು ಲಭ್ಯವಿರಬೇಕು. ಎಲ್ಲಾ ಬಗೆಯ ಪುಸ್ತಕಗಳನ್ನು ಓದುವುದರಿಂದ ಅವರ ಜ್ಞಾನಾರ್ಜನೆ ಹೆಚ್ಚಾಗುತ್ತದೆ. ಮೊಬೈಲ್ ಫೋನ್‌ನಿಂದ ದೂರವಾಗುತ್ತಾರೆ.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

'ಪ್ರಜಾವಾಣಿ'ಗೆ ಅಭಿನಂದನೆ

ಆರು ವರ್ಷದ ಹಿಂದೆ 'ಪ್ರಜಾವಾಣಿ'ಯ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ನನ್ನ ಕಥೆ 'ಪಂಜರ'ಕ್ಕೆ ಬಹುಮಾನ ಬಂದಿತ್ತು. ಆ ಕಥೆ ಭಾನುವಾರದ ಪುರವಣಿಯಲ್ಲಿ ಪ್ರಕಟವಾದಾಗ ಇಬ್ಬರು ಸಿನಿಮಾ ನಿರ್ದೇಶಕರು 'ಪ್ರಜಾವಾಣಿ' ಕಚೇರಿಯಿಂದ ನನ್ನ ಮೊಬೈಲ್ ನಂಬರ್ ಪಡೆದು ನನಗೆ ಫೋನ್ ಮಾಡಿ, 'ಪಂಜರ' ಕಥೆ ಆಧಾರಿತ ಸಿನಿಮಾ ಮಾಡುತ್ತೇವೆ; ಅನುಮತಿ ಕೊಡಿ ಎಂದು ಕೇಳಿದ್ದರು. ಅಪರಿಚಿತ ಹೆಸರು ಕೇಳಿ ನಾನು ಅನುಮತಿ ಕೊಡಲಿಲ್ಲ. ಆಮೇಲೆ ಹಂಸಲೇಖ ಅವರಿಂದ ಫೋನ್ ಕರೆ ಬಂತು. ನಾನು ಅವರ ಭೇಟಿಗಾಗಿ ಬೆಂಗಳೂರಿಗೆ ಹೋದೆ. ಅವರಿಗೆ ನನ್ನ ಕಥೆ ಇಷ್ಟವಾಗಿತ್ತು. ಅದನ್ನು ಆಧರಿಸಿ ಸಿನಿಮಾ ಮಾಡಲು ಅನುಮತಿ ಕೇಳಿದಾಗ ಒಪ್ಪಿಗೆ ನೀಡಿದೆ. ಈಗ ನನ್ನ ಕಥೆ 'ಓಕೆ' ಹೆಸರಿನಡಿ ಹಂಸಲೇಖ ಅವರ ನಿರ್ದೇಶನದಲ್ಲಿಯೇ ನಿರ್ಮಾಣವಾಗುತ್ತದೆ. ಇದಕ್ಕಾಗಿ, 'ಪ್ರಜಾವಾಣಿ'ಗೆ ನಾನು ಆಭಾರಿಯಾಗಿದ್ದೇನೆ.

ಅದೀಬ್ ಅಖ್ತರ್, ಬನ್ನೂರು

ವಿದ್ಯಾರ್ಥಿಗಳಿಗೆ ವಿಮೆ ಸ್ವಾಗತಾರ್ಹ

ಹೃದಯಾಘಾತದಿಂದ ಮೃತಪಡುವವರ ಸಂಖ್ಯೆ ಹೆಚ್ಚುತ್ತಿದೆ. ಈ ನಡುವೆಯೇ ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯು ಮುಂದಿನ ಶೈಕ್ಷಣಿಕ ವರ್ಷದಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಆರೋಗ್ಯ ವಿಮೆಯನ್ನು ಕಡ್ಡಾಯಗೊಳಿಸಲು ಮುಂದಾಗಿರುವುದು ಸ್ವಾಗತಾರ್ಹ (ಪ್ರ.ವಾ., ಜೂನ್ 25). ಹೃದಯಾಘಾತದ ಬಗ್ಗೆ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಸರ್ಕಾರ ಮುಂದಾಗಬೇಕಿದೆ.

ಸುಮಾ ವೀಣಾ, ಹುಲಿಕಲ್

ಪಾಕ್ ನಟಿಗೆ ಮಣೆ ಏಕೆ?

ಭಾರತವು 'ಆಪರೇಷನ್ ಸಿಂಧೂರ' ಮೂಲಕ ಪಾಕಿಸ್ತಾನಕ್ಕೆ ಪಾಠ ಕಲಿಸಿತು. ಈ ಕಾರ್ಯಾಚರಣೆಯನ್ನು ಪಾಕಿಸ್ತಾನದ ನಟಿ ಹನಿಯಾ ಅಮಿರ್ ಟೀಕಿಸಿದ್ದರು. ಸದ್ಯ ಈ ನಟಿ ಪಂಜಾಬಿ ನಟ ಮತ್ತು ಗಾಯಕ ದಿಲ್ಜಿತ್ ದೊಸಾಂಜ್ ನಟಿಸಿ ನಿರ್ಮಿಸಿರುವ 'ಸರ್ದಾರ್ ಜಿ3' ಸಿನಿಮಾದಲ್ಲಿ ನಟಿಸಿದ್ದು, ಟ್ರೇಲರ್ ಬಿಡುಗಡೆಯಾಗಿದೆ. ಈ ಚಿತ್ರಕ್ಕೆ ಜನರಿಂದ ವಿರೋಧ ವ್ಯಕ್ತವಾಗಿದೆ.

'ಫೆಡರೇಷನ್ ಆಫ್ ವೆಸ್ಟರ್ನ್ ಇಂಡಿಯಾ ಸಿನಿ ಎಂಪ್ಲಾಯೀಸ್', ಸಿನಿಮಾ ಬಿಡುಗಡೆ ಮಾಡಬಾರದು, ಚಿತ್ರ ನಿರ್ಮಾಪಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಇಷ್ಟಕ್ಕೂ ಭಾರತದ ವಿರುದ್ಧ ಹೇಳಿಕೆ ನೀಡಿ ಇಲ್ಲಿನವರ ಆಕ್ರೋಶಕ್ಕೆ ಕಾರಣರಾಗುವ ಪಾಕಿಸ್ತಾನದ ನಟಿಗೆ ಅವಕಾಶ ನೀಡಿ ಸಿನಿಮಾ ನಿರ್ಮಿಸುವ ಅಗತ್ಯ ಏನಿದೆ?

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

'ಇಂದಿರಾ ಕಿಟ್': ಒಳ್ಳೆಯ ನಿರ್ಧಾರ

ಪಡಿತರ ಚೀಟಿದಾರರಿಗೆ ಪೌಷ್ಟಿಕ ಪದಾರ್ಥಗಳನ್ನು ಒಳಗೊಂಡ 'ಇಂದಿರಾ ಆಹಾರ ಕಿಟ್' ವಿತರಿಸಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರವು ಉತ್ತಮವಾದುದು (ಪ್ರ.ವಾ., ಜೂನ್ 24). ಪಡಿತರ ಅಕ್ಕಿಯು ಕಾಳಸಂತೆಯ ಪಾಲಾಗುವುದನ್ನು ತಡೆಯಲು ಪೌಷ್ಟಿಕ ಪದಾರ್ಥ ನೀಡಲು ಮುಂದಾಗಿರುವುದು ಸೂಕ್ತವಾಗಿದೆ. ಇದರಿಂದ ಸರ್ಕಾರಕ್ಕೂ ಹಣ ಉಳಿತಾಯವಾಗಲಿದೆ. ಕಾಳಸಂತೆ ವ್ಯವಹಾರಕ್ಕೆ ಕಡಿವಾಣ ಹಾಕಲು ಸರ್ಕಾರವು ಮತ್ತಷ್ಟು ಕ್ರಮವಹಿಸಬೇಕಿದೆ.

ಮುಳ್ಳೂರ ಬಸಪ್ಪ ಎಸ್. ಹಲಗತ್ತಿ, ರಾಮದುರ್ಗ

ರೈತ ವಿರೋಧಿ ಕೆಲಸ ನಿಲ್ಲಿಸಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ದಯವಿಟ್ಟು ರೈತ ವಿರೋಧಿ ಕೆಲಸವನ್ನು ನಿಲ್ಲಿಸಿ... ದೇವನಹಳ್ಳಿ ತಾಲ್ಲೂಕಿನ ರೈತರು ಕೃಷಿ ಭೂಮಿ ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಅವರ ನ್ಯಾಯಯುತ ಹೋರಾಟದಲ್ಲಿ ನಾವೆಲ್ಲ ಅವರೊಂದಿಗಿದ್ದೇವೆ... ನೀವು ಈ ಹಿಂದೆ ಕೊಟ್ಟ ಮಾತಿನಂತೆ ನಡೆದುಕೊಳ್ಳಿ...

ಪ್ರಕಾಶ್ ರಾಜ್, ನಟ, 'ಎಕ್ಸ್'ನಿಂದ

ಕಿಡಿನುಡಿ



ಕೆಆರ್‌ಎಸ್ ಅಣೆಕಟ್ಟೆ ಬಳಿ ಕಾವೇರಿ ಆರತಿ ಕಾರ್ಯಕ್ರಮ ಹಾಗೂ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸುವ ಯೋಜನೆಯನ್ನು ವಾಮಮಾರ್ಗದ ಮೂಲಕ ಅನುಷ್ಠಾನಗೊಳಿಸಲು ಹೊರಟಿರುವುದನ್ನು ನಾವು ಸಹಿಸುವುದಿಲ್ಲ. ಸಮಯಕ್ಕೆ ತಕ್ಕ ಹಾಗೆ ತಮಗೆ ಬೇಕಿರುವ ವ್ಯಕ್ತಿಗಳಿಗೆ ರೈತ ಚಳವಳಿಯ ಗುರುತಾದ ಹಸಿರು ಟವೆಲ್ ಹಾಕಿಸಿ ಪೂರ್ವಭಾವಿ ಸಭೆ ನಡೆಸುವ ಮೂಲಕ ಸರ್ಕಾರವು ತನಗೆ ತಾನೇ ಮೋಸ ಮಾಡಿಕೊಂಡಿದೆ.

ಸುನಂದಾ ಜಯರಾಂ, ರೈತ ಸಂಘದ ನಾಯಕಿ

25 ವರ್ಷಗಳ ಹಿಂದೆ

ಸೋಮವಾರ, 26-6-2000

• ಸೀತಾಳ ಮೈಮರೆವು ಮರಿ ನೀರಾನೆ ಸಾವು

ಬೆಂಗಳೂರು, ಜೂನ್ 25- ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಇತ್ತೀಚೆಗಷ್ಟೆ ಜನಿಸಿದ್ದ ನೀರಾನೆ ಮರಿ ಶನಿವಾರ ಬೆಳಗಿನ ಜಾವ ಮೃತಪಟ್ಟಿದೆ.

ನೀರಾನೆ ಮರಿಯ ತಾಯಿ ಸೀತಾಳ ಮೈಮರೆವು, ಮರಿಯ ಸಾವಿಗೆ ಕಾರಣ ಇರಬಹುದು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಕೃಷ್ಣಪ್ಪ ಅವರು ಇಂದು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಸೀತಾಳೇ ತನ್ನ ಮರಿ ಮೇಲೆ ಗೊತ್ತಿಲ್ಲದೆ ಬಿದ್ದಾಗ ಅದಕ್ಕೆ ಉಸಿರಾಟದ ತೊಂದರೆಯಾಗಿ ಅದರ ಯಕೃತ್ತು ಒಡೆದಿರುವ ಸಾಧ್ಯತೆ ಇದೆ' ಎಂದು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಸೋಮವಾರ, 26-6-1950

• ದಕ್ಷಿಣ ಮತ್ತು ಉತ್ತರ ಕೊರಿಯಾ ನಡುವೆ ಯುದ್ಧಾರಂಭ

ಸೆವೌಲ್ (ದಕ್ಷಿಣ ಕೊರಿಯಾ), ಜೂನ್ 25- ರಷ್ಯಾದ ಬೆಂಬಲ ಪಡೆದ ಉತ್ತರ ಕೊರಿಯಾವು ಇಂದು ಬೆಳಿಗ್ಗೆ ದಕ್ಷಿಣ ಕೊರಿಯಾದ ಮೇಲೆ ಯುದ್ಧ ಘೋಷಿಸಿತು.

ಇಂದು ಸೂರ್ಯೋದಯ ಸಮಯದಲ್ಲಿ ಎಲ್ಲೆಯನ್ನು ದಾಟಿ ಯುದ್ಧವಾರಂಭಿಸಿದ ಉತ್ತರ ಕೊರಿಯಾ ಸೇನಾ ಪಡೆಗಳು ಇಮ್‌ಜಿನ್ ನದಿಯ ಪಶ್ಚಿಮ ದಿಗ್ಭಾಗದ ಪ್ರದೇಶವೆಲ್ಲವನ್ನೂ ಆಕ್ರಮಿಸಿರುವುದಾಗಿ ಅಮೆರಿಕದ ಸೇನಾ ಪ್ರವೀಣರು ವರದಿ ಮಾಡಿದ್ದಾರೆ.

ಚುರುಮುರಿ



ರೇಟ್ ಬೋರ್ಡ್

• ಗುರು ಪಿ.ಎಸ್.

'**ಸಬ್ ರಿಜಿಸ್ಟ್ರಾರ್** ಆಫೀಸ್‌ಗೆ ಬಂದು ಇದೇನ್ ಹುಡುಕ್ತಾ ನಿಂತಿದ್ದೀಯ ಮುದ್ದಣ್ಣ' ಕೇಳಿದ ಸ್ನೇಹಿತ ವಿಜಿ.

'ರೇಟ್ ಬೋರ್ಡ್ ಹುಡುಕ್ತಿದ್ದೀನಿ' ತಣ್ಣಗೆ ಹೇಳಿದ ಮುದ್ದಣ್ಣ.

'ರೇಟ್ ಬೋರ್ಡಾ? ಯಾವುದರ ರೇಟ್?'

'ಸೈಟ್ ರಿಜಿಸ್ಟರ್ ಮಾಡಿಸೋಕೆಷ್ಟು, ಇ.ಸಿ. ತೆಗೆಸೋಕೆ ಎಷ್ಟು, ಬೇಗ ಬೇಗ ಕೆಲಸ ಮಾಡೋಕೆ ಎಷ್ಟು ರೇಟ್ ಅಂತ ಇರುತ್ತಲ್ಲ ಆ ಬೋರ್ಡ್'.

'ಇಲ್ಲಿರೋ ಆಫೀಸರ್ಸ್‌ಗೆ ಕೇಳಿದ್ರೆ ಅಥವಾ ವೆಬ್‌ಸೈಟ್‌ನಲ್ಲಿ ನೋಡಿದರೆ ಗೊತ್ತಾಗುತ್ತಲ್ಲ'.

'ಆ ಬೋರ್ಡ್ ಬೇರೆ, ನಾನು ಹುಡುಕ್ತಿರೋದು ಬೇರೆ... ಮೊನ್ನೆ ಮಿನಿಸ್ಟರ್ ಸಾಹೇಬ್ರು, ಅಧಿಕಾರಿಗಳಿಗೆ ಯಾವುದಕ್ಕೆ ಎಷ್ಟು ಅಂತ ಬೋರ್ಡ್ ಹಾಕಿಬಿಡಿ ಎಂದು ಹೇಳಿದ್ದನ್ನ ಗಂಭೀರವಾಗಿ ತಗೊಂಡಿರೋ ಅಧಿಕಾರಿಗಳು ರೇಟ್ ಬೋರ್ಡ್ ಹಾಕಿದ್ದಾರಂತೆ, ಅದನ್ನ ಹುಡುಕ್ತಿದ್ದೀನಿ'.

'ಅಂದ್ರೆ ಲಂಚದ ಬೋರ್ಡಾ?' ಕಣ್ಣರಳಿಸಿ ಕೇಳಿದ ವಿಜಿ.

'ಏಯ್, ಅಷ್ಟು ಜೋರಾಗಿ ಕೂಗಬೇಡ, ನಮ್ಮ ಅಧಿಕಾರಿಗಳ ಮನಸಿಗೆ ನೋವಾಗುತ್ತೆ'.

'ಛೇ, ಏನಿಷ್ಟೊಂದು ಭ್ರಷ್ಟಾಚಾರ ತಾಂಡವವಾಡುತ್ತಿದೆ... ಇಂತಹ ಭ್ರಷ್ಟರಿಗೆ ಬುದ್ಧಿ ಕಲಿಸಲೆಂದೇ ಲೋಕಾಯುಕ್ತ ಸಂಸ್ಥೆ ರೂಪಿಸಲಾಗಿದೆ. ಲೋಕಾಯುಕ್ತ ಅಧಿಕಾರಿಗಳಿಗೆ ನೀನ್ಯಾಕೆ ಕಂಪ್ಲೇಂಟ್ ಕೊಡಬಾರದು?'

ವಿಜಿ ಮಾತು ಮುಗಿಸುವ ಮುನ್ನವೇ, ಹೊಟ್ಟೆ ಹಿಡಿದುಕೊಂಡು ಜೋರಾಗಿ ನಗತೊಡಗಿದ ಮುದ್ದಣ್ಣ, 'ಅಲ್ಲಿಗೂ ಹೋಗಿದ್ದೆ, ಅಲ್ಲಿ ಅಸಲಿ ಆಫೀಸರ್ ಯಾರು, ನಕಲಿ ಯಾರು ಗೊತ್ತಾಗಲಿಲ್ಲ'.

'ಅಯ್ಯೋ, ಹೌದಾ, ಹಾಗಾದರೆ ನಿನ್ನ ಸಮಸ್ಯೆಗೆ ಇಂಟರ್‌ನ್ಯಾಷನಲ್ ಪರಿಹಾರವನ್ನೇ ಕಂಡುಕೊಳ್ಳಬೇಕು'.

'ಅಂದ್ರೆ?'

'ಅಂದ್ರೆ, ಟ್ರಂಪಣ್ಣಂಗೆ ನಿನ್ನ ಸಮಸ್ಯೆ ಹೇಳ್ಕೊ ಅಂದೆ'.

'ಅವರು ಬಂದು ಸಮಸ್ಯೆ ಸರಿ ಮಾಡ್ತಾರಾ?'

'ಇಲ್ಲ. ಜನ ಕೊಟ್ಟಷ್ಟು ನೀವು ತಗೋಬೇಕು ಅಥವಾ ಅವರು ಕೇಳಿದಷ್ಟು ನೀವು ಕೊಡಬೇಕು ಎಂದು ಅಧಿಕಾರಿಗಳು ಮತ್ತು ಜನರ ನಡುವೆ ಒಪ್ಪಂದ ಮಾಡಿಸಿದ್ದೇನೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಹಾಕ್ತಾರೆ'.

ಸಂಗತ

ಶಾಸನದಲ್ಲಿ ಪತ್ತೆಯಾದ ಧೂಮಕೇತು!

ಶ್ರೀಶೈಲದ ದೇಗುಲದಲ್ಲಿ ದೊರೆತಿರುವ ತಾಮ್ರ ಶಾಸನದಲ್ಲಿ ಧೂಮಕೇತುವಿನ ಉಲ್ಲೇಖ ಇರುವುದು ಬೆಳಕಿಗೆ ಬಂದಿದೆ. ಇಂಥ ದಾಖಲೆಗಳಿಗೆ ಖಗೋಳ ಶಾಸ್ತ್ರದಲ್ಲಿ ವಿಶೇಷ ಮಹತ್ವವಿದೆ

• ಬಿ.ಎಸ್. ಶೈಲಜಾ


'ಧೂಮಕೇತು' ಉಲ್ಲೇಖದ ಕಾರಣದಿಂದಾಗಿ ತಾಮ್ರ ಶಾಸನವೊಂದು ಸುದ್ದಿಯಲ್ಲಿದೆ. ಆಂಧ್ರಪ್ರದೇಶದ ಶ್ರೀಶೈಲದಲ್ಲಿ ದೊರಕಿರುವ ಈ ಶಾಸನ ಖಗೋಳ ವಿಜ್ಞಾನಿಗಳಲ್ಲಿ ಉತ್ಸಾಹ ಮೂಡಿಸಿದೆ.

ಭಾರತದ ಖಗೋಳ ವಿಜ್ಞಾನದ ಅರಿವು ಇಂದು ನಿನ್ನೆಯದಲ್ಲ. ಉದ್ಗ್ರಂಥಗಳು ಸೇರಿದಂತೆ ಕನಿಷ್ಠ 2000 ವರ್ಷಗಳಿಂದ ಗುರುತಿಸಬಹುದಾದ ಇತಿಹಾಸದಲ್ಲಿ ಬಹು ಮುಖ್ಯವಾಗಿ ಕಂಡು ಬರುವ ಕೊರತೆ, ವೀಕ್ಷಣೆಗಳ ದಾಖಲೆಯದು. ಗ್ರಹಣ ಸೇರಿದಂತೆ ಕೌತುಕಮಯ ಘಟನೆಗಳ ಕುರಿತು ಲೆಕ್ಕಗಳು, ವಿಸ್ತೃತ ಚರ್ಚೆಗಳು ಇವೆ. ಆದರೆ, ಘಟನೆಯನ್ನು ವೀಕ್ಷಿಸಿ ಗುರುತು ಮಾಡಿಕೊಂಡ ದಾಖಲೆಗಳು ಇಲ್ಲವೇ ಇಲ್ಲ ಎನ್ನಬಹುದು.

3000 ವರ್ಷಗಳಿಗೂ ಹಳೆಯದಾದ ದಾಖಲೆಗಳು ಮತ್ತು ರೇಖಾಚಿತ್ರಗಳು ಇತರ ದೇಶಗಳಲ್ಲಿ ದೊರಕಿವೆ. ಇಂಥ ದಾಖಲೆಗಳನ್ನು ಚೀನಾದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಗುರುತು ಮಾಡಿಕೊಳ್ಳಲಾಗಿದೆ. ಈ ಬಗ್ಗೆ ನಮ್ಮ ಹಿರಿಯರು ಗಮನ ಕೊಡದಿರುವುದು ವಿಷಾದಕರ.

ನಿಖರ ದಾಖಲೆಗಳು ಇಲ್ಲದಿರುವ ಸಂದರ್ಭದಲ್ಲಿ, ಆಕಾಶದ ಯಾವುದೇ ಘಟನೆಯ ನಮೂದು ಖಗೋಳ ಪಠ್ಯಗಳಲ್ಲದೆ ಇತರ ಮಾಧ್ಯಮಗಳಲ್ಲಿ ದೊರಕುವುದು ವಿಶೇಷ ದಾಖಲೆಯಾಗುತ್ತದೆ. ಈ ದೃಷ್ಟಿಯಿಂದ, ರಸ್ತೆ ಪಕ್ಕದಲ್ಲಿ, ಗದ್ದೆಗಳಲ್ಲಿ, ಎಲ್ಲೆಂದರಲ್ಲಿ ಕಂಡುಬರುವ ಶಿಲಾಶಾಸನಗಳು ಗ್ರಹಣಗಳ ಅತ್ಯುತ್ತಮ ದಾಖಲೆಗಳಾಗಿ ಮಹತ್ವ ಪಡೆದಿವೆ. ನಮ್ಮ ಅಧ್ಯಯನಕ್ಕೊಳಗಾಗಿರುವ ಸುಮಾರು 30 ಸಾವಿರ ಶಾಸನಗಳಲ್ಲಿ, 1,500ಕ್ಕೂ ಹೆಚ್ಚು ಶಾಸನಗಳ ಗ್ರಹಣ ಉಲ್ಲೇಖಗಳನ್ನು ಪರಿಶೀಲಿಸುವುದು ಸಾಧ್ಯವಾಗಿದೆ. ಇವುಗಳಲ್ಲಿ ಬೆರಳೆಣಿಕೆಯಷ್ಟು ಶಾಸನಗಳು ಸಂಪೂರ್ಣ ಗ್ರಹಣವನ್ನು ನಮೂದಿಸಿದ್ದು, ವಿಶೇಷ ಅಧ್ಯಯನಕ್ಕೆ ದತ್ತಾಂಶಗಳನ್ನು ಒದಗಿಸಿವೆ. ಭೂಮಿಯ ಭ್ರಮಣೆಯ ವೇಗ (ಇಂದು 24 ಗಂಟೆ ಎಂದು ನಾವು ಪರಿಗಣಿಸಿರುವುದು) ನಿಧಾನವಾಗಿ ಬದಲಾಗುತ್ತಿದೆ ಎಂಬ ಮಹತ್ವದ ನಿರ್ಣಯಕ್ಕೆ ಬರಲು ಇವು ಪೂರಕವಾಗಿವೆ.

ಎಡ್ಮಂಡ್ ಹ್ಯಾಲಿ ಧೂಮಕೇತುಗಳ ಅಧ್ಯಯನವನ್ನು ಕೈಗೊಂಡಾಗ ಅವು ಆಕಾಶಕಾಯಗಳು ಹೌದೋ ಅಲ್ಲವೋ ಎಂಬ ಜಿಜ್ಞಾಸೆ ನಡೆದಿತ್ತು. ಒಂದು ಧೂಮಕೇತು ಪ್ರತಿ 76 ವರ್ಷಗಳಿಗೊಮ್ಮೆ ಬಂದು ಹೋಗುತ್ತಿದೆ ಎಂದು ಸಾಧಿಸಿ ತೋರಿಸಿದವನೇ ಆತನಾದರೂ, ಸ್ವತಃ ಧೂಮಕೇತುವನ್ನು ಹ್ಯಾಲಿ ನೋಡಲೇ ಇಲ್ಲ. ಅದು ಹಿಂದೆ ಬಂದು ಹೋದದ್ದನ್ನು ಸೂಚಿಸುವ ದಾಖಲೆಗಳೆಲ್ಲವೂ ಖಗೋಳ ವಿಜ್ಞಾನಿಗಳು ಬರೆದಿಟ್ಟದ್ದಲ್ಲ. ಅದನ್ನು ಕಂಡವರು ವೈವಿಧ್ಯ ರೀತಿಯಲ್ಲಿ ತಮ್ಮ ಬೆರಗನ್ನು ದಾಖಲಿಸಿದ್ದರು. ಉದಾಹರಣೆಗೆ, ಒಂದು ಭಿತ್ತಿಚಿತ್ರ, ಒಂದು ಕಸೂತಿ ವಿನ್ಯಾಸ - ಹೀಗೆ. ಇವು ಕೂಡ ಅತ್ಯುತ್ತಮ ದಾಖಲೆಗಳೇ. ಈ ಹಿನ್ನೆಲೆಯಲ್ಲಿ, ಈಗ ದೊರಕಿರುವ ಶಾಸನ ಅಮೂಲ್ಯವಾದದ್ದು.



ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದಲ್ಲಿದ್ದ ತಾಮ್ರ ಶಾಸನವು 1378 ಶಕ ಧಾತ್ರ ಸಂವತ್ಸರ ಆಷಾಢ ಬಹುಳ 11 ಎಂದು ತಾರೀಖನ್ನು ನಮೂದಿಸಿದೆ. 'ಧೂಮಕೇತು ಮಹೋತ್ಪಾತ ಶಾಂತ್ಯರ್ಥಂ' ಎಂದು ದಾನ ಮಾಡಲು ಕಾರಣವನ್ನು ಕೊಟ್ಟಿರುವುದೇ ಧೂಮಕೇತುವನ್ನು ಕಂಡ ದಾಖಲೆಯಾಗಿದೆ. ದಾನ ಪಡೆದ ವಿದ್ವಾಂಸ ಕಡಿಯಾಲಪುರದ ಲಿಂಗಣಾರ್ಯ.

1456ರಲ್ಲಿ ಬಂದ ಈ ಧೂಮಕೇತು ಸಾಕಷ್ಟು ಪ್ರಕಾಶಮಾನವಾಗಿದ್ದು, ಜನರಿಗೆ ಭಯ ಹುಟ್ಟಿಸಿರಬೇಕು. ಕಾಶ್ಮೀರದ ಚರಿತ್ರೆಯನ್ನು ದಾಖಲಿಸಿರುವ 'ರಾಜತರಂಗಿಣಿ' ಗ್ರಂಥದಲ್ಲಿ ಇದೇ ಸಂದರ್ಭವನ್ನು ಅದರ ಕರ್ತೃ ಶ್ರೀವರ ಹೀಗೆ ವರ್ಣಿಸಿದ್ದಾನೆ: 'ಮಾನವ ಕುಲಕ್ಕೇ ಕಂಟಕದ ಸೂಚಕವೋ ಎನ್ನುವಂತೆ ಒಂದು ಧೂಮಕೇತು ರಾತ್ರಿ ಕಾಣಿಸಿಕೊಂಡಿತು. ಅದಕ್ಕೆ ಉಜ್ವಲವಾದ ಧ್ವಜದ ಆಕಾರದ ಬಾಲವಿತ್ತು. ಯಮರಾಜನ ಕುಡುಗೋಲಿನ ಆಕಾರದಲ್ಲಿತ್ತು. ಶುಭ್ರವಾದ ಆಕಾಶದಲ್ಲಿ ಎರಡು ತಿಂಗಳು ಪ್ರಕಾಶಿಸಿತು'. ಈ ದಾಖಲೆಗಳಲ್ಲಿ ಧೂಮಕೇತುಗಳು ರಾಜನಿಗೆ ಕಂಟಕ ಉಂಟು ಮಾಡುತ್ತವೆ ಎಂಬ ಅಭಿಪ್ರಾಯ ಸ್ಪಷ್ಟವಾಗಿದೆ.

ಬಹಳಷ್ಟು ಶಾಸನಗಳಲ್ಲಿ ಬಳಕೆಯಾಗುವ ಪದಗಳ ಜೋಡಣೆ, ಬಳಸಿರುವ ಗುಣವಾಚಕಗಳೂ ಅರ್ಥಪೂರ್ಣವಾಗಿರುತ್ತವೆ. ಇದಕ್ಕೆ ಉದಾಹರಣೆಯಾಗಿ 1054ರ ಶಾಸನವನ್ನು ಉಲ್ಲೇಖಿಸಬಹುದು. ಅದರಲ್ಲಿ ಶಿವನಿಗೆ ನಮಿಸುವಾಗ 'ಶುಕ್ರ ತಾರಾ ಪ್ರಭಾವಾಯ' ಎಂಬ ಗುಣವಾಚಕ ಬಳಸಲಾಗಿದೆ. ಅದೊಂದು ಅಪೂರ್ವ ಪ್ರಯೋಗ. 'ತಾರೆಯೊಂದು ಶುಕ್ರದಂತೆ ಪ್ರಜ್ವಲಿಸುವಂತೆ ಮಾಡಬಲ್ಲವನು' ಎಂದು ಅರ್ಥೈಸಿದರೆ ಅದು ಆ ವರ್ಷ ಕಂಡ ಸೂಪರ್ ನೋವಾದ ವರ್ಣನೆಯೂ ಆಗುತ್ತದೆ. ಆ ಸ್ಫೋಟದಲ್ಲಿ ನಕ್ಷತ್ರವು ಶುಕ್ರಗ್ರಹದಷ್ಟು ಪ್ರಕಾಶ ಪಡೆದಿತ್ತು. ಬರಿಗಣ್ಣಿಗೇ ಸುಮಾರು ಒಂದು ವರ್ಷದವರೆಗೂ ಕಾಣುತ್ತಿತ್ತು.

ಇನ್ನೊಂದು ಕನ್ನಡ ಕಾವ್ಯದಲ್ಲಿ, 'ಹುಣ್ಣಿಮೆಯ ಚಂದ್ರ ಬೆಳ್ಳಿಯ ತಟ್ಟೆ. ಅದರ ಮೇಲೆ ಶುಕ್ರ ದೀಪ' ಎಂಬ ವಿವರಣೆ ಇದೆ. ಆದರೆ, ಶುಕ್ರ ಯಾವುದೇ ಸಂದರ್ಭದಲ್ಲಿಯೂ ಹುಣ್ಣಿಮೆಯ ಚಂದ್ರನ ಸಮೀಪ ಕಾಣುವುದೇ ಇಲ್ಲ. ಆದ್ದರಿಂದ ಈ ವರ್ಣನೆಯೂ ನಕ್ಷತ್ರದ ಸ್ಫೋಟವೇ ಆಗಿದ್ದಿರಬೇಕು. ಇದನ್ನು ರಚಿಸಿದ ಅಜ್ಞಾತ ಕವಿಯ ಕಾಲ ತಿಳಿದಲ್ಲಿ ಅದು ಯಾವ ಸೂಪರ್ ನೋವಾ ಎಂದು ಖಚಿತವಾಗಿ ಅರ್ಥೈಸಬಹುದು.

ಪ್ರಸ್ತುತ, ತಾಮ್ರ ಶಾಸನದಲ್ಲಿ ಧೂಮಕೇತುವಿನ ಉಲ್ಲೇಖ ಪತ್ತೆಯಾಗಿರುವುದು ಶಾಸನಗಳ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಇನ್ನೂ ಅದೆಷ್ಟು ಶಾಸನಗಳು ಇಂತಹ ರಹಸ್ಯಗಳನ್ನು ಅಡಗಿಸಿಕೊಂಡಿವೆಯೋ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಭಾರತವು ಬಾಹ್ಯಾಕಾಶ ಅಧ್ಯಯನ– ಸಂಶೋಧನೆ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ. ಆಕ್ಸಿಯಂ–4 ಬಾಹ್ಯಾಕಾಶ ಯೋಜನೆಯ ಭಾಗವಾಗಿ ಬುಧವಾರ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿರುವ ನಾಲ್ವರು ಗಗನಯಾತ್ರಿಗಳ ಪೈಕಿ ಭಾರತದ ಶುಭಾಂಶು ಶುಕ್ಲಾ ಕೂಡ ಒಬ್ಬರಾಗಿದ್ದಾರೆ. ಶುಕ್ಲಾ ಅವರೊಂದಿಗೆ ಅಮೆರಿಕ, ಪೋಲೆಂಡ್ ಮತ್ತು ಹಂಗರಿಯ ಗಗನಯಾತ್ರಿಗಳಿದ್ದಾರೆ. ನಾಲ್ವರು ಕೂಡ ನಾಸಾದ ಗಗನಯಾನಿಗಳಲ್ಲ. ಭಾರತೀಯ ವಾಯುಸೇನೆಯ ಗ್ರೂಪ್ ಕ್ಯಾಪ್ಟನ್ ಆಗಿರುವ ಶುಕ್ಲಾ ಅವರು ಆಕ್ಸಿಯಂ–4 ಬಾಹ್ಯಾಕಾಶ ಯಾನದಲ್ಲಿ ಕ್ಯಾಪ್ಟನ್ ಆಗಿದ್ದಾರೆ. ರಾಕೇಶ್ ಶರ್ಮಾ ಅವರ ನಂತರ ಬಾಹ್ಯಾಕಾಶಕ್ಕೆ ತೆರಳಿರುವ ಭಾರತದ ಎರಡನೇ ಗಗನಯಾತ್ರಿ ಅವರು. ಭಾರತವು 41 ವರ್ಷಗಳ ಬಳಿಕ ಬಾಹ್ಯಾಕಾಶಕ್ಕೆ ಮಾನವನನ್ನು ಕಳುಹಿಸುತ್ತಿದೆ. ಬಾಹ್ಯಾಕಾಶ ಸಂಶೋಧನೆ ಮತ್ತು ಅಧ್ಯಯನದಲ್ಲಿ ಇಸ್ರೊ ಈವರೆಗೆ ಮಾಡಿರುವ ಸಾಧನೆಗಳು ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತವನ್ನು ಮುಂದುವರಿದ ರಾಷ್ಟ್ರಗಳ ಸಾಲಿಗೆ ಈಗಾಗಲೇ ಸೇರಿಸಿವೆ. ಈಗ ಶುಕ್ಲಾ ಅವರ ಬಾಹ್ಯಾಕಾಶಯಾನವು ಮಾನವ ಸಹಿತ ಗಗನಯಾನಕ್ಕೆ ಸಿದ್ಧತೆ ನಡೆಸುತ್ತಿರುವ ಭಾರತದ ಕನಸಿಗೆ ಹೊಸ ರೆಕ್ಕೆ ಮೂಡಿಸಿದೆ



ಶುಭಾಂಶು ಶುಕ್ಲಾ

ಭಾರತದ ಅಂತರಿಕ್ಷ ಕನಸಿಗೆ ಹೊಸ ರೆಕ್ಕೆ

ಪ್ರಜಾವಾಣಿ ವಾರ್ತೆ

‘ನನ್ನ ಹೆಗಲ ಮೇಲೆ ತ್ರಿವರ್ಣ ಧ್ವಜವಿದೆ. ಅದು ನಾನು ನಿಮ್ಮೆಲ್ಲರೊಂದಿಗೆ ಇದ್ದೇನೆ ಎನ್ನುವ ಸಂದೇಶ ಸಾರುತ್ತಿದೆ. ಇದು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ನನ್ನ ಪಯಣದ ಆರಂಭ ಮಾತ್ರವಲ್ಲ; ಭಾರತದ ಮಾನವಸಹಿತ ಬಾಹ್ಯಾಕಾಶ ಯಾನದ ಆರಂಭವೂ ಆಗಿದೆ..’

–ಹೀಗೆಂದವರು ಅಮೆರಿಕದ ಫ್ಲಾರಿಡಾದಲ್ಲಿರುವ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ನಭಕ್ಕೆ ಹಾರಿದ, ಫಾಲ್ಕನ್ 9 ರಾಕೆಟ್ ಹೊತ್ತಿದ್ದ ಡ್ರ್ಯಾಗನ್ ಬಾಹ್ಯಾಕಾಶ ಕೋಶದಲ್ಲಿದ್ದ ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ.

ಶುಕ್ಲಾ ಉತ್ತರ ಪ್ರದೇಶದ ಲಖನೌದವರು. ಅವರ ತಂದೆ ಶಂಭು ದಯಾಳ್ ಶುಕ್ಲಾ ನಿವೃತ್ತ ಸರ್ಕಾರಿ ಅಧಿಕಾರಿ, ತಾಯಿ ಆಶಾ ಶುಕ್ಲಾ ಗೃಹಿಣಿ. ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಪರಿಣತಿ ಹೊಂದಿರುವ ಅವರು ಕಾರ್ಗಿಲ್ ಯುದ್ಧದ ಪ್ರಭಾವದಿಂದ ಸೇನೆಯತ್ತ ಆಕರ್ಷಿತರಾದವರು. ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಿಂದ ವಿಜ್ಞಾನದಲ್ಲಿ ಪದವಿ ಪಡೆದ ನಂತರ ವಾಯುಸೇನೆಯಲ್ಲಿ ಯುದ್ಧವಿಮಾನದ ಪೈಲಟ್ ಆಗಿ 2006ರಲ್ಲಿ ಕೆಲಸಕ್ಕೆ ಸೇರಿದರು; ಸುಖೋಯ್–30, ಎಂಕೆಐ, ಎಂಜಿಐ–29, ಜಾಗ್ವಾರ್, ಡಾರ್ನಿಯರ್ ಸೇರಿದಂತೆ ವಿವಿಧ ರೀತಿಯ ವಿಮಾನಗಳ ಪೈಲಟ್ ಆಗಿ ಅನುಭವ ಪಡೆದಿದ್ದು, 2,000 ಗಂಟೆಗಳ ಹಾರಾಟದ ಅನುಭವ ಹೊಂದಿದ್ದಾರೆ. ಶುಭಾಂಶು ಶುಕ್ಲಾ ಅವರ ಅಸಾಧಾರಣ ಕೊಡುಗೆಯನ್ನು ಪರಿಗಣಿಸಿ ವಾಯುಸೇನೆಯು ಮಾರ್ಚ್ 2024ರಂದು ಅವರಿಗೆ ಗ್ರೂಪ್ ಕ್ಯಾಪ್ಟನ್ ಆಗಿ ಪದೋನ್ನತಿ ನೀಡಿದೆ.

2019ರಲ್ಲಿ ಶುಭಾಂಶು ಅವರಿಗೆ ಇಸ್ರೊದಿಂದ ಒಂದು ಕರೆ ಬಂತು. ಅದು ಅವರ ಬದುಕನ್ನು ಬದಲಿಸಿದ ಕರೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರದ (ಇಸ್ರೊ) ಮಹತ್ವಾಕಾಂಕ್ಷಿ ಯೋಜನೆಯಾದ ಮಾನವ ಸಹಿತ ಗಗನಯಾನದಲ್ಲಿ ಬಾಹ್ಯಾಕಾಶಕ್ಕೆ ತೆರಳಲಿರುವ ನಾಲ್ವರು ಗಗನಯಾತ್ರಿಗಳಲ್ಲಿ ಶುಭಾಂಶು ಶುಕ್ಲಾ ಅವರೂ ಒಬ್ಬರಾಗಿ ಆಯ್ಕೆಯಾಗಿದ್ದರು. ಅದಕ್ಕಾಗಿ ಅವರಿಗೆ ರಷ್ಯಾದ ಮಾಸ್ಕೊದಲ್ಲಿರುವ ಯೂರಿ ಗಗಾರಿನ್ ತರಬೇತಿ ಕೇಂದ್ರದಲ್ಲಿ ಒಂದು ವರ್ಷ ತೀವ್ರ ತರಬೇತಿ ನೀಡಲಾಯಿತು. ಪ್ರಧಾನಿ ನರೇಂದ್ರ ಮೋದಿ ಅವರು ನಾಲ್ವರು ಗಗನಯಾನಿಗಳ ಹೆಸರುಗಳನ್ನು 2024ರ ಫೆಬ್ರುವರಿಯಲ್ಲಿ ಅಧಿಕೃತವಾಗಿ ಘೋಷಣೆ ಮಾಡಿದ್ದರು.

ಭೂಮಿಯಿಂದ 400 ಕಿ.ಮೀ. ದೂರದ ಕೆಳ ಭೂ ಕಕ್ಷೆಗೆ ಗಗನಯಾನಿಗಳನ್ನು ಕರೆದೊಯ್ದು, ಸುರಕ್ಷಿತವಾಗಿ ಮರಳಿ ಭೂಮಿಗೆ ಕರೆತರುವುದು ಗಗನಯಾನ ಯೋಜನೆಯ ಉದ್ದೇಶ. 2027ರ ಮೊದಲ ತ್ರೈಮಾಸಿಕದಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸುವ ಗುರಿಯನ್ನು ಇಸ್ರೊ ಹೊಂದಿದೆ.


ಅದಕ್ಕೂ ಮುನ್ನವೇ ‘ಆಕ್ಸಿಯಂ 4’ ಯೋಜನೆಯ ಭಾಗವಾಗುವ ಅವಕಾಶ ಶುಕ್ಲಾ ಅವರಿಗೆ ಒಲಿದುಬಂದಿದೆ.

1984ರಲ್ಲಿ ರಾಕೇಶ್ ಶರ್ಮಾ ಅವರು ಬಾಹ್ಯಾಕಾಶಕ್ಕೆ ಹೋಗಿ ಬಂದ ನಂತರ, ಬಾಹ್ಯಾಕಾಶಕ್ಕೆ ತೆರಳಿರುವ ಗಗನಯಾತ್ರಿ ಶುಕ್ಲಾ. ರಾಕೇಶ್ ಶರ್ಮಾ ಅವರು ಸೋವಿಯತ್ ಒಕ್ಕೂಟ ನಿರ್ವಹಿಸುತ್ತಿದ್ದ ಬಾಹ್ಯಾಕಾಶ ನಿಲ್ದಾಣದಲ್ಲಿ ಎಂಟು ದಿನಗಳಿದ್ದು, ವಿವಿಧ ಅಧ್ಯಯನಗಳನ್ನು ನಡೆಸಿ ಭೂಮಿಗೆ ಮರಳಿದ್ದರು. ಈಗ ಬಾಹ್ಯಾಕಾಶದಲ್ಲಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿರುವ ಮೊದಲ ಭಾರತೀಯ ಶುಕ್ಲಾ. ಬಾಹ್ಯಾಕಾಶ ಅಧ್ಯಯನ, ಸಂಶೋಧನೆ ಕ್ಷೇತ್ರದಲ್ಲಿ ಭಾರತದ ಕನಸುಗಳು, ಕೋಟ್ಯಂತರ ಜನರ ನಿರೀಕ್ಷೆಗಳನ್ನು ಹೊತ್ತುಕೊಂಡು ಅಂತರಿಕ್ಷಕ್ಕೆ ಹಾರಿರುವ ಅವರು, ಇತರ ಮೂವರು ಗಗನಯಾತ್ರಿಗಳೊಂದಿಗೆ ಸೇರಿ 14 ದಿನಗಳ ಬಳಿಕ ಭೂಮಿಗೆ ಮರಳಲಿದ್ದಾರೆ.

> ಶುಕ್ಲಾ ಅವರ ಬೆಳವಣಿಗೆಯಲ್ಲಿ ಬೆಂಗಳೂರಿನ ಪಾತ್ರವೂ ಇದೆ. ಕೇಂದ್ರ ಲೋಕಸೇವಾ ಆಯೋಗ ನಡೆಸುವ ಎನ್‌ಡಿಎ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಂಪ್ಯೂಟರ್ ವಿಜ್ಞಾನದಲ್ಲಿ ಪದವಿ ಪಡೆದ ಅವರು, ನಂತರ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಏರೋಸ್ಪೇಸ್ ಎಂಜಿನಿಯರಿಂಗ್‌ನಲ್ಲಿ ಎಂ.ಟೆಕ್ ಪೂರೈಸಿದ್ದರು

400 ಕಿ.ಮೀ	28.5 ಗಂಟೆ	14	60
ಭೂಮಿಯಿಂದ ಐಎಸ್‌ಎಸ್ ಇರುವ ದೂರ	ನಾಲ್ವರು ಗಗನಯಾತ್ರಿಗಳು ಭೂಮಿಯಿಂದ ಐಎಸ್‌ಎಸ್ ತಲುಪಲು ತೆಗೆದುಕೊಳ್ಳಲಿರುವ ಸಮಯ	ಗಗನಯಾತ್ರಿಗಳು ಐಎಸ್‌ಎಸ್‌ನಲ್ಲಿ ತಂಗಲಿರುವ ದಿನಗಳು	ಶುಕ್ಲಾ ಮತ್ತು ತಂಡ ನಡೆಸಲಿರುವ ಅಧ್ಯಯನಗಳು

ಪ್ರಯಾಣದ ಹಂತ – ಹಾದಿ




3. ಐಎಸ್‌ಎಸ್‌ನತ್ತ ಪಯಣ
ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದತ್ತ ಸಾಗುವುದಕ್ಕಾಗಿ ಬಾಹ್ಯಾಕಾಶದ ಕೋಶದ ಕಕ್ಷೆಯಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ. ಕೋಶದ ಎಂಜಿನ್ ಚಾಲೂಗೊಳಿಸಿ ಕಕ್ಷೆಯಲ್ಲಿ ಸುತ್ತುವ ವೇಗವನ್ನು ಹೆಚ್ಚಿಸುತ್ತಾ ಕಕ್ಷೆಯ ಎತ್ತರವನ್ನು ಹೆಚ್ಚಿಸಲಾಗುತ್ತದೆ. ಈ ಪ್ರಕ್ರಿಯೆ 20–24 ಗಂಟೆಗಳವರೆಗೆ ನಡೆಯುತ್ತದೆ

2. ಕಕ್ಷೆಗೆ ಸೇರ್ಪಡೆ
ರಾಕೆಟ್‌ನಿಂದ ಪ್ರತ್ಯೇಕಗೊಂಡ ಡ್ರ್ಯಾಗನ್ ಭೂಮಿಯ ಕಕ್ಷೆಗೆ ಸೇರ್ಪಡೆ. ಪಥದರ್ಶಕ ವ್ಯವಸ್ಥೆಯ ಕಾರ್ಯಾಚರಣೆ ಶುರು. ಕೋಶದ ನೂಕುಬಲ, ಜೀವ ರಕ್ಷಕ ವ್ಯವಸ್ಥೆ, ಉಷ್ಣ ನಿಯಂತ್ರಣ ವ್ಯವಸ್ಥೆಯ ಪರಿಶೀಲನೆ. ಈ ಹಂತದಲ್ಲಿ ಡ್ರ್ಯಾಗನ್ ವೇಗ ಗಂಟೆಗೆ 27 ಸಾವಿರ ಕಿ.ಮೀ ಇರುತ್ತದೆ. ಪ್ರತಿ 90 ನಿಮಿಷಕ್ಕೊಮ್ಮೆ ಭೂಮಿಗೆ ಸುತ್ತು ಹಾಕುತ್ತಿರುತ್ತದೆ

1. ನಭಕ್ಕೆ ನೆಗೆತ
ಭಾರತೀಯ ಕಾಲಮಾನ ಬುಧವಾರ ಮಧ್ಯಾಹ್ನ 12.01 ಫ್ಲಾರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ನಾಲ್ವರು ಗಗನಯಾತ್ರಿಗಳಿದ್ದ ಡ್ರ್ಯಾಗನ್ ಕೋಶ ಹೊತ್ತಿದ್ದ ಸ್ಪೇಸ್ ಎಕ್ಸ್‌ನ ಫಾಲ್ಕನ್ 9 ರಾಕೆಟ್ ನಭಕ್ಕೆ. ರಾಕೆಟ್‌ನ ಮೊದಲ ಮತ್ತು ಎರಡನೇ ಹಂತ ಪ್ರತ್ಯೇಕಗೊಂಡು ರಾಕೆಟ್‌ನ ಅರ್ಧ ಭಾಗ ಮತ್ತೆ ಭೂಮಿಗೆ

5. ಐಎಸ್‌ಎಸ್ ಸಮೀಪಕ್ಕೆ
ಬಾಹ್ಯಾಕಾಶ ಕೋಶವು ಐಎಸ್‌ಎಸ್‌ಗೆ ಜೋಡಣೆಯಾಗಲು ಗುರುತಿಸಲಾಗಿರುವ ಜಾಗದ ಸಮೀಪಕ್ಕೆ ಬರುತ್ತದೆ. ಸ್ವಯಂಚಾಲಿತ ಜೋಡಣೆಗೊಳ್ಳುವ ಪ್ರಕ್ರಿಯೆ ಆರಂಭ



6. ಜೋಡಣೆ
ಅಂತಿಮ ಹಂತದ ಕಾರ್ಯಾಚರಣೆ ನಡೆಸುವ ಬಾಹ್ಯಾಕಾಶ ಕೋಶ ಪೂರ್ವ ನಿಗದಿತ ಜಾಗಕ್ಕೆ ಜೋಡಣೆಯಾಗುತ್ತದೆ. ಇದು ಸ್ವಯಂ ಚಾಲಿತವಾಗಿ ನಡೆಯುತ್ತದೆ. ಏನಾದರೂ ಸಮಸ್ಯೆ ಎದುರಾದರೆ ಕೋಶದಲ್ಲಿರುವ ಪೈಲಟ್ ಮ್ಯಾನ್ಯುವಲ್ ಆಗಿ ಈ ಕಾರ್ಯ ನಡೆಸುತ್ತಾರೆ. ಜೋಡಣೆಯ ಬಳಿಕ ಗಗನಯಾತ್ರಿಗಳು ಐಎಸ್‌ಎಸ್ ಪ್ರವೇಶಿಸುತ್ತಾರೆ. ಗುರುವಾರ ಸಂಜೆ 4.30ಕ್ಕೆ ಈ ಪ್ರಕ್ರಿಯೆ ನಡೆಯಲಿದೆ

4. ನಿಲ್ದಾಣದ ಕಕ್ಷೆಗೆ
ಐಎಸ್‌ಎಸ್ ಹತ್ತಿರ ತಲುಪಿದ ನಂತರ ಡ್ರ್ಯಾಗನ್ ನಿಲ್ದಾಣದೊಂದಿಗೆ ಸಂವಹನ ಸಾಧಿಸುತ್ತದೆ. ಅಂತಿಮ ಹಂತದ ಕಕ್ಷೆ ಬದಲಾವಣೆ ಪ್ರಕ್ರಿಯೆ ಕೈಗೊಂಡು ಡ್ರ್ಯಾಗನ್ ನಿಲ್ದಾಣದ ಕಕ್ಷೆಗೆ ತಲುಪುವಂತೆ ಮಾಡಲಾಗುತ್ತದೆ

ಆಧಾರ: ಆಕ್ಸಿಯಂ ಸ್ಪೇಸ್ ವೆಬ್‌ಸೈಟ್, ಪಿಐಬಿ, ಪಿಟಿಐ, ಸ್ಪೇಸ್ ಎಕ್ಸ್, ನಾಸಾ

ಭಾರತಕ್ಕೆ ಏನು ಉಪಯೋಗ?



ಶುಭಾಂಶು ಶುಕ್ಲಾ ಅವರ ಗಗನಯಾನವು ಭಾರತದ ಬಾಹ್ಯಾಕಾಶ ಸಂಶೋಧನೆಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಅಮೆರಿಕ, ರಷ್ಯಾ, ಚೀನಾ ನಂತರ ಭಾರತವು ಗಗನಯಾನ ಕ್ಷೇತ್ರದಲ್ಲಿ ಮಹತ್ವದ ಯೋಜನೆಗಳನ್ನು ಹಾಕಿಕೊಂಡಿದೆ. ಇಸ್ರೊದ ಮುಂದಿನ ಯೋಜನೆಗಳ ದೃಷ್ಟಿಯಿಂದ ಶುಭಾಂಶು ಶುಕ್ಲಾ ಅವರ ಅನುಭವಕ್ಕೆ ಬಹಳ ಪ್ರಾಮುಖ್ಯವಿದೆ. ಭಾರತವು ಒಂದೆಡೆ 2027ರಲ್ಲಿ ಗಗನಯಾನದ ಕಾರ್ಯಗತಗೊಳಿಸುವ ಸಿದ್ಧತೆ ನಡೆಸುತ್ತಿದೆ. ಮತ್ತೊಂದೆಡೆ, 2035ಕ್ಕೆ ತನ್ನದೇ ಬಾಹ್ಯಾಕಾಶ ನಿಲ್ದಾಣವನ್ನು ಸಜ್ಜುಗೊಳಿಸುವ ಯೋಚನೆ ಹೊಂದಿದೆ. 2040ರ ಹೊತ್ತಿಗೆ ಚಂದ್ರನ ಮೇಲೆ ಗಗನಯಾತ್ರಿಯನ್ನು ಇಳಿಸುವ ಯೋಜನೆಯನ್ನೂ ಹಾಕಿಕೊಂಡಿದೆ. ಹೀಗೆ ಬಾಹ್ಯಾಕಾಶ ಯಾನದ ಹಲವು ಯೋಜನೆಗಳನ್ನು ಹೊಂದಿರುವ ಭಾರತಕ್ಕೆ ಶುಭಾಂಶು ಶುಕ್ಲಾ ಅವರ ಅನುಭವವು ನೆರವಿಗೆ ಬರಲಿದೆ. ‘ಆಕ್ಸಿಯಂ 4’ ಯೋಜನೆಯಲ್ಲಿ ಶುಭಾಂಶು ಶುಕ್ಲಾ ಅವರ ಪ್ರಯಾಣಕ್ಕಾಗಿ ಇಸ್ರೊ ₹500 ಕೋಟಿ ವೆಚ್ಚ ಮಾಡಿದೆ.

ಮೊದಲ ಗಗನಯಾತ್ರಿ ರಾಕೇಶ್ ಶರ್ಮಾ




ಭಾರತದ ಮೊದಲ ಗಗನಯಾತ್ರಿ ರಾಕೇಶ್ ಶರ್ಮಾ. ಅವರು ಕೂಡ ಭಾರತೀಯ ವಾಯುಸೇನೆಯಲ್ಲಿ ಪೈಲಟ್ ಆಗಿದ್ದವರೇ. ಆಗ ದೇಶದಲ್ಲಿ ಯಾವುದೇ ಗಗನಯಾನದ ಕಾರ್ಯಕ್ರಮ ಇರಲಿಲ್ಲ. ಮೇಲಾಗಿ, ಶರ್ಮಾ ಅವರಿಗೆ ಗಗನಯಾಯನ ಕೈಗೊಳ್ಳುವ ಮಹತ್ವಾಕಾಂಕ್ಷೆಯೂ ಇರಲಿಲ್ಲ. ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರ ಪ್ರಯತ್ನದ ಫಲವಾಗಿ ರಾಕೇಶ್ ಶರ್ಮಾ ಅವರು 1984ರಲ್ಲಿ ರಷ್ಯಾದ ಗಗನನೌಕೆಯಲ್ಲಿ ರಷ್ಯಾದ ಇಬ್ಬರು ಗಗನಯಾತ್ರಿಗಳೊಂದಿಗೆ ಅಂತರಿಕ್ಷಕ್ಕೆ ಹಾರಿದ್ದರು. ಅದಕ್ಕಾಗಿ ಅತ್ಯಂತ ಕಡಿಮೆ ಅವಧಿಯಲ್ಲಿ ರಷ್ಯನ್ ಭಾಷೆ ಕಲಿತು, ರಷ್ಯಾದಲ್ಲಿ ತರಬೇತಿ ಪಡೆದು, ಕಠಿಣ ದೈಹಿಕ ಹಾಗೂ ಮಾನಸಿಕ ಸಿದ್ಧತೆಗಳೊಂದಿಗೆ ಯಶಸ್ವಿಯಾಗಿ ಬಾಹ್ಯಾಕಾಶ ಯಾನ ಪೂರೈಸಿದ್ದರು. ಆಗ ಅವರಿಗೆ 35 ವರ್ಷ. ಅವರು ಭಾರತದ ಮೊದಲ ಮತ್ತು ಜಗತ್ತಿನ 128ನೇ ಗಗನಯಾತ್ರಿಯಾಗಿದ್ದರು.

ಶುಕ್ಲಾ ಮತ್ತು ತಂಡ ಮಾಡುವುದೇನು?

ಆಕ್ಸಿಯಂ–4 ಹೆಸರಿನಲ್ಲಿ ನಡೆಯುತ್ತಿರುವ ಈ ಬಾಹ್ಯಾಕಾಶ ಯಾನದಲ್ಲಿ ಅತ್ಯಂತ ಕಡಿಮೆ ಗುರುತ್ವಾಕರ್ಷಣೆ ಶಕ್ತಿ (ಮೈಕ್ರೊಗ್ರ್ಯಾವಿಟಿ) ಇರುವ ಭೂಮಿಯ ಕೆಳ ಕಕ್ಷೆಯಲ್ಲಿ ಹಲವು ದೇಶಗಳ ಸಹಭಾಗಿತ್ವದಲ್ಲಿ ವೈಜ್ಞಾನಿಕ ಅಧ್ಯಯನಗಳು ನಡೆಯಲಿವೆ. ಶುಕ್ಲಾ ಸಹಿತ ನಾಲ್ವರು ಗಗನಯಾತ್ರಿಗಳು 60 ವೈಜ್ಞಾನಿಕ ಅಧ್ಯಯನಗಳು ಹಾಗೂ ಅಮೆರಿಕ, ಭಾರತ, ಪೋಲೆಂಡ್, ಹಂಗರಿ, ಸೌದಿ ಅರೇಬಿಯಾ, ಬ್ರೆಜಿಲ್, ನೈಜೀರಿಯಾ, ಯುಎಇ, ಯುರೋಪಿನ ವಿವಿಧ ದೇಶಗಳು ಸೇರಿದಂತೆ 31 ರಾಷ್ಟ್ರಗಳಿಗೆ ಸಂಬಂಧಿಸಿದ ವೈಜ್ಞಾನಿಕ ಚಟುವಟಿಕೆಗಳನ್ನು ನಡೆಸಲಿದ್ದಾರೆ. ಬಾಹ್ಯಾಕಾಶದಲ್ಲಿ ವೈಜ್ಞಾನಿಕ ಸಂಶೋಧನೆ ಮತ್ತು ಅಧ್ಯಯನ ನಡೆಸುವ ಭಾರತದ ಸಾಮರ್ಥ್ಯವನ್ನೂ ಈ ಯೋಜನೆ ಒರೆಗೆ ಹಚ್ಚಲಿದೆ.


ಶುಕ್ಲಾ ಅವರೊಂದಿಗೆ ಗಗನಯಾತ್ರಿಗಳಾದ ಅಮೆರಿಕದ ಕಮಾಂಡರ್ ಪೆಗ್ಗಿ ವಿಟ್ಸನ್, ಪೋಲೆಂಡ್‌ನ ಸ್ವವೋಶ್ ಓಜ್ನೈನ್‌ಸ್ಕಿ ವೀಶ್ನೀವುಫ್‌ಸ್ಕಿ ಹಾಗೂ ಹಂಗರಿಯ ಟಿಬೋರ್ ಕಾಪು

ಇಸ್ರೊ ಪ್ರಯೋಗಗಳು



ಶುಕ್ಲಾ ಮತ್ತವರ ತಂಡವು ಭಾರತ/ಇಸ್ರೊದ ಒಂಬತ್ತು ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲಿದೆ. ಗುರುತ್ವಾಕರ್ಷಣೆ ಶಕ್ತಿ ದುರ್ಬಲವಾಗಿರುವ ವಾತಾವರಣದಲ್ಲಿ ಬೆಳೆಗಳನ್ನು ಬೆಳೆಯುವ, ಬ್ಯಾಕ್ಟೀರಿಯಾ, ಪಾಚಿಯಂತಹ ಸೂಕ್ಷ್ಮಾಣು ಜೀವಿಗಳ ಬೆಳವಣಿಗೆಗೆ ಸಂಬಂಧಿಸಿದ ಪ್ರಯೋಗಗಳನ್ನು ಕೈಗೊಳ್ಳಲಿದೆ.

ಐಎಸ್‌ಎಸ್‌ನಲ್ಲಿ ಬಿತ್ತನೆ ಬೀಜಗಳು, ಮೊಳಕೆ: ಬಾಹ್ಯಾಕಾಶದ ವಾತಾವರಣವು ಬಿತ್ತನೆ ಬೀಜಗಳ ಮೇಲೆ ಬೀರುವ ಪರಿಣಾಮವನ್ನು ತಿಳಿಯುವ ಉದ್ದೇಶವನ್ನು ಇಸ್ರೊ ಹೊಂದಿದೆ. ಇದಕ್ಕಾಗಿ ಆರು ಪ್ರಭೇದಗಳ ಬಿತ್ತನೆ ಬೀಜಗಳನ್ನು ಶುಕ್ಲಾ ಮತ್ತವರ ತಂಡ ಕೊಂಡುಹೋಗಿದ್ದು, ಗಗನಯಾತ್ರಿಗಳು ವಾಪಸ್ ಬಂದ ಮೇಲೆ ಆ ಬೀಜಗಳನ್ನು ಭೂಮಿಯಲ್ಲಿ ಬಿತ್ತನೆ ಮಾಡಿ, ಗಿಡಗಳನ್ನು ಬೆಳೆಸಿ ಅವುಗಳನ್ನು ವಿಜ್ಞಾನಿಗಳು ಪರಿಶೀಲನೆಗೆ ಒಳಪಡಿಸಲಿದ್ದಾರೆ. ಇದರೊಂದಿಗೆ ಬಾಹ್ಯಾಕಾಶದಲ್ಲಿ ಮೊಳಕೆ ಒಡೆದ ಬೀಜಗಳ ಬೆಳವಣಿಗೆಗಳ ಬಗ್ಗೆಯೂ ಇಸ್ರೊ ಅಧ್ಯಯನ ನಡೆಸಲಿದೆ. ಭವಿಷ್ಯದಲ್ಲಿ ಅಂತರಿಕ್ಷದಲ್ಲಿ ಬೆಳೆಗಳನ್ನು ಹೇಗೆ ಬೆಳೆಯಬಹುದು ಎಂಬುದನ್ನು ತಿಳಿಯುವ ಉದ್ದೇಶವನ್ನು ಈ ಪ್ರಯೋಗಗಳು ಹೊಂದಿವೆ.



ಐಎಸ್‌ಎಸ್‌ನಲ್ಲಿ ಸಯನೋಬ್ಯಾಕ್ಟೀರಿಯಾ: ನೀರಿನಲ್ಲಿ ಕಂಡುಬರುವ ಈ ಬ್ಯಾಕ್ಟೀರಿಯಾಗಳು ದ್ಯುತಿಸಂಶ್ಲೇಷಣೆ ಕ್ರಿಯೆ ನಡೆಸುವ ಸಾಮರ್ಥ್ಯ ಹೊಂದಿವೆ. ಬಾಹ್ಯಾಕಾಶದ ವಾತಾವರಣವು ಇವುಗಳ ಮೇಲೆ ಏನು ಪರಿಣಾಮ ಬೀರಬಹುದು ಎಂಬುದನ್ನು ಅರಿಯುವುದಕ್ಕಾಗಿ ಇಸ್ರೊ ಈ ಪ್ರಯೋಗವನ್ನು ಹಮ್ಮಿಕೊಂಡಿದೆ. ಸಯನೋಬ್ಯಾಕ್ಟೀರಿಯಾದ ಎರಡು ತಳಿಗಳನ್ನು ಪರಸ್ಪರ ಹೋಲಿಕೆ ಮಾಡಿ, ಸೂಕ್ಷ್ಮ ಗುರುತ್ವದ ವಾತಾವರಣದಲ್ಲಿ ಅವುಗಳ ಬೆಳವಣಿಗೆ, ಜೀವಕೋಶಗಳ ಪ್ರತಿಕ್ರಿಯೆ ಮತ್ತು ಅವುಗಳ ಜೈವಿಕ ಚಟುವಟಿಕೆಗಳನ್ನು ಪರಿಶೀಲನೆಗೆ ವಿಜ್ಞಾನಿಗಳು ಒಳಪಡಿಸಲಿದ್ದಾರೆ. ಇದರ ಫಲಿತಾಂಶವು ಭವಿಷ್ಯದ ಬಾಹ್ಯಾಕಾಶ ನೌಕೆ/ಬಾಹ್ಯಾಕಾಶ ನಿಲ್ದಾಣದ ಜೀವ ರಕ್ಷಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ನೆರವಾಗುವ ನಿರೀಕ್ಷೆ ಇದೆ.

ಅಂತರಿಕ್ಷದಲ್ಲಿ ಸೂಕ್ಷ್ಮ ಪಾಚಿ: ಶುಕ್ಲಾ ಮತ್ತು ತಂಡವು ಬಾಹ್ಯಾಕಾಶ ನಿಲ್ದಾಣದಲ್ಲಿ ಸೂಕ್ಷ್ಮ ಪಾಚಿಯ (ಮೈಕ್ರೊಆಲ್ಗೆ) ಮೂರು ಪ್ರಭೇದಗಳನ್ನು ಬೆಳೆಸಲಿದ್ದಾರೆ. ಅವುಗಳ ಬೆಳವಣಿಗೆ, ವಂಶವಾಹಿ ಚಟುವಟಿಕೆ ಮತ್ತು ಚಯಾಪಚಯ ಕ್ರಿಯೆಯ ಮೇಲೆ ಶೂನ್ಯ ಗುರುತ್ವದ ಪರಿಣಾಮ ಏನು ಎಂಬುದನ್ನು ಭೂಮಿಯಲ್ಲಿ ಬೆಳೆಯುವ ಪಾಚಿಯೊಂದಿಗೆ ಹೋಲಿಸಲಿದ್ದಾರೆ. ಭವಿಷ್ಯದಲ್ಲಿ ಪಾಚಿಯನ್ನು ಬಾಹ್ಯಾಕಾಶದಲ್ಲಿ ಆಹಾರವಾಗಿ ಅಥವಾ ಇಂಧನವಾಗಿ ಅಥವಾ ಜೀವರಕ್ಷಕ ವ್ಯವಸ್ಥೆಯಲ್ಲಿ ಬಳಬಹುದು ಎಂಬುದು ವಿಜ್ಞಾನಿಗಳ ವಾದ.

ಕಂಪ್ಯೂಟರ್ ಬಳಕೆ ಪರಿಣಾಮ: ಸೂಕ್ಷ್ಮ ಗುರುತ್ವ ವಾತಾವರಣದಲ್ಲಿ ಕಂಪ್ಯೂಟರ್ ಪರದೆಗಳ ವೀಕ್ಷಣೆಯಿಂದ ದೇಹ ಮತ್ತು ಮನಸ್ಸಿನ ಆರೋಗ್ಯದ ಮೇಲೆ ಬೀರುವ ಪರಿಣಾಮ ಏನು ಎಂಬುದನ್ನು ಕೇಂದ್ರೀಕರಿಸಿ ಮತ್ತೊಂದು ಅಧ್ಯಯನ ನಡೆಯಲಿದೆ. ಇದರ ಫಲಿತಾಂಶವು ಮುಂದಿನ ದಿನಗಳಲ್ಲಿ ಬಾಹ್ಯಾಕಾಶದಲ್ಲಿ ಬಳಸುವ ಕಂಪ್ಯೂಟರ್‌ಗಳ ವಿನ್ಯಾಸದಲ್ಲಿ ಬದಲಾವಣೆಗೆ ಕಾರಣವಾಗಬಹುದು



ಟಾರ್ಡಿಗ್ರೇಡ್‌ಗಳ ಪ್ರಯೋಗ: ಅತ್ಯಂತ ಕಠಿಣ ವಾತಾವರಣದಲ್ಲೂ ಜೀವಿಸುವ ಸಾಮರ್ಥ್ಯ ಹೊಂದಿರುವ, ಟಾರ್ಡಿಗ್ರೇಡ್ (ಜಲ ಕರಡಿ) ಎಂದು ಕರೆಯಲಾಗುವ ಎಂಟು ಕಾಲುಗಳುಳ್ಳ ಅತ್ಯಂತ ಚಿಕ್ಕ ಪ್ರಾಣಿಯನ್ನು ಇಸ್ರೊದ ಪ್ರಯೋಗದ ಭಾಗವಾಗಿ ಗಗನಯಾನಿಗಳು ಐಎಸ್‌ಎಸ್‌ಗೆ ಹೊತ್ತೊಯ್ದಿದ್ದಾರೆ. 0.2 ಮಿ.ಮೀನಿಂದ 1.2 ಮಿ.ಮೀನಷ್ಟು ಉದ್ದವಿರುವ ಈ ಪ್ರಾಣಿಗಳು ನಿಧಾನಗತಿ ಚಲನೆಯನ್ನು ಹೊಂದಿವೆ. ಬಾಹ್ಯಾಕಾಶದ ವಾತಾವರಣದಲ್ಲಿ ಇವುಗಳು ಹೇಗೆ ಜೀವಿಸುತ್ತವೆ ಎಂಬುದನ್ನು ಇಸ್ರೊ ಅಧ್ಯಯನ ನಡೆಸಲಿದೆ

ಸಂಯಮದ ಸಣ್ಣ ಒರತೆ

ನುಡಿ ಬೆಳಗು


ವಾಸುದೇವ ನಾಡಿಗ್

ಹಾಲು ಉಕ್ಕಿ ಮೇಲೆ ಹರಿದು ಗ್ಯಾಸ್ ಕಟ್ಟೆ ಎಲ್ಲ ರಂಪವಾದಾಗ ಶುರುವಾದ ತಕರಾರು ಅದು. ಬುಟ್ಟಿ ತುಂಬಾ ತೊಳೆದಿಟ್ಟ ರಾಶಿ ಪಾತ್ರೆಯ ಅಡಿ ಕಾಣದ ಹಾಗೆ ಕೂತಿದ್ದ ಇಕ್ಕಳ ಸಿಗದಿದ್ದುದರಿಂದ ಇಷ್ಟೆಲ್ಲ ರಂಪ ರಾಮಾಯಣ. ಇಕ್ಕಳ ಬೇಗ ಸಿಗದೆ ಬುಳಬುಳ ಹಾಲು ಸುರಿದಾಗ ಆದ ಮನಸ್ತಾಪ. ನಿಜ, ಕೈಗೆ ಸಿಗಬೇಕಾದ ಅಗತ್ಯ ವಸ್ತು ಸಿಗದೇ ಇವೆಲ್ಲ ರಂಪ. ಯಾರು ಹುಡುಕಿಕೊಡಬೇಕು ಎಂಬ ಅಹಂ ತಕರಾರು ಕೂಡ. ಇಬ್ಬರ ಮಧ್ಯೆ ಇಂಥವು ಅನೇಕ. ಕಾಫಿ ಲೋಟಗಳು ಕೈಗೆ ಸಿಗದೆ ಪಾತ್ರೆಗಳ ರಾಶಿ ನಡುವೆ ಒಂದು ಚಮಚ ಒಂದು ಡಬ್ಬಿ ಮುಚ್ಚಳ, ಫಿಲ್ಟರ್‌ನ ಜಾಲರಿ ಸಿಗದೆ ಹೀಗೆ... ಗೊಣಗುತ್ತಲೇ ಇಬ್ಬರೂ ಸಾಫ್ಟ್‌ವೇರ್ ಸಮಸ್ಯೆಗಳನ್ನು ಬಗೆಹರಿಸಲು ಹೊರಡುತ್ತಾರೆ. ಮುಖ ಸಿಂಡರಿಸಿಕೊಂಡೇ ಶುರುವಾಗುವ ದಿನಚರಿ ಪ್ರಯಾಣ ಮತ್ತು ಸಂಜೆ ಮನೆ ತಲುಪಿದಾಗ ಒಗ್ಗರಣೆಗೆ ಯಾರು ಸಾಸಿವೆ, ಜೀರಿಗೆ ಹಾಕಬೇಕು ಎನ್ನುವ ತನಕ ವಟಗುಟ್ಟೋದೇ.

ಸಣ್ಣ ಹೊಂದಾಣಿಕೆ ಮತ್ತು ಅನಗತ್ಯ ಅಹಂಗಳೇ ಬಾಳನ್ನು ಆಳುತ್ತಿರುವಾಗ ಯಾವ ಮನೆಯ ಕಾಫಿ, ಒಗ್ಗರಣೆ ಮತ್ತು ನಿದ್ದೆ ಸುಂದರಗೊಳ್ಳಬಹುದು? ಲೋಟ, ಪಾತ್ರೆ, ಇಕ್ಕಳ, ಟವೆಲ್, ಸೋಪು, ಖಾಲಿಯಾದ ಟೂತ್ ಪೇಸ್ಟ್‌ನಿಂದ ಶುರುವಾಗುವ ದಿನಚರಿ ಬಯಸುವುದು ಒಂದು ಸಣ್ಣ ಸಂಯಮ ಮತ್ತು ಹೊಂದಾಣಿಕೆ. ಇದರ ತಳ್ಳಾಟದಲ್ಲಿ ದುಬಾರಿ ಆಗುವ ನೆಮ್ಮದಿ.

ಇಬ್ಬರಿಗೂ ಈ ದಿನ ಕಾರು ಓಡಿಸುವುದಕ್ಕೆ ಮನಸ್ಸಿರದ ಕಾರಣ ಸ್ವಲ್ಪ ಬೇಗನೆ ಮೆಟ್ರೊ ಹತ್ತಿದರು. ಮೆಟ್ರೊದ ಮೊದಲ ನಿಲ್ದಾಣದಿಂದಲೇ ಪ್ರಯಾಣ ಶುರುವಾದ್ದರಿಂದ ಸೀಟಿನ ಸಮಸ್ಯೆ ಇಲ್ಲ. ಸ್ವಲ್ಪ ದೂರ ಹೋದ ಹಾಗೆ ಕಾಲಿಡಲೂ ಜಾಗವಿರಲ್ಲ. ಹತ್ತುವ ಇಳಿಯುವ ಬಗೆ ಬಗೆ ಮಂದಿ. ಆಗ ತಾನೇ ಅಲ್ಲಿ ಮೆಟ್ರೊ ಹತ್ತಿದ ಆ ವೃದ್ಧ ಜೀವ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆದ ಹಾಗೆ ಕಾಣುತ್ತದೆ. ಕೈಯಲ್ಲಿ ಇನ್ನೂ ತೆಗೆಯದ ಕ್ಯಾನುಲ್ಲಾದಲ್ಲಿ ರಕ್ತದ ಜಿನುಗು. ಜೊತೆಗೆ, ಇಷ್ಟಗಲ ಕವರ್ ಜೊತೆಗೆ ಮೆಡಿಸಿನ್, ರಿಪೋರ್ಟ್‌ಗಳನ್ನು ಹಿಡಿದ ವೃದ್ಧೆ. ಆದರೂ ಇಬ್ಬರ ಮುಖದಲ್ಲೂ ಮಾಸದ ಮಂದಹಾಸ. ಕಾರನ್ನು ಯಾರು ಓಡಿಸಬೇಕು ಎಂಬ ತಗಾದೆಯಲ್ಲಿ ಮೆಟ್ರೊ ಹತ್ತಿದ್ದ ಇವರಿಬ್ಬರು, ಆ ವೃದ್ಧ ದಂಪತಿಗಳಿಗೆ ಕೂಡಲು ಎದ್ದು ಜಾಗ ಬಿಟ್ಟುಕೊಟ್ಟರು.

ಬದುಕು ಯಾವುದೇ ರೂಪದಲ್ಲಿ ಧುತ್ತನೆ ಬಂದು ಪ್ರೀತಿ ಅನ್ಯೋನ್ಯತೆಯನ್ನು ಬಿತ್ತಬಲ್ಲದು. ನಾವು ಸ್ವೀಕರಿಸಬೇಕಷ್ಟೆ.

ಗುಂಡಣ್ಣ




ಪದಬಂಧ 6085

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಡುವೆ ಲೋಭವನ್ನಿಟ್ಟು ಆಸೆ ಹುಟ್ಟಿಸುವುದು (4)
2.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
4.ಈ ಪರಿ ಬಂದಿರುವ ಅಣಕು (4)
7.ಯೋಚನೆಯೇ ಬೇಡ! ಮುಕ್ತಿ ಇಲ್ಲಿದೆ! (4)
8.ತೆಂಗಿನ ಕಾಯಿಯ ಮೇಲಿನ ನಾರು (2)
9.ಗಮನವಿಟ್ಟಾಗ ಗಂಭೀರವಾದುದು ಕಾಣುತ್ತಿದೆ (3)
10.ಪಟ್ಟಣದವನು ಕಟ್ಟಿರುವ ಬಾಜಿ (2)
11.ತಾಯಿಯ ಮನೆಯ ಕಿಟಕಿ (4)
12.ದೇವತೆಗಳ ವೈದ್ಯ ತರಾತುರಿಯಲ್ಲಿ ಬಂದಿದ್ದಾನಲ್ಲಾ! (4)
14.ಬದುಕಿದ್ದೂ ಸತ್ತಂತೆ ಇರುವವನು (4)
15.ಇತರರಿಗೆ ಸಹಾಯ ಮಾಡುವವನು (4)

ಮೇಲಿಂದ ಕೆಳಕ್ಕೆ
1.ಪ್ರತಾಪ ತೋರಿಸುವವನ ಮುಂದೆ ಅಳುವಿಕೆ (3)
3.ವರ್ತಕನ ರೂಢಿ! (3)
5.ರೀತಿಯೊಡಗೂಡುವ ಜೋಡು ನುಡಿ (3)
6.ಪತಿಯೊಡನೆ ಚಿತೆಯೇರುವಿಕೆ (5)
7.ಬೆಂಗಳೂರಿನ ಭಾರೀ ಸೌಧ (5)
10.ಪಡಿತರ ತಂದಿದ್ದು ಈ ಅಗಲವಾದ ತಟ್ಟೆಯಲ್ಲ (3)
11.ವಾಯುಮಾನದ ಬಗ್ಗೆ ಚಿಂತಿಸುತ್ತಿರುವ ಕುಳ್ಳ (3)
13.ಪೇರಿ ಕೀಳದೆ ಹೀಗೆ ದುರಸ್ತಿ ಮಾಡಿ! (3)



6084ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವ್ಯತ್ಯಾಸ 3.ಸಂದಣಿ 5.ಡಮರುಗ 7.ವಿಭಜನೆ 9.ರಜನಿ 11.ಆರ್ಯೆ 12.ಲಡಿ 13.ಸವತಿ 15.ಹಸುಗೂಸು 19.ಮದಗಜ 20.ವರ್ಣನೆ 21.ಲಿಲಾವು

ಮೇಲಿಂದ ಕೆಳಕ್ಕೆ:
1.ವ್ಯಸನಿ 2.ಸಡಗರ 4.ದನುಜ 6.ಗವಿ 8.ನೆಗಡಿ 10.ನಿವಾಸ 11.ಆರೋಹ 14.ತಿಲಾಂಜಲಿ 16.ಸುಪರ್ಣ 17.ಸುಮ 18.ಹಗೇವು

ಸುಡೊಕು 6469

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			5		8		
8			3		9		2	1
	4	3		1				7
	3	2				7		6
				7	2		9	
7	9				6			5
3	1		9		5		7	
	7			8		1	6	9
	6	9			1		3	

6468 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

26 ಜೂನ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಪ್ರತಿಪದ್ ಗಂ. 13-25 ನಕ್ಷತ್ರ: ಆರ್ದ್ರಾ ಗಂ. 8-47 ಯೋಗ: ಧ್ರುವ ಗಂ. 23-40 ಕರಣ: ಬವ ಗಂ. 13-25, ಮಿಥುನ ಮಾಸದ 12 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 – 03-00 , ಸೂರ್ಯೋದಯ : 06-10 ಸೂರ್ಯಾಸ್ತ : 06-57. ಮುಸ್ಲಿಂ ದಿನಾಂಕ : 29 ಜುಲ್‌ಹಿಜಾ , ದಿನ ವಿಶೇಷ : ಪುರಿ ಜಗನ್ನಾಥ ರಥಯಾತ್ರ , ಅದೃಷ್ಟ ಸಂಖ್ಯೆ : 7, 8

ಮೇಷ: ಕುಟುಂಬದಲ್ಲಿ ನಿಮ್ಮ ನಿಲುವುಗಳೇನು ಎಂಬುದನ್ನು ಸ್ಪಷ್ಟಪಡಿಸ-ಬೇಕಾಗುವುದು. ಬದುಕಿನಲ್ಲಿ ನೆಲೆ ನಿಂತ ನೆಮ್ಮದಿ ಸಿಗಲಿದೆ. ಹಿರಿಯರಿಂದ ತಿಳಿದುಕೊಂಡಿದ್ದ ಕೆಲ ವಿಷಯಗಳು ಉಪಯೋಗಕ್ಕೆ ಬರಲಿವೆ.

ವೃಷಭ: ಸಂಘ ಸಂಸ್ಥೆಯಂಥ ಕಡೆಯಿಂದ ಹಣಕಾಸಿನ ಸಲಹೆಗಾರರಾಗಿ ಆಹ್ವಾನ ಬರುವ ಲಕ್ಷಣಗಳಿವೆ. ಆತ್ಮೀಯರೊಂದಿಗೆ ಭಾವನೆ ಹಂಚಿಕೊಳ್ಳುವಿರಿ. ರೇಷ್ಮೆ ವಸ್ತ್ರಗಳ ಉತ್ಪಾದನಾ ಕೆಲಸಗಳು ಚುರುಕುಗತಿಯಿಂದ ಸಾಗಲಿವೆ.

ಮಿಥುನ: ಪಾಲುದಾರಿಕೆ ವಿಷಯದಲ್ಲಿ ಸಹೋದರರೇ ಶತ್ರುಗಳಾಗುವ ಸಂಭವವಿದೆ. ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವವರು ತಪ್ಪು ದಾರಿಯಲ್ಲಿ ಸಂಚರಿಸಿ ಗೌರವ ಕಳೆದುಕೊಳ್ಳಬೇಡಿ.

ಕರ್ಕಾಟಕ: ಬರಲಿರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವ ವಿಚಾರದಲ್ಲಿ ವಿಫಲರಾಗುವಿರಿ. ರಕ್ತದೊತ್ತಡ ಪರೀಕ್ಷಿಸಿಕೊಳ್ಳುವುದು ಒಳ್ಳೆಯದು. ಬ್ಯಾಂಕ್ ನೌಕರರಿಗೆ ಒತ್ತಡ ಕಡಿಮೆಯಾಗಿ ನೆಮ್ಮದಿ ಸಿಗುವುದು.

ಸಿಂಹ: ಆರೋಪಗಳು ನಿರಾಧಾರ ಎಂದು ಸಾಬೀತುಗೊಂಡು ಮನಸ್ಸಿಗೆ ನೆಮ್ಮದಿ ಉಂಟಾಗುವುದು. ನಿಮ್ಮಂತೆಯೇ ಇತರರೂ ಸಂತೋಷವಾಗಿರಬೇಕೆಂಬ ನಿಮ್ಮ ಮನೋಭಾವದಿಂದಾಗಿ ಗೌರವ ಪಡೆದುಕೊಳ್ಳುವಿರಿ.

ಕನ್ಯಾ: ಮನೆಯಲ್ಲಿನ ಆಗು–ಹೋಗುಗಳ ಬಗೆಗೆ ಗಮನ ನೀಡಬೇಕಾಗುವುದು. ಆಫೀಸಿನಲ್ಲಿ ಉಂಟಾಗಿದ್ದ ಸಮಸ್ಯೆಗಳ ಒತ್ತಡ ಮನೆಯ ಸದಸ್ಯರ ಮೇಲೆ ತೀರಿಸುವುದು ಸರಿಯಲ್ಲ. ಅಸಮಾಧಾನದ ವಾತಾವರಣವಿರುವುದು.

ತುಲಾ: ಆರ್ಥಿಕವಾಗಿ ದೃಢ ನಿರ್ಧಾರವನ್ನು ಕೈಗೊಂಡ ಫಲದಿಂದಾಗಿ ಒಳ್ಳೆಯ ಫಲಿತಾಂಶ ಪಡೆಯುವಿರಿ. ವ್ಯವಹಾರಕ್ಕೆ ಅನುಕೂಲವಾಗುವಂತೆ ಹೊಸಜನರ ಪರಿಚಯವಾಗಲಿದೆ. ಅನಿವಾರ್ಯದ ಪ್ರಯಾಣವನ್ನು ಮಾತ್ರ ಕೈಗೊಳ್ಳಿ.

ವೃಶ್ಚಿಕ: ಸೃಜನಶೀಲ ಯೋಜನೆಯನ್ನು ಮುಂದುವರಿಸಲು ಶುಭದಿನ. ಆಶಾದಾಯಕ ಬೆಳವಣಿಗೆಯು ಗೋಚರಕ್ಕೆ ಬರಲಿದೆ. ಯಾವ ಕೆಲಸದಲ್ಲೂ ಅಡೆತಡೆಗಳೇನೂ ಇರದು. ಗೃಹ ಸಾಮಗ್ರಿ ಖರೀದಿಯಿಂದ ಖರ್ಚು ಬರಲಿದೆ.

ಧನು: ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನ ಭೀತಿ ಇರುತ್ತದೆ. ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚಿಸಿ ನಂತರದಲ್ಲಿ ತೀರ್ಮಾನಿಸಿ. ದಿನಸಿ ವರ್ತಕರಿಗೆ ಲಾಭದಾಯಕ ದಿನ.

ಮಕರ: ಪತ್ರಿಕೆಯವರ ಸಹಕಾರದಿಂದ ಪ್ರಚಾರವನ್ನು ಪಡೆದುಕೊಳ್ಳುವಿರಿ. ರಾಜಕೀಯ ವ್ಯಕ್ತಿಗಳು ಪ್ರತಿಪಕ್ಷಗಳ ಆಪಾದನೆಗಳಿಗೆ ತೀಕ್ಷ್ಣ ಪ್ರತಿಕ್ರಿಯೆಯನ್ನು ಕೊಡುವುದರಿಂದ ಹೆಸರುವಾಸಿಯಾಗುವ ಸಂಭವವಿದೆ.

ಕುಂಭ: ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗ-ಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ಸಂಘ ಸಂಸ್ಥೆಗಳ ದೊಡ್ಡ ಸ್ಥಾನವನ್ನು ಅಲಂಕರಿಸಲು ಗಣ್ಯರು ಒತ್ತಾಯಿಸುವರು.

ಮೀನ: ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲಕರ ದಿನ. ಹಣಕಾಸಿನ ವಿಷಯದಲ್ಲಿ ಅಪರಿಚಿತರಿಂದ ಮೋಸ ಹೋಗುವ ಸಾಧ್ಯತೆ. ಸುಗಂಧ ವಸ್ತುಗಳ ಮಾರಾಟದಲ್ಲಿ ಹೆಚ್ಚಳ ಇರುವುದು.

ಪತಿ ಹತ್ಯೆಗೆ ನವ ವಿವಾಹಿತೆ ನೆರವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಮದುವೆಯಾದ ತಿಂಗಳಲ್ಲೇ ಪ್ರಿಯಕರನ ಜೊತೆಗೂಡಿ ಪತಿ ಹತ್ಯೆಗೆ ಯೋಜನೆ ರೂಪಿಸಿದ್ದ ಆರೋಪದಡಿ ನವ ವಿವಾಹಿತೆಯನ್ನು ತೆಲಂಗಾಣದ ಪೊಲೀಸರು ಬಂಧಿಸಿದ್ದಾರೆ.

ನವ ವಿವಾಹಿತೆ ಐಶ್ವರ್ಯಾ ಪತಿ ತೇಜೇಶ್ವರ ರಾವ್ ಅವರ ಬೈಕ್‌ಗೆ ಜಿಪಿಎಸ್ ಅಳವಡಿಸಿದ್ದು, ಅವರ ಇರುವಿಕೆ ಸ್ಥಳದ ಮಾಹಿತಿಯನ್ನು ತನ್ನ ಪ್ರಿಯಕರ ತಿರುಮಲರಾವ್‌ಗೆ ಒದಗಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ.

‘ಈ ಮಾಹಿತಿಯನ್ನು ಆಧರಿಸಿಯೇ, ಪ್ರಿಯಕರನಿಂದ ನಿಯೋಜಿಸಲ್ಪಟ್ಟಿದ್ದ ಹಂತಕರು ಜೂನ್ 17ರಂದು ಪತಿಯ ಕತ್ತು ಸೀಳಿ ಹತ್ಯೆ ಮಾಡಿದ್ದು, ಶವವನ್ನು ನೆರೆಯ ಆಂಧ್ರಪ್ರದೇಶದ ಪಾಣ್ಯಂ ಬಳಿ ಪೊದೆಗೆ ಎಸೆದಿದ್ದರು. ಐಶ್ವರ್ಯಾ–ತೇಜೇಶ್ವರ್ ವಿವಾಹ ಮೇ 18ರಂದು ನಡೆದಿದ್ದು, ತಿಂಗಳಲ್ಲಿಯೇ ಪತಿಯ ಅಂತ್ಯವಾಗಿದೆ’ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

ಮೃತರ ಸಹೋದರ ದೂರು ನೀಡಿದ್ದು ಪೊಲೀಸರು ನಾಪತ್ತೆ ಪ್ರಕರಣ ದಾಖಲಿಸಿದ್ದರು. 20ರಂದು ಶವ ಕೊಳೆತು ವಾಸನೆ ಬರಲಾರಂಭಿಸಿತ್ತು. ಪೊಲೀಸರು ಸ್ಥಳ ಪರಿಶೀಲಿಸಿದಾಗ ಕೊಲೆ ನಡೆದಿರುವುದು ದೃಢಪಟ್ಟಿತ್ತು. ಹತ್ಯೆಗೀಡಾದ ತೇಜೇಶ್ವರ ರಾವ್ ಅವರು ಬ್ಯಾಂಕೇತರ ಹಣಕಾಸು ಸಂಸ್ಥೆಯೊಂದರ ಉದ್ಯೋಗಿ ಆಗಿದ್ದರೆ, ಪ್ರಿಯಕರ ತಿರುಮಲರಾವ್ ಜಮೀನು ಸರ್ವೆಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.



‘ತುರ್ತು ಪರಿಸ್ಥಿತಿ: ಸಂತ್ರಸ್ತರಿಗೆ ಗೌರವ’

ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಅಂಗೀಕಾರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೇಶದ ಮೇಲೆ ಹೇರಲಾಗಿದ್ದ ತುರ್ತು ಪರಿಸ್ಥಿತಿಯಿಂದ ಸಂತ್ರಸ್ತರಾದವರನ್ನು ಸ್ಮರಿಸುವ ಜೊತೆಗೆ, ಅವರನ್ನು ಗೌರವಿಸುವ ನಿರ್ಣಯವನ್ನು ಕೇಂದ್ರ ಸಚಿವ ಸಂಪುಟ ಬುಧವಾರ ಅಂಗೀಕರಿಸಿದೆ.

‘ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರು ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದಕ್ಕೆ 50 ವರ್ಷ ಸಂದಿವೆ. ಈ ಹೇರಿಕೆ ಖಂಡನೀಯ’ ಎಂಬ ನಿರ್ಣಯವನ್ನು ಸಹ ಸಂಪುಟ ಸಭೆ ಅಂಗೀಕರಿಸಿದೆ.

‘ತುರ್ತು ಪರಿಸ್ಥಿತಿ ವೇಳೆ, ಸಂವಿಧಾನವು ಖಾತ್ರಿಪಡಿಸಿರುವ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಳೆದುಕೊಂಡವರು ಹಾಗೂ ಊಹೆಗೂ ಮೀರಿದ ಹಿಂಸೆಗೆ ಒಳಗಾದವರ ಗೌರವಾರ್ಥ ಸಭೆಯಲ್ಲಿ ಎರಡು ನಿಮಿಷ ಮೌನ ಆಚರಿಸಲಾಯಿತು’ ಎಂದು ಸಭೆ ಬಳಿಕ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಸಭೆ ನಡೆಯಿತು.


‘ಅಸಂಖ್ಯಾತ ಜನರು ಅಸಾಧಾರಣ ಧೈರ್ಯದಿಂದ ತುರ್ತು ಪರಿಸ್ಥಿತಿ ಹೇರಿಕೆಗೆ ಪ್ರತಿರೋಧ ಒಡ್ಡಿದ್ದರು. ಭಾರತದ ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡುವ ಪ್ರಯತ್ನಗಳು 1974ರಲ್ಲೇ ಆರಂಭವಾಗಿದ್ದವು. ಇದನ್ನು ವಿರೋದಿಸಿ ಆರಂಭಗೊಂಡಿದ್ದ ನವನಿರ್ಮಾಣ ಆಂದೋಲನ ಮತ್ತು ಸಂಪೂರ್ಣ ಕ್ರಾಂತಿ ಅಭಿಯಾನ ಹತ್ತಿಕ್ಕುವ ಪ್ರಯತ್ನಗಳು ನಡೆದವು. ಇಂತಹ ಎಲ್ಲ ದಮನಕಾರಿ ಯತ್ನಗಳನ್ನು ವಿರೋಧಿಸಿದ ಹಾಗೂ ತ್ಯಾಗ ಮಾಡಿದ ಜನರನ್ನು ಸ್ಮರಿಸಲು ಹಾಗೂ ಗೌರವಿಸಲು ಸಭೆ ನಿರ್ಣಯಿಸಿತು’ ಎಂದು ವೈಷ್ಣವ್ ಹೇಳಿದ್ದಾರೆ.

‘ಭಾರತೀಯರಲ್ಲಿ ಸಂವಿಧಾನ ಕುರಿತು ಅಚಲ ನಂಬಿಕೆ ಇದ್ದು, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಲು ಸಂಕಲ್ಪ ಮಾಡಿದ್ದಾರೆ ಎಂಬ ಮಾತನ್ನು ಸಭೆಯು ಮತ್ತೊಮ್ಮೆ ದೃಢೀಕರಿಸಿತು’ ಎಂದು ಹೇಳಿದ್ದಾರೆ.

‘2025, ‘ಸಂವಿಧಾನ ಹತ್ಯಾ ದಿವಸ’ಕ್ಕೆ 50 ವರ್ಷ ತುಂಬಿರುವುದನ್ನು ಹೇಳುತ್ತದೆ. ತುರ್ತು ಪರಿಸ್ಥಿತಿಯು ದೇಶದ ಇತಿಹಾಸದಲ್ಲಿ ಮರೆಲಾಗದ ಅಧ್ಯಾಯ. ಭಾರತದ ಪ್ರಜಾಸತ್ತಾತ್ಮಕ ಚೇತನದ ಮೇಲೆ ದಾಳಿ ನಡೆಸಲಾಗಿತ್ತು, ಒಕ್ಕೂಟ ವ್ಯವಸ್ಥೆಯನ್ನು ದುರ್ಬಲ ಗೊಳಿಸಲಾಗಿತ್ತು, ಮೂಲಭೂತ ಹಕ್ಕುಗಳು, ಮಾನವ ಸ್ವಾತಂತ್ರ್ಯ ಹಾಗೂ ಘನತೆಯನ್ನು ಕೂಡ ಅಮಾನತಿನಲ್ಲಿಡಲಾಗಿತ್ತು’ ಎಂದು ನಿರ್ಣಯದಲ್ಲಿ ಹೇಳಲಾಗಿದೆ.

‘ಭಾರತವು ಪ್ರಜಾಪ್ರಭುತ್ವದ ತಾಯಿ. ಸಾಂವಿಧಾನಿಕ ಮೌಲ್ಯಗಳ ಸಂರಕ್ಷಣೆಗೆ ದೊಡ್ಡ ನಿದರ್ಶನವಾಗಿ ನಿಲ್ಲುತ್ತದೆ’ ಎಂದು ಸಭೆಯು ನಿರ್ಣಯ ಅಂಗೀಕರಿಸಿದೆ.

ಸಂಕಲ್ಪ ಮತ್ತಷ್ಟು ಗಟ್ಟಿಗೊಳಿಸಿತ್ತು: ಪ್ರಧಾನಿ ಮೋದಿ



‘ತುರ್ತು ಪರಿಸ್ಥಿತಿ ದಿನಗಳು ನನಗೆ ಸಾಕಷ್ಟು ಕಲಿಯುವ ಅವಕಾಶ ಒದಗಿಸಿದ್ದವು. ಪ್ರಜಾತಂತ್ರ ಮೌಲ್ಯಗಳನ್ನು ಸಂರಕ್ಷಿಸುವ ಕುರಿತ ನನ್ನ ಸಂಕಲ್ಪವನ್ನು ಅವು ಮತ್ತಷ್ಟು ಗಟ್ಟಿಗೊಳ್ಳುವಂತೆ ಮಾಡಿದವು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ತುರ್ತು ಪರಿಸ್ಥಿತಿ ದಿನಗಳ ಕುರಿತ ‘ದಿ ಎಮರ್ಜೆನ್ಸಿ ಡೈರೀಸ್– ಇಯರ್ಸ್ ದಟ್ ಪೋರ್ಜ್ಡ್ ಎ ಲೀಡರ್’ ಕೃತಿಯ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿ, ಮೋದಿ ಈ ಮಾತುಗಳನ್ನು ಹೇಳಿದ್ದಾರೆ.

ತುರ್ತು ಪರಿಸ್ಥಿತಿಯಲ್ಲಿ ಮೋದಿ ಅವರು ನಡೆಸಿದ ಹೋರಾಟಗಳನ್ನು ಕಟ್ಟಿಕೊಡುವ ಈ ಕೃತಿಯನ್ನು ಬ್ಲೂಕ್ರಾಫ್ಟ್ ಪ್ರಕಟಿಸಿದೆ. ತುರ್ತು ಪರಿಸ್ಥಿತಿ ಅವಧಿಯಲ್ಲಿ ತಾವು ಆರ್‌ಎಸ್‌ಎಸ್ ಪ್ರಚಾರಕರಾಗಿ ಕಾರ್ಯ ನಿರ್ವಹಿಸಿದ್ದುದನ್ನು ಕೂಡ ಅವರು ಈ ಕೃತಿಯಲ್ಲಿ ಸ್ಮರಿಸಿದ್ದಾರೆ.

‘ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ನೋಡಿದವರು ಅಥವಾ ಅಂದು ನೋವು ಅನುಭವಿಸಿರುವ ಕುಟುಂಬಗಳ ಸದಸ್ಯರು ತಮ್ಮ ಅನುಭವಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವಂತೆ ನಾನು ಕೋರುತ್ತೇನೆ. 1975ರಿಂದ 1977ರ ವರೆಗಿನ ಭಯಾನಕ ದಿನಗಳ ಕುರಿತು ಯುವಜನತೆಯಲ್ಲಿ ಇದರಿಂದ ಜಾಗೃತಿ ಮೂಡಿಸಲು ಸಾಧ್ಯವಾಗಲಿದೆ’ ಎಂದು ಮೋದಿ ಪ್ರತಿಪಾದಿಸಿದ್ದಾರೆ.

‘ತುರ್ತು ಪರಿಸ್ಥಿತಿ ದಿನಗಳ ಅನುಭವಗಳನ್ನು ಬ್ಲೂಕ್ರಾಫ್ಟ್ ಡಿಜಿಟಲ್ ಫೌಂಡೇಷನ್ ಒಟ್ಟುಗೂಡಿಸಿ ಪ್ರಕಟಿಸಿರುವುದಕ್ಕೆ ಸಂತಸವಾಗುತ್ತಿದೆ. ಈ ಕೃತಿಗೆ ಮುನ್ನುಡಿ ಬರೆದಿರುವ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರೇ, ಆಗ ತುರ್ತು ಪರಿಸ್ಥಿತಿ ವಿರೋಧಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು’ ಎಂದೂ ಮೋದಿ ಹೇಳಿದ್ದಾರೆ.



ತುರ್ತು ಪರಿಸ್ಥಿತಿ ಹೇರಿಕೆಯು ರಾಷ್ಟ್ರೀಯ ಅಗತ್ಯವೇನೂ ಆಗಿರಲಿಲ್ಲ. ಅದು ಕಾಂಗ್ರೆಸ್ ಪಕ್ಷ ಹಾಗೂ ಏಕೈಕ ವ್ಯಕ್ತಿಯ ಪ್ರಜಾಪ್ರಭುತ್ವ ವಿರೋಧಿ ಮನಸ್ಥಿತಿಯ ಪ್ರತಿಫಲನವಾಗಿತ್ತು. ಅಧಿಕಾರದಲ್ಲಿರುವವರು ಸರ್ವಾಧಿಕಾರಿಗಳಾದಲ್ಲಿ ಅವರನ್ನು ಜನರೇ ಕೆಳಗಿಳಿಸುತ್ತಾರೆ ಎಂಬುದನ್ನು ತುರ್ತು ಪರಿಸ್ಥಿತಿ ಪ್ರತಿಯೊಬ್ಬರನ್ನೂ ಜ್ಞಾಪಿಸುತ್ತದೆ. ಇದೇ ಕಾರಣಕ್ಕೆ ಮೋದಿ ನೇತೃತ್ವದ ಸರ್ಕಾರ ಈ ದಿನವನ್ನು ‘ಸಂವಿಧಾನ ಹತ್ಯಾ ದಿವಸ’ವನ್ನಾಗಿ ಆಚರಿಸುತ್ತಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ



‘ಸಂಘ ಪರಿವಾರ ನೇತೃತ್ವದ ಸರ್ಕಾರ’ವು ಸಂವಿಧಾನವನ್ನು ನಾಶಪಡಿಸಲು ಯತ್ನಿಸುತ್ತಿದ್ದು ದೇಶದಲ್ಲಿ ಸದ್ಯ ಅಘೋಷಿತ ತುರ್ತು ಪರಿಸ್ಥಿತಿ ಮನೆ ಮಾಡಿದೆ. ಆಗಿನ ಪ್ರಧಾನಿ ಇಂದಿರಾ ಗಾಂಧಿ ಹೇರಿದ್ದ ತುರ್ತು ಪರಿಸ್ಥಿತಿ ಭಾರತದ ಪ್ರಜಾಪ್ರಭುತ್ವದಲ್ಲಿನ ಕರಾಳ ಅಧ್ಯಾಯ

ಪಿಣರಾಯಿ ವಿಜಯನ್, ಕೇರಳ ಮುಖ್ಯಮಂತ್ರಿ



50 ವರ್ಷಗಳ ಹಿಂದೆ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದ ಕಾಂಗ್ರೆಸ್ ಪಕ್ಷ, ಈಗಲೂ ಸರ್ವಾಧಿಕಾರಿ ಮನಸ್ಥಿತಿಯನ್ನು ಹೊಂದಿದೆ. ಒಂದು ಕುಟುಂಬ ಮಾತ್ರ ದೇಶದ ಆಡಳಿತ ನಡೆಸುವ ಹಕ್ಕು ಹೊಂದಿದೆ ಎಂಬುದು ಕಾಂಗ್ರೆಸ್‌ನ ನಂಬಿಕೆಯಾಗಿದೆ

ಜೆ.ಪಿ.ನಡ್ಡಾ, ಬಿಜೆಪಿ ಅಧ್ಯಕ್ಷ



ದುಡಿಯುವ ವರ್ಗಗಳು ಹೋರಾಟದ ಮೂಲಕ ಪಡೆದಿದ್ದ ಪ್ರತಿಭಟಿಸುವ ಹಕ್ಕನ್ನು ತುರ್ತು ಪರಿಸ್ಥಿತಿ ಕಸಿದುಕೊಂಡಿತ್ತು. ಸಂಘಟಿತರಾಗುವ, ಮುಷ್ಕರ ಹೂಡುವಂತಹ ಮೂಲಭೂತ ಹಕ್ಕನ್ನು ಕೂಡ ತುರ್ತು ಪರಿಸ್ಥಿತಿ ತೊಡೆದುಹಾಕಿತ್ತು

ಬೃಂದಾ ಕಾರಟ್, ಸಿಪಿಎಂ ನಾಯಕಿ



ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಮರೆಮಾಚುವುದಕ್ಕಾಗಿ ಬಿಜೆಪಿಯು ‘ಸಂವಿಧಾನ ಹತ್ಯಾ ದಿವಸ’ ಎಂಬ ನಾಟಕವಾಡುತ್ತಿದೆ. ಕೇಂದ್ರ ಸರ್ಕಾರ ಸಹಿಷ್ಣುತೆ, ಭ್ರಾತೃತ್ವ, ಅಭಿವೃದ್ಧಿ ಹೊಂದುವ ಸ್ವಾತಂತ್ರ್ಯವನ್ನು ಅಳಿಸಿ ಹಾಕಿದ್ದು, ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯಲ್ಲಿ ವಿಪಕ್ಷ ನಾಯಕ



ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ಸಂವಿಧಾನದಲ್ಲಿರುವ ಅವಕಾಶಗಳಡಿಯೇ ತುರ್ತು ಪರಿಸ್ಥಿತಿಯನ್ನು ಹೇರಿದ್ದರು. ನಂತರ, ಸೂಕ್ತ ಸಮಯದಲ್ಲಿ ಹಿಂಪಡೆದಿದ್ದರು. ಇದು ಲೋಕಸಭೆಗೆ ಹೊಸದಾಗಿ ಚುನಾವಣೆಗಳನ್ನು ನಡೆಸಲು ದಾರಿ ಮಾಡಿಕೊಟ್ಟಿತ್ತು

ಸಂಜಯ ರಾವುತ್, ಶಿವಸೇನಾ(ಯುಬಿಟಿ) ರಾಜ್ಯಸಭಾ ಸದಸ್ಯ

ಬಂಧನ ಆದೇಶಗಳು.. ಅಪರೂಪದ ದಾಖಲೆಗಳ ಪ್ರದರ್ಶನ

ತುರ್ತು ಪರಿಸ್ಥಿತಿ ಜಾರಿಯಾಗಿದ್ದ ಸಂದರ್ಭದಲ್ಲಿ, ಅಟಲ್ ಬಿಹಾರಿ ವಾಜಪೇಯಿ, ಬಲರಾಜ್ ಮಧೋಕ್ ಮತ್ತಿತರ ಪ್ರಮುಖ ನಾಯಕರ ಬಂಧನಕ್ಕೆ ಹೊರಡಿಸಲಾಗಿದ್ದ ಆದೇಶಗಳ ಪ್ರತಿಗಳು ಸೇರಿದಂತೆ ಅನೇಕ ಅಪ್ರಕಟಿತ ದಾಖಲೆಗಳನ್ನು ದೆಹಲಿ ಸರ್ಕಾರ ಬುಧವಾರ ಪ್ರದರ್ಶನಕ್ಕಿಟಿತ್ತು.

ಆಗಿನ ಆಡಳಿತಾರೂಢ ಕಾಂಗ್ರೆಸ್ ಪಕ್ಷ, 1975ರ ಜೂನ್ 25ರಂದು ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಗೊಳಿಸಿತ್ತು. ತುರ್ತು ಪರಿಸ್ಥಿತಿಗೆ 50 ವರ್ಷ ತುಂಬಿದ ಪ್ರಯುಕ್ತ ದೆಹಲಿ ಸರ್ಕಾರ ಅಪರೂಪದ ದಾಖಲೆಗಳು, ಚಿತ್ರಗಳನ್ನು ಪ್ರದರ್ಶಿಸುತ್ತಿದೆ.

ಈ ವೇಳೆ ಮಾತನಾಡಿದ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ‘ತುರ್ತು ಪರಿಸ್ಥಿ ಹೇರುವ ಮೂಲಕ ಸಂವಿಧಾನದ ಹತ್ಯೆ ಮಾಡಿದವರೇ ಈಗ ಅದರ ಸಂರಕ್ಷಕರು ಎಂದು ಹೇಳಿಕೊಳ್ಳುತ್ತಿದ್ದಾರೆ’ ಎಂದು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

‘ಸಂವಿಧಾನವನ್ನು ಕೊಲೆ ಮಾಡಿದ ಇಂತಹ ಕರಾಳ ದಿನವೊಂದು ದೇಶದ ಇತಿಹಾಸದಲ್ಲಿ ಬೇರೆ ಇರಲಿಕ್ಕಿಲ್ಲ. ಈಗ ಅವರು (ರಾಹುಲ್ ಗಾಂಧಿ) ತಮ್ಮ ಜೇಬಿನಲ್ಲಿ ಸಂವಿಧಾನದ ಪ್ರತಿಯನ್ನು ಇಟ್ಟುಕೊಂಡು, ಪ್ರಜಾಪ್ರಭುತ್ವ ರಕ್ಷಣೆಗೆ ಕರೆ ಕೊಡುತ್ತಿದ್ದಾರೆ’ ಎಂದು ಹೇಳಿದರು.

ಬುದ್ಧಿ ಹೇಳಿದ್ದಕ್ಕೆ ತಾಯಿಯ ಕೊಲೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಯುವಕನೊಂದಿಗೆ ಸಂಬಂಧ ಮುಂದುವರಿಸದಂತೆ ಬುದ್ಧಿಮಾತು ಹೇಳಿದ್ದ ತಾಯಿಯನ್ನೇ ಕೊಲೆ ಮಾಡಿದ ಆರೋಪದಡಿ ಮೃತ ಮಹಿಳೆಯ ಮಗಳು ಮತ್ತು ಆಕೆಯ ಪ್ರಿಯಕರನನ್ನು ತೆಲಂಗಾಣದ ಬಾಲನಗರ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಜೀಡಿಮೆಟ್ಲಾದಲ್ಲಿ 39 ವರ್ಷದ ಅಂಜಲಿ ಎಂಬುವರ ಕೊಲೆ ನಡೆದಿತ್ತು. ತನಿಖೆ ಆರಂಭಿಸಿದ ಪೊಲೀಸರು ಸಿಸಿಟಿವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದಾಗ, 16 ವರ್ಷದ ಪುತ್ರಿಯೇ 19 ವರ್ಷದ ಶಿವ ಮತ್ತು ಆತನ ಸಹೋದರನ ಜತೆ ಸೇರಿ ಕೊಲೆ ಮಾಡಿರುವುದು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

10ನೇ ತರಗತಿ ಓದುತ್ತಿದ್ದ ಬಾಲಕಿಗೆ ಎಂಟು ತಿಂಗಳ ಹಿಂದೆ ಇನ್‌ಸ್ಟಾಗ್ರಾಮ್‌ನಲ್ಲಿ ನಲ್ಗೊಂಡದ ಶಿವ ಎಂಬಾತನ ಪರಿಚಯವಾಗಿ ಪ್ರೇಮಕ್ಕೆ ತಿರುಗಿದೆ. ಮಗಳಿಗೆ ಹೊಡೆದು ತಾಯಿ ಬುದ್ದಿವಾದ ಹೇಳಿದ್ದಾರೆ. ಆಗ ಮನೆ ತೊರೆದಿದ್ದ ಮಗಳು, ಶಿವನೊಂದಿಗೆ ತೆರಳಿದ್ದಳು.

2026ರಲ್ಲಿ ಚುನಾವಣೆ ನಡೆಯುವ 5 ರಾಜ್ಯಗಳಲ್ಲಿ ಕ್ರಮ: ಸಿಇಸಿ

‘ಮತದಾರರ ಪಟ್ಟಿ ಸಮಗ್ರ ಪರಿಶೀಲನೆ’

ನವದೆಹಲಿ (ಪಿಟಿಐ): ‘ಮುಂದಿನ ವರ್ಷ ಮೇ ಮತ್ತು ಜೂನ್ ಮಧ್ಯೆ ನಡೆಯಲಿರುವ ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ಚುನಾವಣೆಗೂ ಮುಂಚಿತವಾಗಿ ಈ ಐದು ರಾಜ್ಯಗಳ ಮತದಾರರ ಪಟ್ಟಿಯನ್ನು ಸಮಗ್ರವಾಗಿ ಪರಿಶೀಲಿಸುತ್ತೇವೆ’ ಎಂದು ಕೇಂದ್ರ ಚುನಾವಣಾ ಆಯೋಗ (ಸಿಇಸಿ) ಬುಧವಾರ ಹೇಳಿದೆ.



‘ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಬಿಹಾರ ಚುನಾವಣೆಯ ಬಳಿಕ ಈ ಕಾರ್ಯ ಆರಂಭಿಸುತ್ತೇವೆ. ಆಯೋಗದ ಬೂತ್ ಮಟ್ಟದ ಸಿಬ್ಬಂದಿಯು ಮನೆ ಮನೆಗೆ ತೆರಳಿ ಪರಿಶೀಲನೆ ನಡೆಸಲಿದ್ದಾರೆ. ಮತದಾರರ ಪಟ್ಟಿ ವಿಶ್ವಾಸಾರ್ಹವಾಗಿ ಇರುವಂತೆ ನೋಡಿಕೊಳ್ಳುವ ಸಾಂವಿಧಾನಿಕ ಹೊಣೆಗಾರಿಕೆ ನಮ್ಮ ಮೇಲಿದೆ. ಆದ್ದರಿಂದ ಪರಿಶೀಲನೆಗೆ ಮುಂದಾಗಿದ್ದೇವೆ’ ಎಂದಿದೆ.

‘ಬಿಹಾರದಲ್ಲಿ ಚುನಾವಣೆ ಇರುವುದರಿಂದ ಈ ರಾಜ್ಯದ ಮತದಾರರ ಪಟ್ಟಿಯನ್ನು ತಕ್ಷಣವೇ ಸಮಗ್ರವಾಗಿ ಪರಿಶೀಲನೆ ಮಾಡುತ್ತೇವೆ’ ಎಂದು ಆಯೋಗ ಹೇಳಿದೆ. 2003ರಲ್ಲಿ ಕೊನೆಯ ಬಾರಿಗೆ ಬಿಹಾರದಲ್ಲಿ ಮತದಾರರ ಪಟ್ಟಿಯನ್ನು ಸಮಗ್ರವಾಗಿ ಪರಿಶೀಲನೆಗೆ ಒಳಪಡಿಸಲಾಗಿತ್ತು.

‘ಅಕ್ರಮ ವಲಸಿಗರು ಮತದಾರರ ಪಟ್ಟಿಯಲ್ಲಿ ಸೇರಿಕೊಳ್ಳದಂತೆ ಕ್ರಮ ಕೈಗೊಳ್ಳಲಾಗುವುದು’ ಎಂದು ಆಯೋಗ ಹೇಳಿದೆ. ಬಿಜೆಪಿಗೆ ಸಹಕಾರ ನೀಡಲು ಚುನಾವಣಾ ಆಯೋಗವು ಮತದಾರರ ಪಟ್ಟಿಯಲ್ಲಿ ಅಕ್ರಮ ಎಸಗುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿರುವ ಹೊತ್ತಿನಲ್ಲಿಯೇ ಆಯೋಗವು ಈ ನಿರ್ಧಾರ ಕೈಗೊಂಡಿದೆ.

ವಾರದಲ್ಲಿ ಮಾಹಿತಿ ನೀಡಿ: ‘ಮಹಾರಾಷ್ಟ್ರ ಹಾಗೂ ಹರಿಯಾಣದ ಮತದಾರರ ಪಟ್ಟಿ ಮತ್ತು ಮತದಾನದ ದಿನದ ವಿಡಿಯೊ ದೃಶ್ಯಾವಳಿಗಳನ್ನು ಒಂದು ವಾರದ ಒಳಗೆ ನೀಡಿ. ಮತದಾರರ ಪಟ್ಟಿಯ ಮಾಹಿತಿಯು ಕಂಪ್ಯೂಟರ್ ಸ್ವಯಂ ಚಾಲಿತವಾಗಿ ಪರಿಶೀಲಿಸಬಹುದಾದ ಡಿಜಿಟಲ್ ಸ್ವರೂಪದಲ್ಲಿ ಇರಲಿ’ ಎಂದು ಕೇಂದ್ರ ಚುನಾವಣಾ ಆಯೋಗವನ್ನು ಕಾಂಗ್ರೆಸ್ ಆಗ್ರಹಿಸಿದೆ.

‘ಪ್ರಮಾಣ ಪತ್ರ ನೀಡಿ’

ಮತದಾರರ ಪಟ್ಟಿಗೆ ಹೊಸದಾಗಿ ಸೇರ್ಪಡೆಗೊಳ್ಳುವವರು ಮತ್ತು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವಲಸೆ ಹೋದವರು ತಮ್ಮ ಹುಟ್ಟಿದ ದಿನಾಂಕ ಇರುವ ಪ್ರಮಾಣ ಪತ್ರವನ್ನು ನೀಡಬೇಕು ಎಂದು ಆಯೋಗ ಹೇಳಿದೆ. ‘1987ರ ಜುಲೈ 1 ಮತ್ತು 2004ರ ಡಿಸೆಂಬರ್ 2ರ ಮಧ್ಯೆ ಜನಿಸಿರುವವರು ತಮ್ಮ ಹುಟ್ಟಿದ ದಿನಾಂಕ ಮತ್ತು ಸ್ಥಳ ನಮೂದಾಗಿರುವ ದಾಖಲೆಯ ಸಮೇತ ಪ್ರಮಾಣ ಪತ್ರವನ್ನು ನೀಡಬೇಕು’ ಎಂದಿದೆ.

ಯಾಕಾಗಿ ಪರಿಶೀಲನೆ?: ನಗರೀಕರಣ, ನಿರಂತರ ವಲಸೆ, ಹೊಸ ಮತದಾರರ ಸಂಖ್ಯೆಯಲ್ಲಿ ಹೆಚ್ಚಳ, ಮೃತಪಟ್ಟ ಮತದಾರರ ಮಾಹಿತಿಯನ್ನು ಆಯೋಗಕ್ಕೆ ನೀಡದೇ ಇರುವುದು, ಬೇರೆ ರಾಜ್ಯದ ಮತದಾರರ ಹೆಸರು ಇನ್ನೊಂದು ರಾಜ್ಯದ ಮತದಾರರ ಪಟ್ಟಿಯಲ್ಲಿ ಇರುವುದು– ಈ ಎಲ್ಲ ಕಾರಣಗಳಿಂದಾಗಿ ಮತದಾರರ ಪಟ್ಟಿಯನ್ನು ಸಮಗ್ರವಾಗಿ ಪರಿಶೀಲಿಸಬೇಕಾಗಿದೆ ಎಂದು ಆಯೋಗ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ರಘುವಂಶಿ ಕೊಲೆ: ಪಿಸ್ತೂಲಿದ್ದ ಬ್ಯಾಗ್ ಪತ್ತೆ



ಇಂದೋರ್ (ಪಿಟಿಐ): ಉದ್ಯಮಿ ರಾಜಾ ರಘುವಂಶಿ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಮೇಘಾಲಯ ಪೊಲೀಸರು ನಗರದ ರಾಜಕಾಲುವೆಯಲ್ಲಿ ಕೃತ್ಯಕ್ಕೆ ಬಳಸಿದ್ದರು ಎನ್ನಲಾದ ವಸ್ತುಗಳಿದ್ದ ಕೈಚೀಲವನ್ನು ಬುಧವಾರ ಪತ್ತೆಮಾಡಿ ವಶಕ್ಕೆ ಪಡೆದಿದ್ದಾರೆ.

ಆರೋಪಿ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಶಿಲೋಮ್ ಜೇಮ್ಸ್ ಸಮೇತ ಪಲಾಸಿಯಾದಲ್ಲಿರುವ ರಾಜಕಾಲುವೆಗೆ ಇಳಿದ ಪೊಲೀಸರ ತಂಡವು ಪ್ಲಾಸ್ಟಿಕ್ ಕೈಚೀಲದಲ್ಲಿ ಕಟ್ಟಿ ಎಸೆದಿದ್ದ ದೇಶಿ ನಿರ್ಮಿತ ಪಿಸ್ತೂಲು ಸೇರಿ ಕೆಲ ವಸ್ತುಗಳನ್ನು ಪತ್ತೆ ಮಾಡಿದರು. ಪ್ರಮುಖ ಆರೋಪಿ, ರಘುವಂಶಿ ಪತ್ನಿ ಸೋನಮ್ ಉಳಿದುಕೊಂಡಿದ್ದ ಫ್ಲ್ಯಾಟ್‌ನಲ್ಲಿ ಇವು ನಾಪತ್ತೆಯಾಗಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ.

ದೆಹಲಿ: ಕಟ್ಟಡಕ್ಕೆ ಬೆಂಕಿ, ನಾಲ್ವರು ಸಾವು



ನವದೆಹಲಿ (ಪಿಟಿಐ): ಐದು ಅಂತಸ್ತಿನ ಕಟ್ಟಡದಲ್ಲಿ ಬೆಂಕಿ ಹೊತ್ತಿಕೊಂಡು ನಾಲ್ವರು ಸಾವಿಗೀಡಾಗಿದ್ದು, ಮೂವರು ಗಾಯಗೊಂಡಿರುವ ಘಟನೆ ದೆಹಲಿಯ ರೋಹಿಣಿ ನಗರದಲ್ಲಿ ನಡೆದಿದೆ.

ಮಂಗಳವಾರ ಸಂಜೆ 7.30ರ ವೇಳೆಗೆ ಬೆಂಕಿ ಹೊತ್ತಿಕೊಂಡಿತು. 16 ಅಗ್ನಿಶಾಮಕ ವಾಹನಗಳು ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದವು. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದು, ಅವಘಡಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

14 ವರ್ಷಗಳ ಹಿಂದಿನ ಅಪಘಾತ: ₹41.71 ಲಕ್ಷ ಪರಿಹಾರ



ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆಯಲ್ಲಿ 14 ವರ್ಷಗಳ ಹಿಂದೆ ರಸ್ತೆ ಅಪಘಾತಕ್ಕೊಳಗಾಗಿದ್ದ ವ್ಯಕ್ತಿಯೊಬ್ಬರಿಗೆ ₹41.71 ಲಕ್ಷ ಪರಿಹಾರ ನೀಡುವಂತೆ ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿ (ಎಮ್‌ಎಸಿಟಿ) ಆದೇಶಿಸಿದೆ.

ಅಪಘಾತಕ್ಕೆ ಕಾರಣವಾದ ಟ್ರಕ್‌ನ ಮಾಲೀಕ ಮತ್ತು ವಿಮಾ ಕಂಪನಿಯು ಒಟ್ಟಾಗಿ ಪರಿಹಾರ ಮೊತ್ತವನ್ನು ನೀಡಬೇಕು ಎಂದು ಎಮ್‌ಎಸಿಟಿ ಸದಸ್ಯ ಆರ್.ವಿ. ಮೋಹಿತೆ ಅವರು ಮಂಗಳವಾರ ಆದೇಶಿಸಿದ್ದಾರೆ. ಮಹಾರಾಷ್ಟ್ರ ಠಾಣೆಯ ಭಿವಂಡಿ ನಿವಾಸಿ ಮೋನೇಶ್ ಅಲಿಯಾಸ್ ಮನೀಷ್ ವಿಜಯ್ ಸುತಾರ್ ಅವರಿಗೆ 12 ವರ್ಷ ವಯಸ್ಸಿನಲ್ಲಿರುವಾಗ ಅಪಘಾತ ಸಂಭವಿಸಿತ್ತು. 2011 ಮೇ 8ರಂದು ಮೋನೇಶ್ ತಮ್ಮ ತಂದೆಯೊಂದಿಗೆ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದಾಗ ಟ್ರಕ್‌ವೊಂದು ಹಿಂಬದಿಯಿಂದ ಡಿಕ್ಕಿ ಹೊಡೆದಿತ್ತು. ಮೋನೇಶ್ ತಂದೆ ಸ್ಥಳದಲ್ಲೇ ಮೃತಪಟ್ಟಿದ್ದರು.

296 ಭಾರತೀಯರು ವಾಪಸ್

ನವದೆಹಲಿ (ಪಿಟಿಐ): ಸಂಘರ್ಷ ಪೀಡಿತ ಇರಾನ್‌ನಿಂದ ಭಾರತೀಯರನ್ನು ಸುರಕ್ಷಿತವಾಗಿ ಕರೆತರುವ ಕಾರ್ಯಾಚರಣೆ ಮುಂದುವರಿದಿದ್ದು, ಬುಧವಾರ 296 ಮಂದಿ ಇಲ್ಲಿಗೆ ಬಂದಿಳಿದರು.

ಭಾರತೀಯರ ಜತೆ ನೇಪಾಳದ ನಾಲ್ವರು ಪ್ರಜೆಗಳನ್ನೂ ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರತವು ‘ಆಪರೇಷನ್ ಸಿಂಧು’ ಅಡಿಯಲ್ಲಿ ಇರಾನ್‌ನಿಂದ ಇದುವರೆಗೆ ಒಟ್ಟು 3,154 ಪ್ರಜೆಗಳನ್ನು ಕರೆತಂದಿದೆ.

‘ಇರಾನ್‌ನ ಮಶಾದ್‌ನಿಂದ ಹೊರಟ ವಿಶೇಷ ವಿಮಾನ ಬುಧವಾರ ಸಂಜೆ 4.30ಕ್ಕೆ ನವದೆಹಲಿಗೆ ತಲುಪಿತು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಪ್ರಧಾನಿ ಹೊಗಳಿದ ಶಶಿ ತರೂರ್ ವಿರುದ್ಧ ಮಲ್ಲಿಕಾರ್ಜುನ ಖರ್ಗೆ ಟೀಕೆ

‘ಕೆಲವರಿಗೆ ಮೋದಿ ಮೊದಲು, ದೇಶ ನಂತರ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಕಾಂಗ್ರೆಸ್ ನಾಯಕತ್ವ ಮತ್ತು ಪಕ್ಷದ ಮುಖಂಡ ಶಶಿ ತರೂರ್ ನಡುವಿನ ‘ಮುಸುಕಿನ ಗುದ್ದಾಟ’ ಬುಧವಾರ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶಂಸಿಸಿದ್ದಕ್ಕೆ ತರೂರ್ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಿಡಿಕಾರಿದ್ದಾರೆ. ಅದಕ್ಕೆ ತರೂರ್ ಕೂಡಾ ತಿರುಗೇಟು ನೀಡಿದ್ದಾರೆ.

ತಮ್ಮ ಪಕ್ಷವು ‘ದೇಶ ಮೊದಲು’ ಎಂಬ ಮಂತ್ರದ ಮೇಲೆ ನಂಬಿಕೆಯಿಟ್ಟಿದ್ದರೆ, ಕೆಲವರು ‘ಮೋದಿ ಮೊದಲು ಮತ್ತು ದೇಶ ನಂತರ’ ಎಂದು ನಂಬಿದ್ದಾರೆ ಎಂದು ಖರ್ಗೆ ಬುಧವಾರ ಹೇಳಿದ್ದಾರೆ.

> **ಬರೆಯಲು ಬಯಸುವವರು ತಮಗೆ ಇಷ್ಟವಾದದ್ದನ್ನು ಬರೆಯಲಿ. ಅದರಿಂದ ನಮಗೆ ಯಾವುದೇ ತೊಂದರೆ ಇಲ್ಲ. ಇತರರ ಬಗ್ಗೆ ಗಮನಹರಿಸುವ ಅಗತ್ಯವಿಲ್ಲ**
>
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

‘ನನಗೆ ಚೆನ್ನಾಗಿ ಇಂಗ್ಲಿಷ್ ಓದಲು ಬರುವುದಿಲ್ಲ. ಅವರ (ತರೂರ್) ಭಾಷಾ ಪ್ರೌಢಿಮೆ ಅಪಾರವಾದುದು. ಅದೇ ಕಾರಣಕ್ಕೆ ನಾವು ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ಮಾಡಿದ್ದೇವೆ’ ಎಂದು ಹೇಳಿದ್ದಾರೆ. ತರೂರ್ ಅವರು ತಮ್ಮ ಲೇಖನದಲ್ಲಿ ಪ್ರಧಾನಿ ಮೋದಿ ಅವರನ್ನು ಹೊಗಳಿರುವುದರ ಬಗ್ಗೆ ಕೇಳಿದಾಗ ಖರ್ಗೆ ಈ ರೀತಿ ಉತ್ತರಿಸಿದ್ದಾರೆ. ‘ಆಪರೇಷನ್ ಸಿಂಧೂರದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಒಗ್ಗಟ್ಟಾಗಿ ಸೇನೆಯ ಜತೆ ಇದ್ದವು ಎಂಬುದನ್ನು ಹೇಳಲು ನಾನು ಬಯಸುತ್ತೇನೆ. ನಮಗೆ (ಕಾಂಗ್ರೆಸ್‌ನವರಿಗೆ) ದೇಶವು ಎಲ್ಲಕ್ಕಿಂತಲೂ ಮುಖ್ಯವಾಗಿದ್ದು, ಇಂತಹ ಸಂಕಷ್ಟದ ಸಂದರ್ಭದಲ್ಲಿ ಸರ್ಕಾರದ ಜತೆ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ ಎಂದಿದ್ದೇವೆ. ‘ದೇಶ ಮೊದಲು, ಪಕ್ಷ ನಂತರ’ ಎಂದೂ ಹೇಳಿದ್ದೇವೆ. ಆದರೆ ಕೆಲವರು ‘ಮೋದಿ ಮೊದಲು, ದೇಶ ನಂತರ’ ಎಂದು ಹೇಳುತ್ತಾರೆ. ಅದಕ್ಕೆ ನಾವೇನು ಮಾಡಬೇಕು?’ ಎಂದಿದ್ದಾರೆ.

‘ಮೋದಿ ಅವರು ದಕ್ಷ ಆಡಳಿತ, ಕ್ರಿಯಾಶೀಲತೆ ಮತ್ತು ಇಚ್ಛಾಶಕ್ತಿಯಿಂದ ಜಾಗತಿಕ ವೇದಿಕೆಯಲ್ಲಿ ಭಾರತದ ‘ಪ್ರಮುಖ ಆಸ್ತಿ’ಯಾಗಿದ್ದಾರೆ ಎಂದು ತರೂರ್ ತಮ್ಮ ಲೇಖನದಲ್ಲಿ ಬರೆದಿದ್ದರು. ‘ದಿ ಹಿಂದೂ’ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಈ ಲೇಖನವನ್ನು ಪ್ರಧಾನಿ ಕಚೇರಿ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿತ್ತು.

‘ರೆಕ್ಕೆಗಳು ನಿಮ್ಮವು’



ಶಶಿ ತರೂರ್

ತರೂರ್ ಅವರು ‘ಎಕ್ಸ್’ನಲ್ಲಿ ಗೂಢಾರ್ಥದ ಪೋಸ್ಟ್‌ವೊಂದನ್ನು ಹಾಕುವ ಮೂಲಕ ಖರ್ಗೆ ಹೇಳಿಕೆಗೆ ತಿರುಗೇಟು ನೀಡಿದ್ದಾರೆ. ಹಕ್ಕಿಯ ಚಿತ್ರವೊಂದನ್ನು ಪೋಸ್ಟ್ ಮಾಡಿರುವ ತರೂರ್ ಅದರ ಕೆಳಗೆ, ‘ಹಾರಾಡಲು ಅನುಮತಿ ಕೇಳಬೇಡಿ. ರೆಕ್ಕೆಗಳು ನಿಮ್ಮವು ಮತ್ತು ಆಕಾಶವು ಯಾರಿಗೂ ಸೇರಿದ್ದಲ್ಲ’ ಎಂದು ಬರೆದಿದ್ದಾರೆ.

‘ಕೈ’, ‘ಕಮಲ’ದೊಳಗೆ ಅಸಮಾಧಾನ

ಸುನಿಲ್ ಪರ ತಟಸ್ಥ–ಭಿನ್ನರ ಲಾಬಿ

ಒಂದನೇ ಪುಟದಿಂದ...
‘ಎರಡು ಬಣಗಳು ನಿತ್ಯ ಕಾದಾಟ ನಡೆಸುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಪಕ್ಷದ ಅಧ್ಯಕ್ಷನಾಗಿ ಸಂಘಟನೆ ಮಾಡಲು ಸಾಧ್ಯವೇ. ನಾನಾಗಿ ಯಾವುದೇ ಹುದ್ದೆ ಕೇಳುವುದಿಲ್ಲ. ವರಿಷ್ಠರ ತೀರ್ಮಾನಕ್ಕೆ ತಲೆಬಾಗುತ್ತೇನೆ’ ಎಂದು ಸುನಿಲ್ ಅವರು ತಟಸ್ಥ ಗುಂಪಿನ ನಾಯಕರಿಗೆ ತಿಳಿಸಿದ್ದಾರೆ.

ವಿಜಯೇಂದ್ರ ವಾದವೇನು?

‘ರಾಜ್ಯ ಕಾಂಗ್ರೆಸ್ ಸರ್ಕಾರದ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ವಿರುದ್ಧ ದೊಡ್ಡ ಮಟ್ಟದ ಹೋರಾಟ ನಡೆಸಿದ್ದೇವೆ. ಫಲವಾಗಿ ಸಚಿವ ಸ್ಥಾನಕ್ಕೆ ಬಿ.ನಾಗೇಂದ್ರ ರಾಜೀನಾಮೆ ಕೊಟ್ಟರು. ಮುಡಾ ಹಗರಣದ ವಿರುದ್ಧ ಮೈಸೂರು ಚಲೋ ನಡೆಸಿದ್ದೆವು. ಪರಿಣಾಮವಾಗಿ, ಸಿದ್ದರಾಮಯ್ಯ ಕುಟುಂಬದವರು 14 ನಿವೇಶನಗಳನ್ನು ಮರಳಿಸಿದರು. ಈ ಎರಡೂ ಪ್ರಕರಣಗಳ ತನಿಖೆಯನ್ನು ಕೇಂದ್ರ ತನಿಖಾ ಸಂಸ್ಥೆಗಳು ನಡೆಸುತ್ತಿವೆ. ಈ ವಿಷಯಗಳನ್ನು ಸಮರ್ಥ ರೀತಿಯಲ್ಲಿ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಸಾಧ್ಯ’ ಎಂದು ವಿಜಯೇಂದ್ರ ಪ್ರತಿಪಾದಿಸಿದ್ದಾರೆ.

‘ಕೆಲವು ನಾಯಕರು ಪಕ್ಷ ಸಂಘಟನೆ ಮಾಡುತ್ತಿಲ್ಲ, ನನ್ನನ್ನು ಟೀಕಿಸುವುದು ಅವರಿಗೆ ಅಭ್ಯಾಸವಾಗಿದೆ. ಆ ಮೂಲಕವೇ ನಾಯಕರಾಗಲು ಹೊರಟಿದ್ದಾರೆ. ಒಂದೂವರೆ ವರ್ಷಗಳಲ್ಲಿ ನಾನು ಮಾಡಿರುವ ಕೆಲಸಕ್ಕೆ 10ರಲ್ಲಿ 8 ಅಂಕ ಕೊಡುತ್ತೇನೆ. ಅಷ್ಟೊಂದು ಕೆಲಸ ಮಾಡಿದ್ದೇನೆ’ ಎಂದು ಅಪ್ತರಲ್ಲಿ ಹೇಳಿಕೊಂಡಿದ್ದಾರೆ.

ಸೋಮಣ್ಣ ಅಭಿಪ್ರಾಯವೇನು?

‘ಪಕ್ಷದ ವರಿಷ್ಠರು ವಹಿಸಿದ ಕೆಲಸವನ್ನು ಚಾಚೂ ತಪ್ಪದೇ ನಿಭಾಯಿಸಿದ್ದೇನೆ. ವಿಧಾನಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರಿಗೆ ಪ್ರಬಲ ಸ್ಪರ್ಧೆ ನೀಡಿದ್ದೇನೆ. ಕೇಂದ್ರ ಸಚಿವನಾಗಿ ಖಾತೆಯನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ. ವಿಜಯೇಂದ್ರ ಅವರನ್ನು ಬದಲಿಸುವುದಾದರೆ ನನಗೇ ಅವಕಾಶ ನೀಡಬೇಕು’ ಎಂದು ಸೋಮಣ್ಣ ಅವರು ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

‘ನಾನು ಲಿಂಗಾಯತ ಸಮುದಾಯದ ಪ್ರಬಲ ನಾಯಕ. ಜತೆಗೆ, ಜೆಡಿಎಸ್ ಜತೆಗೆ ಸಮನ್ವಯದಿಂದ ಹೋರಾಟ ನಡೆಸಿ ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ಹೊಣೆ ನನ್ನದು’ ಎಂದು ಹೇಳಿದ್ದಾರೆ.

ರಾಜ್ಯ ನಾಯಕರಿಂದ ಅಭಿಪ್ರಾಯ ಸಂಗ್ರಹ

ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆಗೆ ಪ್ರಕ್ರಿಯೆ ನಡೆಸುವ ಮುನ್ನ ರಾಜ್ಯ ನಾಯಕರ ಅಭಿಪ್ರಾಯ ಸಂಗ್ರಹಕ್ಕೆ ಪಕ್ಷದ ವರಿಷ್ಠರು ಚಾಲನೆ ನೀಡಿದ್ದಾರೆ.


ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಹಾಗೂ ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಬುಧವಾರ ಭೇಟಿ ಮಾಡಿ ಚರ್ಚಿಸಿದರು. ಈ ವೇಳೆ, ರಾಜ್ಯದಲ್ಲಿನ ಬೆಳವಣಿಗೆಗಳ ಬಗ್ಗೆ ನಡ್ಡಾ ಮಾಹಿತಿ ಪಡೆದರು. ರಾಜ್ಯ ಘಟಕದಲ್ಲಿನ ಗೊಂದಲವನ್ನು ಶೀಘ್ರ ಪರಿಹರಿಸಬೇಕು. ಶೀಘ್ರ ಚುನಾವಣೆ ಪ್ರಕ್ರಿಯೆ ನಡೆಸಿ ಸಮರ್ಥರನ್ನು ನೇಮಕ ಮಾಡಬೇಕು ಎಂದು ಉಭಯ ನಾಯಕರು ಗಮನಕ್ಕೆ ತಂದರು.

ಸುರ್ಜೇವಾಲಾ ವಿರುದ್ಧ ‘ಕೈ’ ಶಾಸಕರ ಮುನಿಸು

ಒಂದನೇ ಪುಟದಿಂದ...
‘ಕರ್ನಾಟಕ ವಿಧಾನಸಭಾ ಚುನಾವಣೆಯ ಬಳಿಕ ಸುರ್ಜೇವಾಲಾ ಅವರಿಗೆ ಮಧ್ಯ ಪ್ರದೇಶದ ಹೊಣೆ ವಹಿಸಲಾಯಿತು. ಸುಮಾರು ಆರು ತಿಂಗಳು ಆ ರಾಜ್ಯದ ಬಗ್ಗೆ ಗಮನ ಹರಿಸಿದರು. ಲೋಕಸಭಾ ಚುನಾವಣೆಯ ಬಳಿಕ ಸ್ವಂತ ರಾಜ್ಯ ಹರಿಯಾಣದ ಕಡೆಗೆ ದೃಷ್ಟಿ ನೆಟ್ಟರು. ಈಗ ಎಲ್ಲ ಚುನಾವಣೆ ಮುಗಿದಿದೆ. ರಾಜ್ಯಕ್ಕೆ ಬನ್ನಿ ಎಂದರೂ ಅವರು ಬರುತ್ತಿಲ್ಲ’ ಎಂದು ಹಿರಿಯ ಸಚಿವರೊಬ್ಬರು ಹೇಳಿದರು.

‘ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಸುರ್ಜೇವಾಲಾ ಅವರು ಬೆಂಗಳೂರಿನಲ್ಲೇ ಮನೆ ಮಾಡಿದ್ದರು. ಆಗ ರಾಜ್ಯ ನಾಯಕರು ಹಾಗೂ ಮುಖಂಡರ ಜತೆಗೆ ಸಕ್ರಿಯವಾಗಿ ಹೋರಾಟದಲ್ಲಿ ಭಾಗಿಯಾಗಿದ್ದರು. ಪಕ್ಷ ಅಧಿಕಾರಕ್ಕೆ ಬಂದ ಬಳಿಕ ರಾಜ್ಯಕ್ಕೆ ಭೇಟಿ ನೀಡಿದ್ದು ಬೆರಳೆಣಿಕೆಯ ಸಂದರ್ಭಗಳಲ್ಲಿ. ಶಾಸಕರ ಅಹವಾಲು ಕೇಳಿಸಿಕೊಂಡಿದ್ದು ಒಂದೆರಡು ಬಾರಿ ಅಷ್ಟೇ. ರಾಜ್ಯ ಸರ್ಕಾರ ಹಾಗೂ ಪಕ್ಷದ ನಡುವೆ ಸಮನ್ವಯವೇ ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯ ಉಸ್ತುವಾರಿಯವರು ಪಕ್ಷ ಹಾಗೂ ಸರ್ಕಾರಕ್ಕೆ ಸೇತುವೆಯಾಗ ಬೇಕಿತ್ತು. ಆ ಕೆಲಸ ಆಗಿಲ್ಲ. ಪಕ್ಷದಲ್ಲಿನ ಈಗಿನ ಬಿಕ್ಕಟ್ಟಿಗೆ ಸುರ್ಜೇವಾಲಾ ಧೋರಣೆಯೂ ಒಂದು ಕಾರಣ’ ಎಂದು ಅವರು ವಿಶ್ಲೇಷಿಸಿದರು.

57ನೇ ವಯಸ್ಸಿಗೆ ಪ್ರಾಧ್ಯಾಪಕರಾದ ಸಚಿವ


ಅಶೋಕ್ ಚೌಧರಿ

ಪಟ್ನಾ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಆಪ್ತ ಸಚಿವ ಅಶೋಕ್ ಚೌಧರಿ ಅವರನ್ನು ರಾಜ್ಯ ವಿಶ್ವವಿದ್ಯಾಲಯ ಸೇವಾ ಆಯೋಗವು ಸಹಾಯಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಿದೆ.

ಗ್ರಾಮೀಣಾಭಿವೃದ್ಧಿ ಸಚಿವ ಚೌಧರಿ(57) ಅವರು ಐದು ವರ್ಷಗಳ ಹಿಂದೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. ಪರಿಶಿಷ್ಟ ಜಾತಿ ಮೀಸಲಾತಿಯಡಿ ಅವರು ಆಯ್ಕೆಯಾಗಿದ್ದಾರೆ.

‘ಎರಡು ದಶಕಗಳ ರಾಜಕೀಯ ಜೀವನವನ್ನು ತ್ಯಜಿಸುವುದಿಲ್ಲ. ಎರಡನ್ನೂ ನಿಭಾಯಿಸುತ್ತೇನೆ. ಸಹಾಯಕ ಪ್ರಾಧ್ಯಾಪಕ ವೃತ್ತಿಗೆ ವೇತನ ಪಡೆಯುವುದಿಲ್ಲ’ ಎಂದು ಚೌಧರಿ ಹೇಳಿದ್ದಾರೆ.

‘ರಾಜಕೀಯದ ಜೊತೆಗೆ ನಾನು ಶಿಕ್ಷಣ ಕ್ಷೇತ್ರದಲ್ಲೂ ಇದ್ದೆ. ಪ್ರಮುಖ ನಿಯತಕಾಲಿಕೆಗಳಲ್ಲಿ ನನ್ನ ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ. ನಾನು ಪಿಎಚ್‌.ಡಿ ಮಾಡಿದ್ದೇನೆ. ಕೆಲ ವರ್ಷಗಳ ಹಿಂದೆ ಸಂಶೋಧನಾ ಪ್ರಬಂಧ ವಾಚನಕ್ಕಾಗಿ ನನಗೆ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಆಹ್ವಾನ ಬಂದಿತ್ತು’ ಎಂದು ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ‘ಯುವಕರಿಗೆ ಉದ್ಯೋಗ ಸಿಗುತ್ತಿಲ್ಲ, ಆದರೆ ಅಶೋಕ್ ಚೌಧರಿ ಅವರು 58ನೇ ವಯಸ್ಸಿಗೆ ಪ್ರಾಧ್ಯಾಪಕರಾಗಿದ್ದಾರೆ. ಆರ್‌ಎಸ್‌ಎಸ್ ಕೋಟಾದಡಿ ಮೀಸಲಾತಿಗೆ ಧನ್ಯವಾದಗಳು’ ಎಂದು ಟೀಕಿಸಿದೆ.

‘ರಾಜಸ್ಥಾನ ಸಿ.ಎಂ ಪದಚ್ಯುತಿಗೆ ಪಿತೂರಿ’

ಜೋಧಪುರ (ಪಿಟಿಐ): ‘ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮ ಅವರ ಪದಚ್ಯುತಿಗೆ ಪಿತೂರಿ ನಡೆದಿದೆ’ ಎಂದು ಕಾಂಗ್ರೆಸ್ ನಾಯಕ ಅಶೋಕ್ ಗೆಹಲೋತ್ ಬುಧವಾರ ಹೇಳಿದ್ದಾರೆ.


‘ಬಿಜೆಪಿಯ ಕೆಲವು ಪದಾಧಿಕಾರಿಗಳು ಮುಖ್ಯಮಂತ್ರಿಯ ಪದಚ್ಯುತಿಗಾಗಿಯೇ ನವದೆಹಲಿಯಿಂದ ರಾಜಸ್ಥಾನಕ್ಕೆ ಬಂದಿದ್ದಾರೆ’ ಎಂದಿದ್ದಾರೆ.

ವಿನಿಮಯ ದರ | ಡಾಲರ್ 86.08 | ಪೌಂಡ್ 117.18 | ಯುರೊ 99.87 | ಯೆನ್ (100ಕ್ಕೆ) 59

ಅಡಿಕೆ ಧಾರಣೆ

ಶಿವಮೊಗ್ಗ		ಕಾರ್ಕಳ			
ಬೆಟ್ಟೆ	50399-59999	ಹೊಸತು	25000-48500	ಚಿಪ್ಪು	24089-28999
ಗೊರಬಲು	17099-31899	ಹಳತು	30000-52500	ಕೋಕ	7509-19029
ರಾಶಿ	48291-57599	ಕುಮಟಾ		ಫ್ಯಾಕ್ಟರಿ	6099-24129
ಸರಕು	61299-98996	ಚಾಲಿ	39019-42698	ಹೊಸಚಾಲಿ	34010-42769

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,044
ಇಂದಿನ ಅಂತ್ಯ: 25,244
ದಿನದ ಗರಿಷ್ಠ: 25,266
200

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100ಕ್ಕೆ ₹605; 12ಕ್ಕೆ ₹80
ಮೈಸೂರು: 100ಕ್ಕೆ ₹610

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹205-571
ದ್ವಿತಳಿ (ಬಿ.ವಿ) ₹385-663

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹196
ಆರ್‌ಎಸ್‌ಎಸ್-5 ₹190
ಗುಡ್ ಲಾಟ್ ₹179

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹26,400
ಎಸಿ ₹14,420
ಆರ್‌ಪಿ ₹18,500
ಆರ್‌ಸಿ ₹9,855

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1390 (1400)
ಸೋಯಾ (ರಿಫೈನ್ಡ್) ₹1190 (1200)
ಸೂರ್ಯಕಾಂತಿ (ರಿಫೈನ್ಡ್) ₹1350 (1340)
ಪಾಮೋಲಿನ್ ₹1190 (1190)

ಮುಂಬೈ ಧಾರಣೆ (ಶೇಂಗಾ)
25-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	7900-8000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1400 (1410)
ಒಂದು ವಾರದ ಡೆಲಿವರಿ	1395 (1405)
ಪಾಮ್ ವಾರದ ಡೆಲಿವರಿ	1188 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1265)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	96,600 (96,650)
ಬೆಳ್ಳಿ ಕೆ.ಜಿಗೆ	1,05,250 (1,05,550)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹26200-26200
ಬೆಂಗಳೂರು ₹20000-24000

ಅಂಬಾನಿ, ಅದಾನಿ ಪಾಲುದಾರಿಕೆ

ಪೆಟ್ರೋಲ್, ಡೀಸೆಲ್, ಸಿಎನ್‌ಜಿ ಮಾರಾಟ ಕ್ಷೇತ್ರದಲ್ಲಿ ಸಹಭಾಗಿತ್ವ



ಮುಕೇಶ್ ಅಂಬಾನಿ



ಗೌತಮ್ ಅದಾನಿ

ನವದೆಹಲಿ (ಪಿಟಿಐ): ದೇಶದ ಶ್ರೀಮಂತ ಉದ್ಯಮಿಗಳಾದ ಮುಕೇಶ್ ಅಂಬಾನಿ ಮತ್ತು ಗೌತಮ್ ಅದಾನಿ ಅವರು ಆಟೊಮೊಬೈಲ್ ಇಂಧನ ಮಾರಾಟ ಕ್ಷೇತ್ರದಲ್ಲಿ ಪಾಲುದಾರಿಕೆ ಮಾಡಿಕೊಂಡಿದ್ದಾರೆ. ಇದು ಈ ಇಬ್ಬರ ನಡುವಿನ ಎರಡನೆಯ ಪಾಲುದಾರಿಕೆ.

ಅಂಬಾನಿ ಅವರು ಬ್ರಿಟನ್ನಿನ ಬಿಪಿ ಸಹಭಾಗಿತ್ವದಲ್ಲಿ ನಡೆಸುತ್ತಿರುವ ಜಿಯೊ–ಬಿಪಿ ಕಂಪನಿಯು, ಅದಾನಿ ಟೋಟಲ್ ಗ್ಯಾಸ್ ಲಿಮಿಟೆಡ್ (ಎಟಿಜಿಎಲ್) ಮಾಲೀಕತ್ವದ ಸಿಎನ್‌ಜಿ ಬಂಕ್‌ಗಳಲ್ಲಿ ಗ್ರಾಹಕರಿಗೆ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಮಾಡಲಿದೆ.

ಎಟಿಜಿಎಲ್ ಕಂಪನಿಯು ಆಯ್ದ ಜಿಯೊ–ಬಿಪಿ ಬಂಕ್‌ಗಳಲ್ಲಿ ಸಿಎನ್‌ಜಿ ಮಾರಾಟ ಮಾಡಲಿದೆ. ಎಟಿಜಿಎಲ್ ಕಂಪನಿಯು ಅದಾನಿ ಸಮೂಹ ಮತ್ತು ಫ್ರಾನ್ಸ್‌ನ ಟೋಟಲ್ ಎನರ್ಜೀಸ್ ಸಹಭಾಗಿತ್ವದಲ್ಲಿ ನಡೆಯುತ್ತಿದೆ.

ಜಿಯೊ–ಬಿಪಿ ಈಗ ದೇಶದಲ್ಲಿ 1,972 ಬಂಕ್‌ಗಳನ್ನು ಹೊಂದಿದೆ. ಎಟಿಜಿಎಲ್ ಕಂಪನಿಯು ವಿವಿಧೆಡೆ ಒಟ್ಟು 650 ಸಿಎನ್‌ಜಿ ಸ್ಟೇಷನ್‌ಗಳನ್ನು ನಡೆಸುತ್ತಿದೆ.

ಮಧ್ಯಪ್ರದೇಶದ ವಿದ್ಯುತ್ ಯೋಜನೆಯೊಂದರಲ್ಲಿ ಅಂಬಾನಿ ಮತ್ತು ಅದಾನಿ ಸಹಭಾಗಿತ್ವದ ಒಪ್ಪಂದವನ್ನು ಈ ವರ್ಷದ ಮಾರ್ಚ್‌ನಲ್ಲಿ ಮಾಡಿಕೊಂಡಿದ್ದರು.

ಅಂಬಾನಿ ಮತ್ತು ಅದಾನಿ ಅವರ ನಡುವಿನ ಪಾಲುದಾರಿಕೆಯು ಆಟೊಮೊಬೈಲ್ ಇಂಧನ ಮತ್ತು ನೈಸರ್ಗಿಕ ಅನಿಲ ಮಾರುಕಟ್ಟೆಯಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ಪ್ರಾಬಲ್ಯಕ್ಕೆ ಎದುರಾಗಿರುವ ಸವಾಲು ಎಂದು ವಿಶ್ಲೇಷಿಸಲಾಗಿದೆ. ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ, ಹಿಂದುಸ್ತಾನ್ ಪೆಟ್ರೋಲಿಯಂ ದೇಶದ ಪೆಟ್ರೋಲ್ ಬಂಕ್‌ಗಳ ಪೈಕಿ ಶೇ 90ರಷ್ಟರ ಮೇಲೆ ನಿಯಂತ್ರಣ ಹೊಂದಿವೆ.

ಅಲ್ಲದೆ, ನೈಸರ್ಗಿಕ ಅನಿಲವನ್ನು ಕೊಳವೆ ಮೂಲಕ ಮನೆಗಳಿಗೆ ಪೂರೈಸುವ ವಹಿವಾಟಿನಲ್ಲಿ ಕೂಡ ಸರ್ಕಾರಿ ಸ್ವಾಮ್ಯದ ಕಂಪನಿಗಳೇ ಪ್ರಾಬಲ್ಯ ಹೊಂದಿವೆ. ಎಟಿಜಿಎಲ್ ಕಂಪನಿಯು ನೈಸರ್ಗಿಕ ಅನಿಲವನ್ನು ಮನೆಗಳಿಗೆ, ಕೈಗಾರಿಕೆಗಳಿಗೆ ಮತ್ತು ವಾಹನಗಳಿಗೆ ಪೂರೈಕೆ ಮಾಡುವ ವಹಿವಾಟಿನಲ್ಲಿ ತೊಡಗಿಸಿಕೊಂಡಿದೆ.

‘ಜಿಯೊ ಅತಿದೊಡ್ಡ ಸವಾಲು’

ನವದೆಹಲಿ (ಪಿಟಿಐ): ಜಿಯೊ ದೂರಸಂಪರ್ಕ ಸೇವಾ ಕಂಪನಿಯನ್ನು 2016ರಲ್ಲಿ ಆರಂಭಿಸಿದ್ದುದು ತಮ್ಮ ಜೀವನದಲ್ಲಿ ತೆಗೆದುಕೊಂಡ ಅತಿದೊಡ್ಡ ಸವಾಲು ಎಂದು ರಿಲಯನ್ಸ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ.

ಅತ್ಯಾಧುನಿಕ ಡಿಜಿಟಲ್ ತಂತ್ರಜ್ಞಾನಕ್ಕೆ ಭಾರತದ ಸಿದ್ಧವಾಗಿಲ್ಲದ ಕಾರಣ, ರಿಲಯನ್ಸ್ ಕಂಪನಿಯು ತನ್ನ ಕೋಟ್ಯಂತರ ರೂಪಾಯಿಗಳನ್ನು 4ಜಿ ಮೊಬೈಲ್ ನೆಟ್ವರ್ಕ್ ಆರಂಭಿಸಲು ವಿನಿಯೋಗಿಸುವುದು ಹಣಕಾಸಿನ ದೃಷ್ಟಿಯಿಂದ ಸೂಕ್ತವಲ್ಲ ಎಂದು ವಿಶ್ಲೇಷಕರು ಭಾವಿಸಿದ್ದರು ಎಂದು ‘ಮಕಿನ್ಸೀ ಆ್ಯಂಡ್ ಕೊ’ಗೆ ನೀಡಿರುವ ಸಂದರ್ಶನದಲ್ಲಿ ಅಂಬಾನಿ ಅವರು ಹೇಳಿದ್ದಾರೆ.

‘ಆದರೆ, ನಾವು ಹೆಚ್ಚು ಹಣ ಸಂಪಾದಿಸಲಿಕ್ಕಿಲ್ಲ. ಹಾಗಾದರೆ ಪರವಾಗಿಲ್ಲ. ಏಕೆಂದರೆ, ಇದು ನಮ್ಮದೇ ಹಣ. ಈ ಹೂಡಿಕೆಯು ನಾವು ಭಾರತದಲ್ಲಿ ಮಾಡುವ ಅತ್ಯುತ್ತಮ ಪರೋಪಕಾರ ಆಗುತ್ತದೆ. ನಾವು ಭಾರತವನ್ನು ಡಿಜಿಟಲೀಕರಣ ಮಾಡಿದಂತಾಗುತ್ತದೆ, ಆ ಮೂಲಕ ದೇಶವನ್ನು ಬದಲಾಯಿಸಿದಂತೆ ಆಗುತ್ತದೆ ಎಂದು ನಾನು ನಮ್ಮ ಆಡಳಿತ ಮಂಡಳಿಗೆ ಆಗ ಹೇಳಿದ್ದೆ’ ಎಂದು ಅಂಬಾನಿ ತಿಳಿಸಿದ್ದಾರೆ.

ಭಾರತದಲ್ಲಿ ಜಿಯೊ ಸೇವೆ ಶುರುವಾಗುವ ಮೊದಲು ಮೊಬೈಲ್ ಇಂಟರ್ನೆಟ್ ಶುಲ್ಕ ದುಬಾರಿ ಆಗಿತ್ತು. ಜಿಯೊ ಸೇವೆ ಆರಂಭವಾದ ನಂತರದಲ್ಲಿ ದೂರಸಂಪರ್ಕ ವಲಯದಲ್ಲಿ ದರಸಮರ ಶುರುವಾಯಿತು, ಇಂಟರ್ನೆಟ್ ಸೇವೆಗಳ ಶುಲ್ಕ ಗಣನೀಯವಾಗಿ ಕಡಿಮೆ ಆಯಿತು.

‘...2027ರಲ್ಲಿ ರಿಲಯನ್ಸ್ ಕಂಪನಿಯು ಸ್ವರ್ಣ ಮಹೋತ್ಸವ ಆಚರಿಸಲಿದೆ. ರಿಲಯನ್ಸ್ ಕಂಪನಿಯು ಭಾರತ ಮತ್ತು ಮನುಕುಲಕ್ಕೆ 100 ವರ್ಷಗಳ ನಂತರವೂ ಸೇವೆ ಒದಗಿಸಬೇಕು ಎಂಬುದು ನನ್ನ ಬಯಕೆ. ಅದು ಸಾಧ್ಯವಾಗುತ್ತದೆ ಎಂಬುದು ನನ್ನ ವಿಶ್ವಾಸ’ ಎಂದು ಅವರು ಹೇಳಿದ್ದಾರೆ.

‘ಮಾವು: ಎಂಐಎಸ್ ಕ್ವಿಂಟಲ್‌ಗೆ ₹1,616’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾವು ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ಬೆಳೆಗಾರರ ನೆರವಿಗೆ ಧಾವಿಸಬೇಕೆಂಬ ರಾಜ್ಯ ಸರ್ಕಾರದ ಮನವಿಗೆ ಸ್ಪಂದಿಸಿರುವ ಕೇಂದ್ರ ಸರ್ಕಾರ, ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ (ಎಂಐಎಸ್) ಪ್ರತಿ ಕ್ವಿಂಟಲ್‌ಗೆ ₹1,616 ಬೆಲೆ ನಿಗದಿಪಡಿಸಿದೆ. ಗುರುವಾರ ಅಥವಾ ಶುಕ್ರವಾರದಿಂದ ಖರೀದಿ ಪ್ರಕ್ರಿಯೆ ಆರಂಭವಾಗಲಿದೆ’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಈ ಯೋಜನೆಯಡಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯಲ್ಲಿ ಒಂದು ತಿಂಗಳು ಖರೀದಿ ಪ್ರಕ್ರಿಯೆ ನಡೆಯಲಿದೆ. ಒಬ್ಬ ಬೆಳೆಗಾರರಿಂದ ಪ್ರತಿ ಎಕರೆಗೆ 20 ಕ್ವಿಂಟಲ್‌ನಂತೆ ಎರಡು ಹೆಕ್ಟೇರ್ ಮಾವು ಇಲ್ಲವೇ ಗರಿಷ್ಠ 100 ಕ್ವಿಂಟಲ್ ಮಾವು ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಬೆಳೆಗಾರರಿಗೆ ₹40 ಸಾವಿರವರೆಗೆ ನೆರವು ಸಿಗುವ ನಿರೀಕ್ಷೆ ಇದೆ. ಬೆಲೆ ವ್ಯತ್ಯಾಸ ಪಾವತಿ ಯೋಜನೆಯಡಿ (ಪಿಡಿಪಿಎಸ್) ಕೇಂದ್ರ ಹಾಗೂ ರಾಜ್ಯ ಸರ್ಕಾರ ಶೇ 50:50ರ ಅನುಪಾತದಲ್ಲಿ ಈ ವ್ಯತ್ಯಾಸ ದರವನ್ನು ಭರಿಸಲಿವೆ’ ಎಂದರು.

‘2.50 ಲಕ್ಷ ಟನ್ ಮಾವು ಖರೀದಿಗೆ ಒಟ್ಟು ₹101 ಕೋಟಿ ಭರಿಸಬೇಕಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರ ತಲಾ ₹50 ಕೋಟಿ ಹೊಂದಿಸಲಿವೆ. ಈ ಕುರಿತು ಆದೇಶ ಹೊರಡಿಸಲಾಗಿದೆ’ ಎಂದರು.

‘ಸಹಕಾರ, ಎಪಿಎಂಸಿ, ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಖರೀದಿ ಪ್ರಕ್ರಿಯೆ ನಡೆಯಲಿದೆ. 2024-25 ಸಾಲಿಗೆ ಬೆಳೆ ಸಮೀಕ್ಷೆಯಲ್ಲಿ ರೈತರು ಎಫ್ಐಡಿ ಮೂಲಕ ಮಾವು ಬೆಳೆದಿರುವ ಬಗ್ಗೆ ನೋಂದಣಿ ಮಾಡಿಕೊಂಡಿರುವುದು ಕಡ್ಡಾಯ. ಆ ಬೆಳೆಗಾರರಿಗಷ್ಟೇ ಸೌಲಭ್ಯ ಸಿಗಲಿದೆ’ ಎಂದೂ ತಿಳಿಸಿದರು.

‘ಘೋಷಿತ ಪ್ರದೇಶದ ಎಪಿಎಂಸಿ ಮಾರುಕಟ್ಟೆ, ಉಪ ಮಾರುಕಟ್ಟೆ, ನೇರ ಖರೀದಿ ಕೇಂದ್ರ ಹಾಗೂ ಸಂಸ್ಕರಣಾ ಘಟಕಗಳಲ್ಲಿ ರೈತರ ನೋಂದಣಿಗೆ ಅವಕಾಶ ಕಲ್ಪಿಸಲಾಗುವುದು. ತಂತ್ರಾಂಶ ಕೂಡ ಸಿದ್ಧವಾಗಿದ್ದು, ರೈತರು ಆಧಾರ್ ಹಾಗೂ ಎಫ್ಐಡಿ ವಿವರ ನೀಡಿದರೆ ತಕ್ಷಣವೇ ನಿರ್ದಿಷ್ಟ ಸರ್ವೆ ಸಂಖ್ಯೆಯಲ್ಲಿನ ಜಮೀನಿನಲ್ಲಿ ಬೆಳೆದಿರುವ ಮಾವಿನ ವಿವರ ಲಭ್ಯವಾಗಲಿದೆ. ರೈತರು ನೋಂದಣಿ ರಸೀದಿ, ವರ್ತಕರಿಗೆ ಮಾರಾಟ ಮಾಡಿದ ರಸೀದಿ, ವೇ ಬ್ರಿಡ್ಜ್ ರಸೀದಿಯನ್ನು ಖರೀದಿ ಅಧಿಕಾರಿಗೆ ನೀಡುವುದು ಕಡ್ಡಾಯ. ಅರ್ಹ ಬೆಳೆಗಾರರಿಗೆ ವ್ಯತ್ಯಾಸ ಮೊತ್ತ ಡಿಬಿಟಿ ಮೂಲಕ ರವಾನೆ ಆಗಲಿದೆ’ ಎಂದರು.

‘ಮಾರುಕಟ್ಟೆ ದರ ಹೆಚ್ಚಿದರೆ ಖರೀದಿ ಸ್ಥಗಿತ’

‘ಸದ್ಯ ತೋತಾಪುರಿ ಮಾವಿನ ಮಾರುಕಟ್ಟೆಯಲ್ಲಿ ಕ್ವಿಂಟಾಲ್‌ಗೆ ₹500ರಿಂದ ₹600ವರೆಗೆ ಮಾರಾಟವಾಗುತ್ತಿದ್ದು, ಕೇಂದ್ರ ಸರ್ಕಾರ ಗರಿಷ್ಠ ₹1,616 ನಿಗದಿಪಡಿಸಿದೆ. ಮಾರುಕಟ್ಟೆಯಲ್ಲಿ ದರ ₹1,616ಗಿಂತ ಹೆಚ್ಚಾದರೆ ಖರೀದಿ ಸ್ಥಗಿತವಾಗಲಿದೆ’ ಎಂದು ಚಲುವರಾಯಸ್ವಾಮಿ ತಿಳಿಸಿದರು. ‘ಎಂಐಎಸ್ ಹಾಗೂ ಸದ್ಯದ ಮಾರುಕಟ್ಟೆ ಧಾರಣೆಯು ಶೇ 25ರ ಮಿತಿಗೆ ಒಳಪಟ್ಟಿರಬೇಕೆಂಬ ನಿಯಮ ವಿಧಿಸಲಾಗಿದೆ. ಮಾವಿಗೆ ಮೂಲ ಬೆಲೆ ₹1,200 ನಿಗದಿಪಡಿಸಲಾಗಿದೆ. ಕೇಂದ್ರ ಸರ್ಕಾರವು ಮಾರುಕಟ್ಟೆ ಮಧ್ಯಪ್ರವೇಶದ ಮೂಲಕ ₹416 ವ್ಯತ್ಯಾಸ ಮೊತ್ತನ್ನು ರೈತರಿಗೆ ಪಾವತಿಸಲಿದೆ. ಆ ಮೊತ್ತ ದಲ್ಲಿ ಅರ್ಧದಷ್ಟನ್ನು ರಾಜ್ಯ ಸರ್ಕಾರ ಭರಿಸಲಿದೆ’ ಎಂದರು.

‘2.50 ಲಕ್ಷ ಟನ್ ಮಾವು ಖರೀದಿ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅಗತ್ಯಬಿದ್ದರೆ ಮತ್ತೆ ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆದು ನೆರವು ಪಡೆಯಲು ಪ್ರಯತ್ನಿಸಲಾಗುವುದು’ ಎಂದೂ ತಿಳಿಸಿದರು.

‘ಶಾಸಕರು ಜನರ ಬಳಿ ಹೇಗೆ ಹೋಗುತ್ತಾರೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕಾರಕ್ಕೆ ಬಂದು ಎರಡು ವರ್ಷಗಳಾದರೂ ಅನುದಾನ ಇಲ್ಲ, ಕ್ಷೇತ್ರಗಳ ಅಭಿವೃದ್ಧಿ ಆಗಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಆಡಳಿತ ಪಕ್ಷದ ಶಾಸಕರೇ ಆರೋಪ ಮಾಡುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಜನರ ಬಳಿಗೆ ಅವರು ಹೇಗೆ ಹೋಗುತ್ತಾರೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಹಣ ಇಲ್ಲ ಎಂದು ಗೃಹ ಸಚಿವ ಪರಮೇಶ್ವರ ಅವರು ತಮಾಷೆಗಾದರೂ ಸತ್ಯ ಹೇಳಿದ್ದಾರೆ’ ಎಂದರು.

‘ಪ್ರತಿಯೊಂದು ಕೆಲಸಕ್ಕೂ ಹಣ ನೀಡಬೇಕಿದೆ. ಜನರು ದುಡಿದ ಹಣ ಭ್ರಷ್ಟಾಚಾರದ ಪಾಲಾಗುತ್ತಿದೆ. ಅಬಕಾರಿ, ಲೋಕೋಪಯೋಗಿ, ವಿದ್ಯುತ್ ಗುತ್ತಿಗೆದಾರರು ಪ್ರತಿಭಟನೆ ಮಾಡಿದರೂ, ಅವರ ಸಮಸ್ಯೆಗಳು ಬಗೆಹರಿಯಲಿಲ್ಲ. ವಿರೋಧ ಪಕ್ಷದಲ್ಲಿದ್ದಾಗ ಕಾಂಗ್ರೆಸ್‌ನವರು ಭ್ರಷ್ಟಾಚಾರದ ವಿರುದ್ಧ ದೊಡ್ಡ ಹಂಗಾಮ ಮಾಡಿದರು. ಈಗ ಇಡೀ ಸರ್ಕಾರವೇ ಭ್ರಷ್ಟಾಚಾರದಲ್ಲಿ ಮುಳುಗಿದೆ’ ಎಂದು ಬೊಮ್ಮಾಯಿ ಆರೋಪಿಸಿದರು.

> ರಾಜ್ಯ ಸರ್ಕಾರದ ವಿರುದ್ಧ ಆಯಾ ಪ್ರದೇಶಗಳ ಸಮಸ್ಯೆ ಇಟ್ಟುಕೊಂಡು ಬಿಜೆಪಿ ಹೋರಾಟ ಮಾಡಲಿದೆ. ಯಡಿಯೂರಪ್ಪ ಅವರ ಪ್ರವಾಸದಿಂದ ಪಕ್ಷ ಮತ್ತೆ ಅಧಿಕಾರಕ್ಕೆ ಬರಲಿದೆ
>
> **ಬಸವರಾಜ ಬೊಮ್ಮಾಯಿ,** ಸಂಸದ

‘ಕಾನೂನು ಸಚಿವ ಎಚ್.ಕೆ. ಪಾಟೀಲರು ಸಂಪುಟದ ಭಾಗವಾಗಿಲ್ಲವೇ? ಅಕ್ರಮ ಗಣಿ ತನಿಖೆ ಕುರಿತು ಮುಖ್ಯಮಂತ್ರಿ ಭೇಟಿ ಮಾಡಿ ಚರ್ಚಿಸದೆ ಪತ್ರ ಏಕೆ ಬರೆದರು. ಅವರೇನು ವಿರೋಧ ಪಕ್ಷದ ನಾಯಕರೇ? ಅವರ ಮಾತನ್ನು ಸಿದ್ದರಾಮಯ್ಯ ಕೇಳುವುದಿಲ್ಲವೇ? ಹಿಂದೆ ಬಿಜೆಪಿ ಅಧಿಕಾರದಲ್ಲಿ ಜಿಂದಾಲ್‌ಗೆ ಜಮೀನು ನೀಡಬಾರದು ಎಂದು ಇದೇ ಪಾಟೀಲರು ಪತ್ರ ಬರೆದಿದ್ದರು. ಅಧಿಕಾರಕ್ಕೆ ಬಂದ ಮೇಲೆ ಜಿಂದಾಲ್‌ಗೆ ಜಮೀನು ನೀಡಿದರು. ಇದು ಕಾಂಗ್ರೆಸ್‌ನ ದ್ವಿಮುಖ ನೀತಿ’ ಎಂದು ಟೀಕಾ ಪ್ರಹಾರ ಮಾಡಿದರು.

ಶಾಸಕರ ಹೇಳಿಕೆ: ವೇಣು ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರನ್ನು ಬುಧವಾರ ಇಲ್ಲಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ನಡೆಸಲು ಪಟ್ಟಿಯನ್ನು ಹೈಕಮಾಂಡ್‌ಗೆ ಕಳುಹಿಸಲಾಗಿದೆ. ಈ ಪಟ್ಟಿಗೆ ಅನುಮೋದನೆ ನೀಡಬೇಕು ಎಂದು ಸಿದ್ದರಾಮಯ್ಯ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ವೇಣುಗೋಪಾಲ್, ‘ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿದೇಶ ಪ್ರವಾಸದಲ್ಲಿದ್ದು, ಅವರು ಮರಳಿದ ಬಳಿಕ ಸಮಾಲೋಚಿಸಿ ಪಟ್ಟಿ ಆಖೈರು ಮಾಡಲಾಗುವುದು’ ಎಂದು ಭರವಸೆ ನೀಡಿದರು. ರಾಹುಲ್ ಅವರನ್ನು ಭೇಟಿ ಮಾಡಲು 10 ದಿನಗಳೊಳಗೆ ಬರುವುದಾಗಿ ಸಿದ್ದರಾಮಯ್ಯ ತಿಳಿಸಿದರು.

ರಾಜ್ಯ ಸರ್ಕಾರದ ಸಚಿವರ ವಿರುದ್ಧ ಆರೋಪ, ಸಚಿವರ ಹಾಗೂ ಶಾಸಕರ ಹೇಳಿಕೆಗಳ ಬಗ್ಗೆ ವೇಣುಗೋಪಾಲ್ ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಅಭಿನಂದನ್ ಸೆರೆ ಹಿಡಿದಿದ್ದ ಪಾಕ್ ಸೇನಾಧಿಕಾರಿ ಬಲಿ

ಇಸ್ಲಾಮಾಬಾದ್ (ಪಿಟಿಐ): 2019ರಲ್ಲಿ ಭಾರತೀಯ ವಾಯುಪಡೆಯ ಪೈಲಟ್ ಅಭಿನಂದನ್ ವರ್ಧಮಾನ್ ಅವರನ್ನು ಸೆರೆ ಹಿಡಿದಿದ್ದ ಪಾಕಿಸ್ತಾನ ಸೇನೆಯ ವಿಶೇಷ ತಂಡದ ಅಧಿಕಾರಿ ತಾಲಿಬಾನ್ ಉಗ್ರರ ಜತೆಗಿನ ಹೋರಾಟದಲ್ಲಿ ಮೃತಪಟ್ಟಿದ್ದಾರೆ ಎಂದು ಪಾಕಿಸ್ತಾನದ ಸೇನೆ ತಿಳಿಸಿದೆ.

ಅಫ್ಗಾನಿಸ್ತಾನ ಗಡಿಗೆ ಹೊಂದಿಕೊಂಡಿರುವ ದಕ್ಷಿಣ ವಜೀರಿಸ್ತಾನದ ಸರಾರೊಘಾ ಪ್ರದೇಶದಲ್ಲಿ ತೆಹ್ರೀಕ್ ಎ ತಾಲಿಬಾನ್ ಪಾಕಿಸ್ತಾನ್ ಸಂಘಟನೆಯ ಉಗ್ರರ ಜತೆಗಿನ ಹೋರಾಟದಲ್ಲಿ 37 ವರ್ಷದ ಮೇಜರ್ ಸೈಯದ್ ಮೊಯಿಜ್ ಅಬ್ಬಾಸ್ ಶಾ ಮೃತಪಟ್ಟಿದ್ದಾರೆ ಎಂದು ಸೇನೆಯ ಮಾಧ್ಯಮ ವಿಭಾಗ ಹೇಳಿದೆ. ಅಭಿನಂದನ್ ಅವರನ್ನು ಸೆರೆಹಿಡಿದಿದ್ದ ಸೇನಾ ತಂಡದಲ್ಲಿ ಅಬ್ಬಾಸ್ ಶಾ ಇದ್ದರು ಎಂದು ಪಾಕಿಸ್ತಾನ ಸೇನೆ ಹೇಳಿಕೊಂಡಿದೆ.

ಅಮೆರಿಕದ ರಕ್ಷಣಾ ಇಲಾಖೆಯ ಗುಪ್ತಚರ ವರದಿ ಸೋರಿಕೆ

‘ಇರಾನ್ ಅಣು ಘಟಕಕ್ಕೆ ಹಾನಿಯಾಗಿಲ್ಲ’

ಜೆರುಸಲೇಂ (ಎಎಫ್‌ಪಿ/ರಾಯಿಟರ್ಸ್): ‘ಅಮೆರಿಕದ ದಾಳಿಯಿಂದ ಇರಾನ್‌ನ ಅಣು ಘಟಕಗಳಿಗೆ ಯಾವುದೇ ಹಾನಿಯಾಗಿಲ್ಲ. ಘಟಕಗಳಿಗೆ ಪ್ರವೇಶ ಕಲ್ಪಿಸುವ ಜಾಗಕ್ಕೆ ಹಾನಿಯಾಗಿದೆಯಷ್ಟೆ. ಪರಮಾಣು ಯೋಜನೆಯ ಪ್ರಗತಿಯಲ್ಲಿ ಇರಾನ್‌ಅನ್ನು ಕೆಲವೇ ತಿಂಗಳು ಹಿಂದಕ್ಕೆ ತಳ್ಳಿದ್ದೇವೆ’ ಎಂಬ ಉಲ್ಲೇಖವಿರುವ ಅಮೆರಿಕದ ರಕ್ಷಣಾ ಇಲಾಖೆಯ ಗುಪ್ತಚರ ವರದಿ ಬುಧವಾರ ಸೋರಿಕೆಯಾಗಿದೆ.

ವರದಿ ಕುರಿತು ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ವರದಿಯು ಇನ್ನೂ ಪೂರ್ಣಗೊಂಡಿಲ್ಲ. ಈ ವರದಿಯೇ ಅಂತಿಮವಲ್ಲ. ನಮ್ಮ ದಾಳಿಯಿಂದ ಇರಾನ್‌ನ ಪರಮಾಣು ಯೋಜನೆಯ ಪ್ರಗತಿಯನ್ನು ಹಲವು ದಶಕಗಳ ಹಿಂದಕ್ಕೆ ಕಳುಹಿಸಿದ್ದೇವೆ. ನಮ್ಮ ದಾಳಿಯು ಅವರ ಅಣು ಘಟಕಗಳನ್ನು ಸಂಪೂರ್ಣವಾಗಿ ನಾಶ ಮಾಡಿದೆ’ ಎಂದಿದ್ದಾರೆ.

ಇಸ್ರೇಲ್ ಕೂಡ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ‘ಇರಾನ್‌ನ ಅಣು ಘಟಕಗಳಿಗೆ ಎಷ್ಟು ಪ್ರಮಾಣದ ಹಾನಿಯಾಗಿದೆ ಎಂಬುದನ್ನು ಈಗಲೇ ಅಂದಾಜು ಮಾಡಲಾಗದು. ನಾವು ಅವರ ಅಣು ಯೋಜನೆಗೆ ತೀವ್ರ ಹಾನಿಯುಂಟು ಮಾಡಿದ್ದೇವೆ. ಅವರ ಯೋಜನೆಯ ಪ್ರಗತಿಯನ್ನು ಕೆಲವು ವರ್ಷಗಳ ಹಿಂದಕ್ಕೆ ತಳ್ಳಿದ್ದೇವೆ ಎಂಬುದನ್ನಂತೂ ಹೇಳಬಹುದು’ ಎಂದಿದೆ.

ಗುಪ್ತಚರ ಸಂಸ್ಥೆಯೊಂದಿಗೆ ನಿಕಟ ಸಂಪರ್ಕ ಹೊಂದಿರುವ ಮೂಲಗಳನ್ನು ಆಧರಿಸಿ ಅಮೆರಿಕ ಮಾಧ್ಯಮಗಳು ವರದಿಯ ಭಾಗಗಳನ್ನು ಪ್ರಕಟಿಸಿವೆ. ಟ್ರಂಪ್ ಅವರು ನೆದರ್ಲೆಂಡ್ಸ್‌ನ ದಿ ಹೇಗ್‌ನಲ್ಲಿ ನ್ಯಾಟೊ ಶೃಂಗಸಭೆಯಲ್ಲಿ ಭಾಗಿಯಾಗಿದ್ದಾರೆ. ಈ ವೇಳೆ, ವರದಿಯ ಕುರಿತು ಕೇಳಿದ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

ದಿನದ ಬೆಳವಣಿಗೆ

- ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಗೆ (ಐಎಇಎ) ನೀಡುವ ಸಹಕಾರವನ್ನು ರದ್ದು ಮಾಡಬೇಕು ಎನ್ನುವ ಬಗ್ಗೆ ಇರಾನ್‌ನ ಸಂಸದರು ಸಂಸತ್‌ನಲ್ಲಿ ಬುಧವಾರ ಮತಚಲಾಯಿಸಿದ್ದಾರೆ.
- ಕದನ ವಿರಾಮಕ್ಕೆ ಇರಾನ್ ಅನ್ನು ಒಪ್ಪಿಸುವಂತೆ ಅಮೆರಿಕವು ಫ್ರಾನ್ಸ್‌ಗೆ ಮನವಿ ಮಾಡಿತ್ತು ಎಂದು ಫ್ರಾನ್ಸ್‌ನ ರಾಯಭಾರಿ ಮೂಲಗಳು ಹೇಳಿವೆ. ‘ಅಮೆರಿಕವು ಕದನ ವಿರಾಮ ಬಯಸುತ್ತಿದೆ ಎಂಬುದನ್ನು ಇರಾನ್‌ಗೆ ತಿಳಿಸುವಂತೆ ನಮಗೆ ಕೇಳಿಕೊಂಡರು. ನಾವು ಕೂಡ ಇರಾನ್‌ನೊಂದಿಗೆ ಮಾತುಕತೆ ನಡೆಸಿದೆವು’ ಎಂದಿವೆ
- ಇಸ್ರೇಲ್ ಪರವಾಗಿ ಬೇಹುಗಾರಿಕೆ ನಡೆಸಿದ ಮೂವರನ್ನು ಇರಾನ್ ಬುಧವಾರ ಗಲ್ಲಿಗೇರಿಸಿದೆ. ಬೇಹುಗಾರಿಕೆ ವಿಚಾರವಾಗಿಯೇ ಜೂನ್ 16ರಿಂದ ಬುಧವಾರದವರೆಗೆ ಒಟ್ಟು ಆರು ಮಂದಿಯನ್ನು ಇರಾನ್ ಗಲ್ಲಿಗೇರಿಸಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮುಳ್ಳೂರು ಪ್ರಕಾಶ್, ಮೈಸೂರು

ಪ್ರಶ್ನೆ: ನಾನು ಖಾಸಗಿ ವಿಮಾ ಕಂಪನಿಯೊಂದರಲ್ಲಿ ಕೌಟುಂಬಿಕ ಆರೋಗ್ಯ ವಿಮೆ ಹೊಂದಿದ್ದೇನೆ. ನನ್ನ ಹಾಗೂ ಪತ್ನಿಯ ಹೆಸರನ್ನು ವಿಮಾ ಯೋಜನೆಯಲ್ಲಿ ಸೇರಿಸಲಾಗಿದೆ. ಕಂಪನಿಯವರು ಪ್ರತಿಯೊಬ್ಬರಿಗೂ ₹5 ಲಕ್ಷದ ವಿಮೆ ಇದೆ ಎಂದು ತಿಳಿಸಿದ್ದಾರೆ. ಕಳೆದ ವರ್ಷ ನನ್ನ ಪಾಲಿಸಿಗೆ ₹33,653 ಕಂತು ಇತ್ತು. ಈ ವರ್ಷ ನನಗೆ 61 ವರ್ಷ ವಯಸ್ಸಾಗಿರುವುದರಿಂದ, ಕಂಪನಿಯವರು ₹48,002 ಕಂತು ಪಾವತಿಸಲು ತಿಳಿಸಿದ್ದಾರೆ. ಒಂದೇ ಬಾರಿಗೆ ಮೊತ್ತ ಹೆಚ್ಚಾಗಿದೆ. ಇದು ಏಕೆ ಮತ್ತು ಇಂತಹ ಹೆಚ್ಚಳಕ್ಕೆ ವಿಮಾ ನಿಯಂತ್ರಕರ ಸಮ್ಮತಿ ಇರುತ್ತದೆಯೇ? ಇದಲ್ಲದೆ 28 ವರ್ಷ ವಯಸ್ಸಿನ ನನ್ನ ಮಗನಿಗೂ ಅದೇ ಆರೋಗ್ಯ ವಿಮೆ ಯೋಜನೆ ₹5 ಲಕ್ಷಕ್ಕೆ ₹6,901 ಕಂತು ಇದೆ.

ಪ್ರಸ್ತುತ ಈ ಕಂಪನಿಯ ಏಜೆಂಟರು ಸರಿಯಾಗಿ ಸ್ಪಂದಿಸುತ್ತಿಲ್ಲ ಮತ್ತು ಯಾವುದೇ ಮಾಹಿತಿ ನೀಡದೆ ನಿರ್ಲಕ್ಷ್ಯದಿಂದ ವರ್ತಿಸುತ್ತಿದ್ದಾರೆ. ಈ ಕಾರಣದಿಂದ ಈ ಏಜೆಂಟ್‌ರನ್ನು ಬದಲಿಸಬಹುದೇ ಎಂಬುದನ್ನು ತಿಳಿಸಿ. ನಮ್ಮ ಮನೆಯ ಹತ್ತಿರವಿರುವ ಇನ್ನೊಂದು ಕಂಪನಿಯ ಏಜೆಂಟ್ ಸ್ನೇಹಿತನಾಗಿದ್ದು, ಅವರ ಪಾಲಿಸಿದಾರರು ಯಾರಾದರೂ ಆಸ್ಪತ್ರೆಗೆ ದಾಖಲಾದರೆ, ಅವರ ಸಿಬ್ಬಂದಿ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಾರೆ. ಜೊತೆಗೆ, ವಿಮಾ ಕಂಪನಿಯಿಂದ ಆಸ್ಪತ್ರೆ ವೆಚ್ಚ ಭರಿಸಲು ಸಹಾಯ ಮಾಡುತ್ತಾರೆ. ಅಂತಹ ಆಸ್ಪತ್ರೆ ವಿಮಾ ಕಂಪನಿಯ ಸಹಭಾಗಿತ್ವ ಪಟ್ಟಿಯಲ್ಲಿ ಇಲ್ಲದಿದ್ದರೂ ಅವರು ಪಾಲಿಸಿದಾರರಿಗೆ ವೆಚ್ಚ ಭರಿಸಿಕೊಡುವ (ಮರುಪಾವತಿ) ಮೂಲಕ ನೆರವಾಗುತ್ತಾರೆ. ಈಗ ನನ್ನ ಪಾಲಿಸಿಯನ್ನು ಬೇರೆ ಕಂಪನಿಗೆ ವರ್ಗಾವಣೆ (ಪೋರ್ಟ್) ಮಾಡಿಕೊಂಡರೆ, ಇದೇ ₹48 ಸಾವಿರ ಕಂತಿಗೆ ₹10 ಲಕ್ಷದ ವಿಮೆ ಪಡೆಯಬಹುದು ಎಂದು ಹೇಳಿದ್ದಾರೆ. ಪೋರ್ಟ್ ಮಾಡಿದರೆ ತಕ್ಷಣವೇ ವಿಮಾ ಸೌಲಭ್ಯ ಲಭ್ಯವಾಗುತ್ತದೆಯೇ? ನಾನು 2021ರ ಜೂನ್ 6ರಿಂದ ವಿಮೆ ಹೊಂದಿದ್ದು, ನಾಲ್ಕು ವರ್ಷದೊಳಗೆ ಪೋರ್ಟ್ ಮಾಡಬಹುದು ಎಂದು ಹೇಳಿದ್ದಾರೆ.

ನನ್ನ ಪ್ರಶ್ನೆಗಳೇನೆಂದರೆ, ನಾನು ಏಜೆಂಟ್‌ರನ್ನು ಬದಲಿಸಬಹುದೇ? ಬೇರೆ ಕಂಪನಿಗೆ ನನ್ನ ಪಾಲಿಸಿಯನ್ನು ಪೋರ್ಟ್ ಮಾಡಬಹುದೇ? ಅವಧಿಯೊಳಗೆ ಪೋರ್ಟ್ ಮಾಡಿದರೆ ಎಲ್ಲಾ ಸೌಲಭ್ಯಗಳು ಲಭ್ಯವಾಗುತ್ತವೆಯೇ?

ಉತ್ತರ: ನೀವು ನೀಡಿರುವ ಮಾಹಿತಿಯಂತೆ, ಪ್ರಸ್ತುತ ನೀವು ಖರೀದಿಸಿರುವ ವಿಮಾ ಯೋಜನೆಯ ಅಡಿಯಲ್ಲಿ ಅವರು ನೀಡುವ ಸೇವೆಯ ವಿಚಾರದಲ್ಲಿ ನಿಮಗೆ ಅಸಮಾಧಾನವಿದೆ. ಅವರು ಪಡೆಯುವ ಕಂತು ಇತರ ವಿಮಾ ಕಂಪನಿಗಳ ಕಂತಿನ ಜೊತೆ ತುಲನೆ ಮಾಡಿದರೆ ಹೆಚ್ಚಾಗಿದೆ ಎಂಬ ಅಸಮಾಧಾನವಿದೆ. ಹೀಗಾಗಿ ನೀವು ಹೊಸದೊಂದು ವಿಮಾ ಕಂಪನಿಗೆ ನಿಮ್ಮ ವಿಮಾ ಯೋಜನೆಯನ್ನು ವರ್ಗಾಯಿಸುವ ಬಗ್ಗೆ ಮಾಹಿತಿ ಕೇಳಿರುತ್ತೀರಿ. ಈ ಹಿನ್ನೆಲೆಯಲ್ಲಿ ಈ ಕೆಳಗಿನ ಕೆಲವು ಅಂಶಗಳನ್ನು ಪರಿಗಣಿಸುವುದು ಸೂಕ್ತ.

- ವಿಮೆ ಪಡೆಯುತ್ತಿರುವ ವ್ಯಕ್ತಿಯ ವಯಸ್ಸಿಗೆ ಅನುಗುಣವಾಗಿ ಹಾಗೂ ವಯಸ್ಸಿನ ಹಂತದ ಆಧಾರದಲ್ಲಿ ಆಯಾ ವರ್ಗದ ವಿಮಾ ಯೋಜನೆಗಳಿಗೆ ವಿಮಾ ದರ ನಿಗದಿಯಾಗುತ್ತದೆ. ಹಿರಿಯ ನಾಗರಿಕರಿಗೆ ಸಂಬಂಧಿಸಿದಂತೆ ಕಂತು ಹೆಚ್ಚಳದ ವಿಚಾರವಾಗಿ ಈ ವರ್ಷದ ಜನವರಿಯಲ್ಲೇ ಎಲ್ಲಾ ವಿಮಾ ಕಂಪನಿಗಳಿಗೆ ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎ) ನೀಡಿದ ಸುತ್ತೋಲೆಯಂತೆ, ಶೇಕಡ 10ಕ್ಕಿಂತ ಹೆಚ್ಚಿನ ವಾರ್ಷಿಕ ಕಂತು ವೃದ್ಧಿಸುವುದಿದ್ದಲ್ಲಿ, ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಂಗೀಕಾರ ಬೇಕಾಗಿರುತ್ತದೆ.
- ನೀವು ಯಾವುದೇ ಬ್ರೋಕರ್, ಏಜೆಂಟ್ ಅಥವಾ ವಿಮಾ ಕಂಪನಿಯ ಸೇವೆಯ ಬಗ್ಗೆ ಅಸಮಾಧಾನ ಹೊಂದಿದ್ದರೆ, ಮೊದಲನೆಯದಾಗಿ ನಿಮ್ಮ ಅಹವಾಲನ್ನು ಆಯಾ ಕಂಪನಿಗೆ ಲಿಖಿತ ರೂಪದಲ್ಲಿ ಬರೆದು ಕಳುಹಿಸಿ. ಅಂತಹ ಸಮಸ್ಯೆಗೆ ವಿಮಾ ಕಂಪನಿಯವರು ಸ್ಪಂದಿಸದಿದ್ದರೆ, ಮುಂದೆ ನಿಮಗೆ ಐಆರ್‌ಡಿಎಗೆ ವಿವರವಾಗಿ ಅಹವಾಲು ಸಲ್ಲಿಸುವುದಕ್ಕೆ ಅವಕಾಶ ಇದೆ. ಇದಕ್ಕಾಗಿ ಅದರ ಒಂಬುಡ್ಸ್‌ಮನ್ ಬಗ್ಗೆ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದೆ.
- ವಿಮಾ ಕಂಪನಿಯ ಸೇವೆಯನ್ನು ಪೋರ್ಟ್ ಮಾಡುವ ಅವಕಾಶ ಇದೆಯೇ ಎನ್ನುವ ವಿಚಾರದ ಬಗ್ಗೆ ಕೇಳಿದ್ದೀರಿ. ಇದಕ್ಕೆ ವಾರ್ಷಿಕ ಪಾಲಿಸಿಯ ಅವಧಿ ಮುಗಿಯುವ 45 ದಿನಗಳ ಮುನ್ನ ಪೋರ್ಟ್ ಮಾಡುವ ಅರ್ಜಿ ಸಲ್ಲಿಸಬೇಕಾಗುತ್ತದೆ. ಒಂದು ವೇಳೆ ಈ ಅವಧಿ ಮುಗಿದಿದ್ದರೆ ಮುಂದಿನ ವರ್ಷದ ಅವಧಿಯ ತನಕ ಕಾಯಬೇಕು. ವರ್ಷದ ನಡುವೆ ವಿಮಾ ಸೇವಾ ಕಂಪನಿಯನ್ನು ಬದಲಿಸುವ ಅವಕಾಶ ಇರುವುದಿಲ್ಲ. ವಿಮಾ ಪ್ರಾಧಿಕಾರ ಎಲ್ಲಾ ವ್ಯಕ್ತಿಗಳಿಗೆ ನೀಡಲಾದ ಆರೋಗ್ಯ ವಿಮಾ ಪಾಲಿಸಿಗಳ ವಿವರಗಳನ್ನು ಪಡೆಯಲು ಮತ್ತು ನಿರ್ವಹಿಸಲು ವೆಬ್ ಆಧಾರಿತ ಸೌಲಭ್ಯವನ್ನು ನಿರ್ಮಿಸಿದೆ. ಈ ವ್ಯವಸ್ಥೆಯು, ಪಾಲಿಸಿಯನ್ನು ಪೋರ್ಟ್ ಮಾಡಬೇಕೆಂದಿರುವವರು ತಮ್ಮ ಆರೋಗ್ಯ ವಿಮಾ ಮಾಹಿತಿಯನ್ನು ಹೊಸ ವಿಮಾ ಕಂಪನಿಗೆ ಲಭ್ಯವಾಗುವಂತೆ ಮಾಡುತ್ತದೆ. ಇದರ ಮೂಲಕ, ಹೊಸ ವಿಮಾ ಕಂಪನಿ ಪಾಲಿಸಿಗೆ ಪೋರ್ಟ್ ಮಾಡಲು ಇಚ್ಛಿಸುವ ವ್ಯಕ್ತಿಯ ಆರೋಗ್ಯ ವಿಮಾ ಮಾಹಿತಿಯನ್ನು ಮೊದಲೇ ಸುಲಭವಾಗಿ ಪಡೆಯಬಹುದು. ಈ ಬಗ್ಗೆ ಅಧಿಕೃತ ಮಾಹಿತಿಯನ್ನು https://policyholder.gov.inನ ಜಾಲತಾಣದಲ್ಲೂ ನೋಡಬಹುದು.

ಪಾಲಿಸಿ ಪೋರ್ಟ್ ಮಾಡುವ ಬಗೆಗಿನ ಯಾವುದೇ ನಿರ್ಧಾರ ಮಾಡುವ ಮೊದಲು ನಿಮ್ಮ ಈಗಿರುವ ಪಾಲಿಸಿಯ ಉತ್ತಮ ಅಂಶಗಳನ್ನು ನೋಡಿ. ಈ ಸೇವೆಗಳು ಮುಂದೆ ಪೋರ್ಟ್ ಮಾಡುವ ವಿಮಾ ಕಂಪನಿಯಿಂದಲೂ ಲಭ್ಯವಾಗುವಂತಿರಬೇಕು. ಇದಕ್ಕಾಗಿ ಅವರಿಂದ ಖಚಿತವಾಗಿ ಲಿಖಿತ ರೂಪದಲ್ಲಿ ಮಾಹಿತಿ ಪಡೆದು ತುಲನೆ ಮಾಡಿ. ಯಾವುದೇ ಕಾಯಿಲೆಗಳಿಗೆ ಸಂಬಂಧಿಸಿ ಹೆಚ್ಚುವರಿ ಕಾಯುವಿಕೆಯ ಅನಿವಾರ್ಯತೆ ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ. ಇನ್ನೂ ಕೆಲವು ಪರಿಗಣಿಸಬೇಕಾದ ಅಂಶಗಳೆಂದರೆ, ವಿಮಾ ಕಂಪನಿ ನೀಡುವ ಪರಿಹಾರ ಅನುಪಾತ, ನೆಟ್‌ವರ್ಕ್ ಆಸ್ಪತ್ರೆಗಳ ಸಂಖ್ಯೆ, ಪಾಲಿಸಿಯಲ್ಲಿ ಒಳಗೊಳ್ಳುವ ಪರಿಹಾರದ ಅಂಶಗಳು ಮತ್ತು ಮಾರಾಟದ ನಂತರದ ಸೇವೆಗಳ ಗುಣಮಟ್ಟವೂ ಮಹತ್ವ ಹೊಂದಿರುತ್ತವೆ. ಈ ಅಂಶಗಳನ್ನು ಅಂತಹ ವಿಮಾ ಕಂಪನಿಯ ಸೇವೆ ಪಡೆದವರ ಮೂಲಕವೇ ಗೊತ್ತುಮಾಡಿ ನಿರ್ಧರಿಸುವುದು ಉತ್ತಮ. ಕಡಿಮೆ ಕಂತು ನಿಗದಿಪಡಿಸಿ, ಗ್ರಾಹಕರನ್ನು ಸೆಳೆಯುವ ಉದ್ದೇಶ ಇರುವ ಕಂಪನಿಗಳೂ ಇಲ್ಲವೆನ್ನಲಾಗದು. ಹೀಗಾಗಿ, ನಿಮ್ಮ ತೀರ್ಮಾನ ಕೈಗೊಳ್ಳುವ ಮೊದಲು ವಿಮಾ ತಜ್ಞರ ಸಲಹೆ ಪಡೆದು ಸಮಗ್ರವಾಗಿ ಹೋಲಿಕೆ ಮಾಡಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

ಸೆನ್ಸೆಕ್ಸ್ 700 ಅಂಶ ಏರಿಕೆ

ಮುಂಬೈ (ಪಿಟಿಐ): ಇರಾನ್ ಮತ್ತು ಇಸ್ರೇಲ್ ನಡುವೆ ಕದನ ವಿರಾಮ ಘೋಷಣೆಯಿಂದ ಪಶ್ಚಿಮ ಏಷ್ಯಾದಲ್ಲಿ ಬಿಕ್ಕಟ್ಟು ತಗ್ಗಿರುವುದು ದೇಶದ ಷೇರುಪೇಟೆಯಲ್ಲಿ ಷೇರುಗಳ ಖರೀದಿ ಹೆಚ್ಚಳಕ್ಕೆ ಕಾರಣವಾಯಿತು. ಹೀಗಾಗಿ, ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಏರಿಕೆ ಕಂಡವು.



ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳ ಖರೀದಿ ಹೆಚ್ಚಳವು ಸೂಚ್ಯಂಕಗಳ ಏರಿಕೆಗೆ ನೆರವಾದವು. ಅಲ್ಲದೆ, ಉದ್ಯಮಿಗಳಾದ ಮುಕೇಶ್ ಅಂಬಾನಿ ಮತ್ತು ಗೌತಮ್ ಅದಾನಿ ತೈಲ ಮಾರಾಟಕ್ಕೆ ಒಪ್ಪಂದ ಮಾಡಿಕೊಂಡಿರುವುದು ಸಹ ಸೂಚ್ಯಂಕಗಳ ಏರಿಕೆಗೆ ನೆರವಾದವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 700 ಅಂಶ ಹೆಚ್ಚಳವಾಗಿ, 82,755ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 200 ಅಂಶ ಏರಿಕೆಯಾಗಿ, 25,244ಕ್ಕೆ ಕೊನೆಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.21ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರೆಲ್‌ಗೆ 67.95 ಡಾಲರ್ ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಂಗಳವಾರದ ವಹಿವಾಟಿನಲ್ಲಿ ₹5,266 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದೇ ವೇಳೆ ದೇಶಿ ಸಾಂಸ್ಥಿಕ ಹೂಡಿಕೆದಾರರು ₹5,209 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಫಿನ್‌ಟೆಕ್ ವಲಯ: ಭಾರತ ಮುಂಚೂಣಿ

ನವದೆಹಲಿ (ಪಿಟಿಐ): ಫಿನ್‌ಟೆಕ್ ವಲಯದ ಜಾಗತಿಕ ಪ್ರಮುಖ ಕೇಂದ್ರಗಳ ಪಟ್ಟಿಯಲ್ಲಿ ಭಾರತ ಮುಂಚೂಣಿ ಸ್ಥಾನ ಪಡೆದಿದೆ ಎಂದು ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ವರದಿ ಬುಧವಾರ ತಿಳಿಸಿದೆ.

ಭಾರತ, ಬ್ರಿಟನ್ ಮತ್ತು ಅಮೆರಿಕವು ಫಿನ್‌ಟೆಕ್ ವಲಯದ ಪ್ರಮುಖ ಕೇಂದ್ರಗಳಾಗಿ ಬೆಳೆಯುತ್ತಿವೆ. ಲಾಭದಾಯಕತೆ ಮತ್ತು ಒಳಗೊಳ್ಳುವಿಕೆಯ ಕಾರಣದಿಂದಾಗಿ ಈ ವಲಯದ ಪ್ರಗತಿ ಸ್ಥಿರವಾಗುತ್ತಿದೆ ಎಂದು ತಿಳಿಸಿದೆ.

ಫಿನ್‌ಟೆಕ್ ಉದ್ಯಮದ ಪ್ರಮುಖ ಕೇಂದ್ರಗಳ ಪಟ್ಟಿಯಲ್ಲಿ ಬ್ರಿಟನ್, ಭಾರತ, ಅಮೆರಿಕ, ಸಿಂಗಪುರ, ಬ್ರೆಜಿಲ್ ಮತ್ತು ಇಂಡೋನೇಷ್ಯಾ ಇವೆ.

ಕೋವಿಡ್ ಸಾಂಕ್ರಾಮಿಕ ನಂತರದಲ್ಲಿ ಫಿನ್‌ಟೆಕ್ ವಲಯವು ಸದೃಢವಾಗಿದ್ದು, ಸುಸ್ಥಿರ ಪ್ರಗತಿ ಕಾಣುತ್ತಿದೆ. ಸಮೀಕ್ಷೆಯಲ್ಲಿ 240 ಫಿನ್‌ಟೆಕ್ ಸಂಸ್ಥೆಗಳು ಭಾಗಿಯಾಗಿದ್ದವು. ಗ್ರಾಹಕರ ಸಂಖ್ಯೆಯಲ್ಲಿನ ಬೆಳವಣಿಗೆ ಪ್ರಮಾಣವು ಶೇ 37ರಷ್ಟು ಇದೆ, ವರಮಾನ ಹೆಚ್ಚಳ ಶೇ 40ರಷ್ಟು ಮತ್ತು ಲಾಭ ಹೆಚ್ಚಳ ಶೇ 39ರಷ್ಟಿದೆ ಎಂದು ತಿಳಿಸಿವೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣ ಉದ್ದಿಮೆಗಳು (ಎಂಎಸ್‌ಎಂಇ), ಕಡಿಮೆ ಆದಾಯ ಹೊಂದಿರುವವರು ಮತ್ತು ಮಹಿಳೆಯರು ಫಿನ್‌ಟೆಕ್ ಉದ್ಯಮದ ಪ್ರಮುಖ ಗ್ರಾಹಕರಾಗಿದ್ದಾರೆ.

ಕೃತಕ ಬುದ್ಧಿಮತ್ತೆ ಅಳವಡಿಕೆಯು ಕಾರ್ಯಕ್ಷಮತೆಯನ್ನು ಸುಧಾರಿಸುತ್ತಿದೆ. ಶೇ 83ರಷ್ಟು ಫಿನ್‌ಟೆಕ್‌ಗಳು ಗ್ರಾಹಕರಿಗೆ ನೀಡುವ ಸೇವೆಯಲ್ಲಿ ಸುಧಾರಣೆ ಕಂಡಿವೆ ಎಂದು ಹೇಳಿದೆ.

ಮಲೇರಿಯಾ ಲಸಿಕೆ ಬೆಲೆ ಇಳಿಕೆ

ನವದೆಹಲಿ (ಪಿಟಿಐ): 2028ರ ವೇಳೆಗೆ ಮಲೇರಿಯಾ ಲಸಿಕೆ ದರವನ್ನು ಶೇಕಡ 50ಕ್ಕೂ ಹೆಚ್ಚು ಕಡಿತ ಮಾಡಲಾಗುವುದು ಎಂದು ಭಾರತ್ ಬಯೋಟೆಕ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಮತ್ತು ಜಿಎಸ್‌ಕೆ ಬುಧವಾರ ತಿಳಿಸಿವೆ.

‘ಆರ್‌ಟಿಎಸ್,ಎಸ್’ ಜಗತ್ತಿನ ಮೊದಲ ಮಲೇರಿಯಾ ಲಸಿಕೆ. ದರ ಇಳಿಕೆಯ ನಂತರ ಇದು 5 ಡಾಲರ್‌ಗಿಂತ ಕಡಿಮೆ ದರಕ್ಕೆ ಲಭ್ಯವಾಗಲಿದೆ. ಉತ್ಪಾದನೆಯಲ್ಲಿನ ಹೆಚ್ಚಳ, ತಯಾರಿಕಾ ವೆಚ್ಚದಲ್ಲಿ ಕಡಿತ ಮತ್ತು ಕನಿಷ್ಠ ಲಾಭಾಂಶ ಹೊಂದುವ ಮೂಲಕ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲಾಗುವುದು ಎಂದು ತಿಳಿಸಿವೆ.

ಇಸ್ರೇಲ್‌ನ 7 ಸೈನಿಕರ ಸಾವು

ಜೆರುಸಲೇಂ (ಎಪಿ/ ಎಎಫ್‌ಪಿ): ದಕ್ಷಿಣ ಗಾಜಾದ ಖಾನ್ ಯೂನಿಸ್‌ನಲ್ಲಿ ಇಸ್ರೇಲ್ ಯೋಧರಿದ್ದ ಶಸ್ತ್ರಸಜ್ಜಿತ ವಾಹನದ ಮೇಲೆ ಹಮಾಸ್ ಬಂಡುಕೋರರು ಮಂಗಳವಾರ ನಡೆಸಿದ ದಾಳಿಯಲ್ಲಿ ಏಳು ಯೋಧರು ಮೃತಪಟ್ಟಿದ್ದಾರೆ.



‘ದಾಳಿಕೋರರು ಸೇನೆಯ ವಾಹನದಲ್ಲಿ ಬಾಂಬ್ ಇರಿಸಿದ್ದರು. ಅದು ಸ್ಫೋಟಗೊಂಡ ಪರಿಣಾಮ ಯೋಧರು ಮೃತಪಟ್ಟಿದ್ದಾರೆ’ ಎಂದು ಇಸ್ರೇಲ್ ಸೇನೆಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಗಾಜಾದಲ್ಲಿ 79 ಸಾವು: ಇಸ್ರೇಲ್ ಸೇನೆ ಮಂಗಳವಾರ ರಾತ್ರಿಯಿಂದ ನಡೆಸಿದ ದಾಳಿಯಲ್ಲಿ ಗಾಜಾದಲ್ಲಿ 79 ಪ್ಯಾಲೆಸ್ಟೀನಿಯನ್ನರು ಮೃತ ಪಟ್ಟಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ನ್ಯೂಯಾರ್ಕ್ ಮೇಯರ್ ಪ್ರಾಥಮಿಕ ಚುನಾವಣೆ: ಜೊಹ್ರಾನ್‌ಗೆ ಗೆಲುವು

ನ್ಯೂಯಾರ್ಕ್ (ಎಪಿ): ನ್ಯೂಯಾರ್ಕ್ ನಗರದ ಡೆಮಾಕ್ರಟಿಕ್ ಮೇಯರ್ ಸ್ಥಾನಕ್ಕಾಗಿ ನಡೆದ ಪ್ರಾಥಮಿಕ ಚುನಾವಣೆಯಲ್ಲಿ ಇಂಡೋ–ಅಮೆರಿಕನ್ ಅಭ್ಯರ್ಥಿ ಜೊಹ್ರಾನ್ ಮಮ್ದಾನಿ ಅವರು ಮಾಜಿ ಗವರ್ನರ್ ಆ್ಯಂಡ್ರ್ಯೂ ಕೌಮೋ ಅವರನ್ನು ಮಣಿಸಿದ್ದಾರೆ. ಜುಲೈ 1ರಂದು ಅಧಿಕೃತ ಫಲಿತಾಂಶ ಹೊರಬೀಳಲಿದೆ.

ಕ್ವೀನ್ಸ್‌ನ ಡೆಮಾಕ್ರಟಿಕ್ ಸೋಷಿಯಲಿಸ್ಟ್ ಮತ್ತು ಸ್ಟೇಟ್ ಅಸೆಂಬ್ಲಿ ಸದಸ್ಯರಾಗಿರುವ ಜೊಹ್ರಾನ್ ಅವರು ಭಾರತದ ಸಿನಿಮಾ ನಿರ್ಮಾಪಕರಾದ ಮೀರಾ ನಾಯರ್ ಮತ್ತು ಮಹಮೂದ್ ಮಮ್ದಾನಿ ಅವರ ಪುತ್ರ. ಮೇಯರ್ ಅಂತಿಮ ಆಯ್ಕೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಜೊಹ್ರಾನ್, ಮಾಜಿ ಮೇಯರ್- ರಿಪಬ್ಲಿಕನ್ ಪಕ್ಷದ ಎರಿಕ್ ಆ್ಯಡಮ್ಸ್ ಅವರನ್ನು ಎದುರಿಸಬೇಕಿದೆ.

ಸಿನಿ ಸಮ್ಮಾನದ ಎರಡು ಆವೃತ್ತಿಗಳ ಝಲಕ್

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಇದು ಚಂದನವನದ ಹಬ್ಬ. ಈ ಹಬ್ಬಕ್ಕಿನ್ನು ಒಂದೇ ದಿನ! ಶುಕ್ರವಾರ (ಜೂನ್ 27) ಅದ್ದೂರಿಯಾಗಿ ‘ಸಿನಿ ಸಮ್ಮಾನ’ದ ಮೂರನೇ ಆವೃತ್ತಿಯ ಕಾರ್ಯಕ್ರಮ ನಡೆಯಲಿದ್ದು, ವರ್ಣರಂಜಿತವಾಗಿ ನಡೆದ ಕಳೆದೆರಡು ಆವೃತ್ತಿಗಳ ಝಲಕ್ ಇಲ್ಲಿದೆ. ಹಿರಿಯ ಕಲಾವಿದರಾದ ಅನಂತನಾಗ್ ಹಾಗೂ ಬಿ.ಸರೋಜಾದೇವಿಯವರ ಕಲಾಸೇವೆಗೆ ‘ಜೀವಮಾನ ಸಾಧನೆ’ ಪುರಸ್ಕಾರ ನೀಡಿ ಗೌರವಿಸಿದ್ದ ಈ ವೇದಿಕೆ ಹಲವು ಯುವ ಪ್ರತಿಭಾವಂತರಿಗೆ ಚಿಮ್ಮುಹಲಗೆಯಾಗಿ ಮಾರ್ಪಟ್ಟಿದೆ. ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆಯಾಗಿ ಗುರುತಿಸಿಕೊಂಡಿರುವ ಈ ಕಾರ್ಯಕ್ರಮ ಈ ವರ್ಷ ಖ್ಯಾತ ನಟ, ನಟಿಯರು, ತಂತ್ರಜ್ಞರ ಉಪಸ್ಥಿತಿಯಿಂದ ಇನ್ನಷ್ಟು ರಂಗಿನಿಂದ ಮೂಡಿಬರಲಿದೆ. ಈ ಮೂಲಕ ಚಲನಚಿತ್ರರಂಗ ಹಾಗೂ ‘ಪ್ರಜಾವಾಣಿ’ಯ ಅವಿನಾಭಾವ ಸಂಬಂಧಕ್ಕೆ ಹೊಸ ನೆನಪುಗಳು ಸೇರ್ಪಡೆಯಾಗಲಿವೆ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ.


www.prajavani.net/cinesamman/season3








ಸಹ ಪ್ರಾಯೋಜಕರು: ಟಿಟಿಕೆ ಪ್ರೆಸ್ಟೀಜ್, ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್, ಹೋಂಡಾ, ವಿ, ಸದ್ಗುರು ಆಯುರ್ವೇದ, ದಿ ಬೆಂಗಳೂರ್ ಸಿಟಿ ಕೊ–ಆಪರೇಟಿವ್ ಬ್ಯಾಂಕ್, ದಿ ಜನತಾ ಕೊ–ಆಪರೇಟಿವ್ ಬ್ಯಾಂಕ್, ಕೆಎಸ್‌ಡಿಎಲ್, ಎನ್‌ಬಿಸಿಸಿ ಲಿಮಿಟೆಡ್. **ಮೊಬಿಲಿಟಿ ಪಾರ್ಟ್‌ನರ್:** ಮರ್ಸಿಡೀಸ್ ಬೆಂಜ್–ಅಕ್ಷಯ್ ಮೋಟರ್ಸ್. **ಬ್ಯಾಂಕಿಂಗ್ ಪಾರ್ಟ್‌ನರ್:** ಕೆನರಾ ಬ್ಯಾಂಕ್. **ಸ್ಟೈಲ್ ಪಾರ್ಟ್‌ನರ್:** ಬಿ.ಎಸ್. ಚನ್ನಬಸಪ್ಪ ಆ್ಯಂಡ್ ಸನ್ಸ್. **ಟ್ರಾವೆಲ್ ಪಾರ್ಟ್‌ನರ್:** ಟ್ರಾವೆಲ್‌ಮಾರ್ಟ್. **ವಾರ್ಡ್‌ರೋಬ್ ಪಾರ್ಟ್‌ನರ್:** ನ್ಯುಮೆನ್. **ನಾಲೆಜ್ ಪಾರ್ಟ್‌ನರ್ಸ್:** ಇನ್‌ಸೈಟ್ಸ್‌ಐಎಎಸ್ ಮತ್ತು ಗೀತಂ ಬೆಂಗಳೂರು. **ಇನ್‌ಶ್ಯೂರೆನ್ಸ್ ಪಾರ್ಟ್‌ನರ್:** ನ್ಯಾಷನಲ್ ಇನ್‌ಶ್ಯೂರೆನ್ಸ್. **ಟೆಲಿಕಾಸ್ಟ್ ಪಾರ್ಟ್‌ನರ್:** ಜೀ ಕನ್ನಡ. **ಆಡಿಟ್ ಪಾರ್ಟ್‌ನರ್:** ಇ ಆ್ಯಂಡ್ ವೈ.



ಚಿಟಿಕೆ ಸುದ್ದಿ

ಸೆಮಿಫೈನಲ್‌ಗೆ ಎಂಪೈರ್ ಎಫ್‌ಸಿ

ಬೆಂಗಳೂರು: ಮೊಹಮ್ಮದ್ ಇಜಾಸ್ ಅವರ ನಿರ್ಣಾಯಕ ಗೋಲಿನಿಂದಾಗಿ ಎಂಪೈರ್ ಎಫ್‌ಸಿ ತಂಡವು ಬಿಡಿಎಫ್‌ಎ ‘ಸಿ’ ಡಿವಿಷನ್ ಫುಟ್‌ಬಾಲ್ ಲೀಗ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 1–0 ಯಿಂದ ಯಂಗ್ ಬಾಯ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಇಜಾಸ್ ಅವರು 46ನೇ ನಿಮಿಷದಲ್ಲಿ ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ, ಜೈ ಭಾರತ್ ನಗರ ಎಫ್‌ಸಿ ತಂಡವು 3–1ರಿಂದ ಯೂನಿವರ್ಸಲ್ ಎಫ್‌ಸಿ ತಂಡವನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು. ಜೈ ಭಾರತ್ ನಗರ ಎಫ್‌ಸಿ ತಂಡದ ಅಭಿನವ್ ಬಿ. (5ನೇ ನಿ.) ಒಂದು ಗೋಲು ಮತ್ತು ರೋಶನ್ ಪಿ.ಎ. (30 + 1ನೇ ಹಾಗೂ 35ನೇ ನಿ.) ಎರಡು ಗೋಲು ಹೊಡೆದರು. ಯೂನಿವರ್ಸಲ್ ಎಫ್‌ಸಿ ಪರ ನಂದನ್ ಎಂ.ಡಿ. (41ನೇ ನಿ.) ಏಕೈಕ ಗೋಲು ಗಳಿಸಿದರು.

ಗುರುವಾರ ನಡೆಯಲಿರುವ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ, ಕೊಂಕಣ್ ಎಫ್‌ಸಿ ತಂಡವು ಪಿಳ್ಳಣ್ಣ ಗಾರ್ಡನ್ ಎಫ್‌ಸಿ ತಂಡವನ್ನು ಹಾಗೂ ಇಂದಿರಾನಗರ ಎಫ್‌ಸಿ ತಂಡವು ಮಹಾರಾಜ ಸೋಷಿಯಲ್ಸ್ ತಂಡವನ್ನು ಎದುರಿಸಲಿವೆ.

ಟ್ರಯಾಥ್ಲಾನ್: ಶ್ರೀನಿವಾಸ್‌ಗೆ ಪದಕ



ಬೆಂಗಳೂರು: ಕರ್ನಾಟಕದ ಶ್ರೀನಿವಾಸ್ ಪ್ರಭು ಮುಂಡ್ಕೂರು ಅವರು ಚೆನ್ನೈನಲ್ಲಿ ಟ್ರೈ2ಚಾಂಪ್ ಆಯೋಜಿಸಿದ್ದ ಟ್ರಯಾಥ್ಲಾನ್ ಸ್ಪರ್ಧೆಯನ್ನು ಯಶಸ್ವಿಯಾಗಿ ಮುಗಿಸಿ ಗಮನಸೆಳೆದಿದ್ದಾರೆ.

ವಿಶ್ವದ ಅತ್ಯಂತ ಕಠಿಣ ಕ್ರೀಡೆಗಳಲ್ಲಿ ಇದು ಒಂದೆನಿಸಿದೆ. ಸ್ಪರ್ಧಿಗಳು ಇಲ್ಲಿ ಬಿಡುವಿಲ್ಲದೆ 750 ಮೀಟರ್ ಈಜು, 20 ಕಿ.ಮೀ. ಸೈಕ್ಲಿಂಗ್ ಮತ್ತು 5 ಕಿಲೋಮೀಟರ್ ಓಟವನ್ನು ಪೂರೈಸಬೇಕಾಗುತ್ತದೆ.

28ಕ್ಕೆ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಕೂಟ

ಬೆಂಗಳೂರು: ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಆಶ್ರಯದಲ್ಲಿ ಇದೇ 28ರಂದು ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಕೂಟ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಪ್ರತಿಷ್ಠಿತ ಕೂಟದಲ್ಲಿ ದೇಶದ ಪ್ರಮುಖ ಅಥ್ಲೀಟುಗಳು ಭಾಗವಹಿಸಲಿದ್ದಾರೆ.

ದಿನಿಧಿ ದೇಸಿಂಗು ದಾಖಲೆ ಚಿನ್ನ

ಸೀನಿಯರ್ ಈಜು ಕೂಟ: ವಿಹಿತಾ, ಉತ್ಕರ್ಷ್ ಮಿಂಚು
• ನೀನಾ ವೆಂಕಟೇಶ್ ಪ್ರಥಮ

ಪ್ರಜಾವಾಣಿ ವಾರ್ತೆ

ಕ್ರೀಡೆ

ಬೆಂಗಳೂರು: ಕರ್ನಾಟಕದ ಈಜುಪಟು, ಒಲಿಂಪಿಯನ್ ದಿನಿಧಿ ದೇಸಿಂಗು ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ 78ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ನೂತನ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಬುಧವಾರ ನಡೆದ ಮಹಿಳೆಯರ 100 ಮೀಟರ್ಸ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 56.78 ಸೆಕೆಂಡುಗಳಲ್ಲಿ ದಿನಿಧಿ ಗುರಿ ಮುಟ್ಟಿದರು. 2022ರಲ್ಲಿ ಶಿವಾಂಗಿ ಶರ್ಮಾ (57.73ಸೆ) ಅವರು ಸ್ಥಾಪಿಸಿದ್ದ ದಾಖಲೆಯನ್ನು ದಿನಿಧಿ ಮೀರಿನಿಂತರು. ಇದೇ ವಿಭಾಗದಲ್ಲಿ ಎಸ್. ಖುಜುಲಾ ಬೆಳ್ಳಿ ಪದಕ ಪಡೆದರು.

ಪುರುಷರ ವಿಭಾಗದ 200 ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ ಮಹಾರಾಷ್ಟ್ರದ ರಿಷಭ್ ದಾಸ್ ಅವರು (2ನಿ,00.65ಸೆ) ಈ ಹಿಂದೆ ಕರ್ನಾಟಕದ ಶ್ರೀಹರಿ ನಟರಾಜ್ ಮಾಡಿದ್ದ ದಾಖಲೆ (2ನಿ,02.29ಸೆ)ಯನ್ನು ಮುರಿದರು. ಇದೇ ಸ್ಪರ್ಧೆಯಲ್ಲಿ ಕರ್ನಾಟಕದ ಉತ್ಕರ್ಷ್ ಸಂತೋಷ್ ಪಾಟೀಲ ಬೆಳ್ಳಿಪದಕ ಜಯಿಸಿದರು.

10 ಪದಕ: ಸ್ಪರ್ಧೆಯ ನಾಲ್ಕನೇ ದಿನವಾದ ಬುಧವಾರ ಕರ್ನಾಟಕದ ಈಜುಪಟುಗಳು ಒಟ್ಟು 10 ಪದಕಗಳನ್ನು ಜಯಿಸಿದರು. ಅದರಲ್ಲಿ ನಾಲ್ಕು ಚಿನ್ನದ ಪದಕಗಳು ಸೇರಿವೆ. ಕರ್ನಾಟಕವು ಒಟ್ಟು 36 ಪದಕಗಳೊಂದಿಗೆ ಅಗ್ರಸ್ಥಾನದಲ್ಲಿದೆ.

ಪುರುಷರು: 200 ಮೀ ಬ್ಯಾಕ್‌ಸ್ಟ್ರೋಕ್: ರಿಷಭ್ ಅನುಪಮ್ ದಾಸ್ (ಮಹಾರಾಷ್ಟ್ರ; ನೂತನ ದಾಖಲೆ 2ನಿ,00.65ಸೆ; ಹಳೆಯದು; 2ನಿ,02.29ಸೆ-ಶ್ರೀಹರಿ ನಟರಾಜ್)–1, ಉತ್ಕರ್ಷ್ ಸಂತೋಷ್ ಪಾಟೀಲ (ಕರ್ನಾಟಕ; 2ನಿ,00.98ಸೆ)–2, ನಿತಿಕ್ ನಥೇಲಾ (ತಮಿಳುನಾಡು; 2ನಿ,03.64ಸೆ)–3.

800 ಮೀ ಫ್ರೀಸ್ಟೈಲ್: ಆರ್ಯನ್ ನೆಹ್ರಾ (ಗುಜರಾತ್; 8ನಿ,10.40ಸೆ)–1, ಖುಷಾಗ್ರ ರಾವತ್ (ದೆಹಲಿ; 8ನಿ,11.89ಸೆ)–2, ಎಸ್. ದಕ್ಷಣ್ (ಕರ್ನಾಟಕ; 8ನಿ,17.42ಸೆ)–3

4X100 ಮೀ ಫ್ರೀಸ್ಟೈಲ್: ತಮಿಳುನಾಡು (ಜೋಶುವಾ ಥಾಮಸ್, ಬೆನೆಡಿಕ್ಟನ್ ರೋಹಿತ್, ಎಂ.ಜೆ. ಪ್ರವೀಣಕುಮಾರ್ ಪ್ರವೀಣ, ಆದಿತ್ಯ ದಿನೇಶ್) ನೂತನ ದಾಖಲೆ: 3ನಿ,26.26ಸೆ. ಹಳೆಯದು: ಕರ್ನಾಟಕ–3ನಿ,28.09ಸೆ. ಕರ್ನಾಟಕ (ಆಕಾಶ್ ಮಣಿ, ಚಿಂತನ್ ಎಸ್ ಶೆಟ್ಟಿ, ಎಸ್. ದಕ್ಷಣ್, ತನೀಶ್ ಜಾರ್ಜ್ ಮ್ಯಾಥ್ಯೂ)–2, ಮಹಾರಾಷ್ಟ್ರ (ಅಥರ್ವ ಜೈಸಿಂಗ್ ಸಂಕಪಾಲ್, ರಿಷಭ್ ಅನುಪಮ್ ದಾಸ್, ವೇದಾಂತ್ ಮಾಧವನ್, ಹೀರ್ ಗಿತೇಶ್ ಶಾ)–3

ಮಹಿಳೆಯರು: 100 ಮೀ ಫ್ರೀಸ್ಟೈಲ್: ದಿನಿಧಿ ದೇಸಿಂಗು (ಕರ್ನಾಟಕ; ನೂತನ ದಾಖಲೆ:56.78ಸೆ, ಹಳೆಯದು; ಶಿವಾಂಗಿ ಶರ್ಮಾ 57.73ಸೆ)–1, ಎಸ್. ಖುಜುಲಾ (ಕರ್ನಾಟಕ; 57.79ಸೆ)–2, ಜಾಹ್ನವಿ ಕಶ್ಯಪ್ (ಅಸ್ಸಾಂ)–3

200 ಮೀ ಬ್ಯಾಕ್‌ಸ್ಟ್ರೋಕ್: ವಿಹಿತಾ ನಯನಾ ಲೋಕನಾಥನ್ (ಕರ್ನಾಟಕ; 2ನಿ,21.85ಸೆ)–1, ನೈಶಾ (ಕರ್ನಾಟಕ; 2ನಿ,22.95ಸೆ)–2, ಪ್ರತ್ಯೂಷಾ ರೇ (ಒಡಿಶಾ)–3. 50 ಮೀ ಬಟರ್‌ಫ್ಲೈ: ನೀನಾ ವೆಂಕಟೇಶ್ (ಕರ್ನಾಟಕ; 28.25ಸೆ)–1, ಸ್ನಿಗ್ಧಾ ಘೋಷ್ (ಬಂಗಾಳ; 28.55ಸೆ) ಹಾಗೂ ಮಾನವಿ ವರ್ಮಾ (ಕರ್ನಾಟಕ–28.55ಸೆ) –2

400 ಮೀ ಮೆಡ್ಲೆ: ಸಾನ್ವಿ ದೇಶವಾಲ್ (ಮಹಾರಾಷ್ಟ್ರ; 5ನಿ,03.85ಸೆ)–1, ಶ್ರೀನಿಧಿ ನಟೇಶನ್ (ತಮಿಳುನಾಡು; 5ನಿ,10.98ಸೆ)–2, ತಾನ್ಯಾ ಷಡಕ್ಷರಿ (ಕರ್ನಾಟಕ; 5ನಿ,14.82ಸೆ)–3



ಕರ್ನಾಟಕದ ನೀನಾ ವೆಂಕಟೇಶ್

ಚೆಸ್: ಮ್ಯಾಗ್ನಸ್ ಕಾರ್ಲ್‌ಸನ್‌ಗೆ ಸವಾಲೊಡ್ಡಿದ ಪೋರ ಆರಿತ್

ನವದೆಹಲಿ (ಪಿಟಿಐ): ದೆಹಲಿಯ 9 ವರ್ಷ ವಯಸ್ಸಿನ ಪೋರ ಆರಿತ್ ಕಪಿಲ್, ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನೇ ಸೋಲಿಸುವ ಹಂತಕ್ಕೆ ತಲುಪಿದ್ದ. ಆದರೆ ಅನುಭವಿ ಕಾರ್ಲ್‌ಸನ್, ಭಾರತದ ಬಾಲಕ ಸಮಯದ ಒತ್ತಡಕ್ಕೆ ಸಿಲುಕಿದ್ದರಿಂದ ಡ್ರಾ ಮಾಡುವಲ್ಲಿ ಯಶಸ್ವಿಯಾದರು. ಈ ಪಂದ್ಯ ನಡೆದಿದ್ದು ‘ಅರ್ಲಿ ಟೈಟಲ್ಡ್ ಟ್ಯೂಸ್ಡೆ’ ಹೆಸರಿನ ಟೂರ್ನಿಯಲ್ಲಿ.

ಇದನ್ನು ಪ್ರಮುಖ ಆನ್‌ಲೈನ್ ವೇದಿಕೆಯೊಂದು ಆಯೋಜಿಸಿತ್ತು. ಇತ್ತೀಚೆಗಷ್ಟೇ ಭಾರತದ ರಾಷ್ಟ್ರೀಯ 9 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ ಅಪ್ ಆಗಿದ್ದ ಆರಿತ್, ಐದು ಬಾರಿಯ ವಿಶ್ವ ಚಾಂಪಿಯನ್ ಆಟಗಾರನ ನಡೆಗಳಿಗೆ, ಅಷ್ಟೇ ಉತ್ತಮ ನಡೆಗಳನ್ನಿರಿಸುವ ಮೂಲಕ ಗಮನ ಸೆಳೆದ. ನಾರ್ವೆಯ ಆಟಗಾರ ಒಂದು ಹಂತದಲ್ಲಿ ಸೋಲುವುದು ಖಚಿತವೆಂಬಂತೆ ಕಂಡಿತ್ತು.

ಆದರೆ ಆರಿತ್‌ಗೆ ಕ್ಲಾಕ್‌ನಲ್ಲಿ ಕೆಲವೇ ಸೆಕೆಂಡುಗಳು ಉಳಿದ ಕಾರಣ ಸಂಪೂರ್ಣ ಹತೋಟಿಯನ್ನು ಗೆಲುವನ್ನಾಗಿ ಪರಿವರ್ತಿಸಲು ಆಗಲಿಲ್ಲ. ಕಾರ್ಲ್‌ಸನ್ ಇದರ ಲಾಭ ಪಡೆದು ಡ್ರಾ ಸಾಧಿಸಿದರು.



ಆರಿತ್ ಕಪಿಲ್



ಕಾರ್ಲ್‌ಸನ್

ಜಾರ್ಜಿಯಾದಲ್ಲಿ ವಿಶ್ವ 10 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್ ಆಡಲು ಹೋಗಿರುವ ಆರಿತ್, ಅಲ್ಲಿನ ಹೋಟೆಲ್‌ನಿಂದಲೇ ಟೂರ್ನಿಯಲ್ಲಿ ಆಡಿದ್ದ.

10 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಒಂದನ್ನು ಪಡೆಯುವ ಹೋರಾಟದಲ್ಲಿ ಆರಿತ್ ತೊಡಗಿದ್ದಾನೆ.

ಇದೇ ವೇಳೆ, ಭಾರತದ ವಿ.ಪ್ರಣವ್ ಅವರು ‘ಅರ್ಲಿ ಟೈಟಲ್ಡ್ ಟ್ಯೂಸ್ಡೆ’ ಟೂರ್ನಿಯ ಚಾಂಪಿಯನ್ ಆದರು. 11 ಸುತ್ತುಗಳಲ್ಲಿ 10 ಪಾಯಿಂಟ್ಸ್ ಕಲೆಹಾಕಿದರು. ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಹ್ಯಾನ್ಸ್ ನೀಮನ್ ಮತ್ತು ಕಾರ್ಲ್‌ಸನ್ ತಲಾ 9.5 ಪಾಯಿಂಟ್ಸ್ ಗಳಿಸಿದರು. ಟೈಬ್ರೇಕ್‌ನಲ್ಲಿ ನೀಮನ್ ಎರಡನೇ ಸ್ಥಾನ ಪಡೆದರು.

ಜೂನಿಯರ್ ತಂಡಕ್ಕೆ ತೃತೀಯ ಸ್ಥಾನ

ಬರ್ಲಿನ್ (ಪಿಟಿಐ): ಭಾರತ ಜೂನಿಯರ್ ಪುರುಷರ ಹಾಕಿ ತಂಡ ಬುಧವಾರ ನಡೆದ ಪಂದ್ಯದಲ್ಲಿ 2–1 ಗೋಲುಗಳಿಂದ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ, ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿತು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದ ಪೂರ್ವಾರ್ಧದಲ್ಲಿ ಗೋಲುಗಳು ಬರಲಿಲ್ಲ. ಆಸ್ಟ್ರೇಲಿಯಾ ತಂಡದ ನಾಯಕ ಟೋಬಿ ಮಲೋನ್ (40ನೇ ನಿ.) ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದರು. ವಿರಾಮದ ನಂತರ ರೋಹಿತ್ (45ನೇ ನಿಮಿಷ) ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲುಗಳಿಸಿ ಸ್ಕೋರ್ ಸಮ ಮಾಡಿದರು. 52ನೇ ನಿಮಿಷದಲ್ಲಿ ಅಜೀತ್ ಯಾದವ್ ಭಾರತದ ಪಾಲಿನ ಗೆಲುವಿನ ಗೋಲು ಹೊಡೆದರು.

ಮುಂದಿನ ಪಂದ್ಯಕ್ಕೆ ಶಾರ್ದೂಲ್ ಠಾಕೂರ್ ಬದಲು ಕುಲದೀಪ್: ಮಾಜಿ ಕ್ರಿಕೆಟಿಗರ ಸಲಹೆ

ನಾಯಕ ಗಿಲ್ ನಿರ್ಧಾರ ಸೂಕ್ತ: ಗಂಭೀರ್



ಗಂಭೀರ್

ನವದೆಹಲಿ (ಪಿಟಿಐ): ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಶಾರ್ದೂಲ್ ಠಾಕೂರ್ ಅವರಿಗೆ ಬೌಲಿಂಗ್ ಮಾಡಲು ಅವಕಾಶ ಕೊಟ್ಟ ಭಾರತ ತಂಡದ ನಾಯಕ ಶುಭಮನ್ ಗಿಲ್ ನಿರ್ಧಾರವನ್ನು ಮುಖ್ಯ ಕೋಚ್ ಗೌತಮ್ ಗಂಭೀರ್ ಸಮರ್ಥಿಸಿಕೊಂಡಿದ್ದಾರೆ.

ಹೆಡಿಂಗ್ಲೆಯಲ್ಲಿ ಮಂಗಳವಾರ ನಡೆದ ಮೊದಲ ಟೆಸ್ಟ್‌ನಲ್ಲಿ ಭಾರತ ತಂಡವು ಇಂಗ್ಲೆಂಡ್ ಎದುರು 5 ವಿಕೆಟ್‌ಗಳಿಂದ ಸೋತಿತ್ತು. ಪಂದ್ಯದ ನಂತರದ ಸುದ್ದಿಗೋಷ್ಠಿಯಲ್ಲಿ ಗಂಭೀರ್ ಮಾತನಾಡಿದರು.

‘ನಾಯಕತ್ವ ವಹಿಸಿದವರು ಕೆಲವು ಬಾರಿ ಆ ಕ್ಷಣಕ್ಕೆ ಸೂಕ್ತವೆನಿಸಿದ್ದನ್ನು ಮಾಡುತ್ತಾರೆ. ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ರವೀಂದ್ರ ಜಡೇಜ ರನ್‌ಗಳನ್ನು ನಿಯಂತ್ರಿಸಿದ್ದರು. ಅದರಿಂದಾಗಿ ಇನ್ನೊಂದು ಬದಿಯಿಂದ ಮೂವರು ವೇಗಿಗಳನ್ನು ಪ್ರಯೋಗಿಸಲು ಅನುಕೂಲ ವಾಯಿತು. ಶಾರ್ದೂಲ್ ಸಾಮರ್ಥ್ಯ ನಮಗೆಲ್ಲ ತಿಳಿದಿದೆ. ಅವರು ನಾಲ್ಕನೇ ವೇಗಿ ಆದ ಮಾತ್ರಕ್ಕೆ ಸ್ಪಿನ್ನರ್ ಸ್ಥಾನದಲ್ಲಿ ಅವರನ್ನು ಬೌಲಿಂಗ್‌ಗೆ ಇಳಿಸಬೇಕೆಂದೇನೂ ಇಲ್ಲ. ಆಟ ಸಾಗಿದ್ದ ಪರಿಸ್ಥಿತಿಗೆ ತಕ್ಕಂತೆ ನಾಯಕ ನಿರ್ಧಾರ ತೆಗೆದುಕೊಂಡಿದ್ದಾರೆ’ ಎಂದು ಹೇಳಿದರು.

ಆದರೆ, ಜುಲೈ 2ರಿಂದ ಎಜ್‌ಬಾಸ್ಟನ್‌ನಲ್ಲಿ ಆರಂಭವಾಗಲಿರುವ ಎರಡನೇ ಟೆಸ್ಟ್‌ನಲ್ಲಿ ಠಾಕೂರ್ ಅವರಿಗೆ ವಿಶ್ರಾಂತಿ ಕೊಡಬೇಕು. ಅವರ ಬದಲಿಗೆ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರನ್ನು ಆಯ್ಕೆ ಮಾಡುವುದು ಉತ್ತಮ ಎಂಬ ಸಲಹೆಗಳನ್ನು ಹಲವು ಮಾಜಿ ಕ್ರಿಕೆಟ್ ತಾರೆಗಳು ನೀಡಿದ್ದಾರೆ.

‘ನಾಲ್ವರು ವೇಗಿಗಳೊಂದಿಗೆ ಆಡುವುದರಲ್ಲಿ ಅರ್ಥವಿಲ್ಲ. ಶಾರ್ದೂಲ್ ಅಥವಾ ಪ್ರಸಿದ್ಧ ಅವರಿಗೆ ವಿಶ್ರಾಂತಿ ಕೊಡಬೇಕು. ಕುಲದೀಪ್ ಅವರನ್ನು ಆಡಿಸಬೇಕು’ ಎಂದು ಭಾರತ ತಂಡದ ಮಾಜಿ ನಾಯಕ ದಿಲೀಪ್ ವೆಂಗಸರ್ಕಾರ್ ಅಭಿಪ್ರಾಯಪಟ್ಟಿದ್ದಾರೆ.

‘ಕುಲದೀಪ್ ಕಣಕ್ಕಿಳಿಯಬೇಕು. ಶಾರ್ದೂಲ್ ಹೊರಗುಳಿಯಬೇಕು. ಇದೊಂದು ಬದಲಾವಣೆಯು ಮುಂದಿನ ಪಂದ್ಯದ ಮಟ್ಟಿಗೆ ಅವಶ್ಯಕವಾಗಿದೆ’ ಎಂದು ವೀಕ್ಷಕ ವಿವರಣೆಗಾರ ಸಂಜಯ್ ಮಾಂಜ್ರೇಕರ್ ಹೇಳಿದ್ದಾರೆ.

‘ಮೊದಲ ಪಂದ್ಯದಲ್ಲಿ ನಿತೀಶ್ ಕುಮಾರ್ ರೆಡ್ಡಿ ಅವರಿಗೆ ಅವಕಾಶ ನೀಡುವಂತೆ ಹೇಳಿದ್ದೆ. ಆಸ್ಟ್ರೇಲಿಯಾದಲ್ಲಿ ಅವರು ಮಾಡಿದ್ದ ಸಾಧನೆಯನ್ನು ಪರಿಗಣಿಸಿ ಆ ರೀತಿಯಾಗಿ ಹೇಳಿದ್ದೆ. ಆದರೆ ನಿತೀಶ್ ಅವರು ನಾಲ್ಕನೇ ವೇಗಿಯ ಪಾತ್ರವನ್ನು ಪೂರ್ಣಪ್ರಮಾಣದಲ್ಲಿ ವಹಿಸುವುದು ಕಷ್ಟಸಾಧ್ಯ. ಆದ್ದರಿಂದ ಮುಂದಿನ ಪಂದ್ಯಕ್ಕೆ ಭಾರತ ತಂಡವು ದಿಟ್ಟ ನಿರ್ಧಾರ ತೆಗೆದುಕೊಂಡು ಪರಿಣತ ಬೌಲರ್ ಆಯ್ಕೆಗೆ ಆದ್ಯತೆ ನೀಡಬೇಕು’ ಎಂದೂ ಸಲಹೆ ನೀಡಿದ್ದಾರೆ.



ಬೌಲರ್ ಶಾರ್ದೂಲ್ ಠಾಕೂರ್ ಮತ್ತು ನಾಯಕ ಶುಭಮನ್ ಗಿಲ್ ಎಪಿ ಚಿತ್ರ

‘ಗಿಲ್‌ಗೆ ನಾಯಕತ್ವದ ಪ್ರಭಾವಳಿ ಇಲ್ಲ’

ಲೀಡ್ಸ್ (ಪಿಟಿಐ): ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ಸೋತ ನಂತರ ನೂತನ ನಾಯಕ ಗಿಲ್ ಅವರ ಕುರಿತು ಪರ, ವಿರೋಧ ಹೇಳಿಕೆಗಳು ಸುದ್ದಿಯಾಗುತ್ತಿವೆ.

ಇದೀಗ ಇಂಗ್ಲೆಂಡ್ ತಂಡದ ಮಾಜಿ ನಾಯಕ ನಾಸೀರ್ ಹುಸೇನ್ ಅವರೂ ತಮ್ಮ ಅಭಿಪ್ರಾಯವನ್ನು ಹರಿಬಿಟ್ಟಿದ್ದಾರೆ.

‘ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಗೆ ಇದ್ದಂತಹ ಪ್ರಭಾವಳಿಯು ಗಿಲ್ ಅವರಲ್ಲಿ ಕಾಣುತ್ತಿಲ್ಲ‘ ಎಂದು ಹುಸೇನ್ ಹೇಳಿದ್ದಾರೆ.

‘ರೋಹಿತ್ ಅಥವಾ ಕೊಹ್ಲಿ ಅವರು ನಾಯಕರಾಗಿದ್ದ ಸಂದರ್ಭದಲ್ಲಿ ಮುಂದಾಳತ್ವ ವಹಿಸಿದವರು ಯಾರೆಂಬುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಆದರೆ ಈಗ ಹಾಗಿಲ್ಲ. ಕಣದಲ್ಲಿ ಇಬ್ಬರು, ಮೂವರು ನಾಯಕರನ್ನು ಏಕಕಾಲಕ್ಕೆ ನೋಡಿದಂತಾಗಿದೆ. ಗಿಲ್ ಅವರಲ್ಲಿ ಆ ನಾಯಕತ್ವದ ಪ್ರಭಾವಳಿ ಎದ್ದು ಕಾಣುತ್ತಿಲ್ಲ’ ಎಂದಿದ್ದಾರೆ.

ರಿಷಭ್ ಡಬಲ್ ಶತಕ: ಗೌತಮ್ ಪ್ರತಿಕ್ರಿಯೆ

ಲೀಡ್ಸ್ (ಪಿಟಿಐ): ಮೊದಲ ಟೆಸ್ಟ್‌ನಲ್ಲಿ ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರು ಎರಡೂ ಇನಿಂಗ್ಸ್‌ಗಳಲ್ಲಿ ಶತಕ ದಾಖಲಿಸಿದರು. ಆದರೆ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮಾತ್ರ ಈ ಸಾಧನೆಯ ಕುರಿತು ಮೆಚ್ಚುಗೆ ಮಾತುಗಳನ್ನಾಡಲು ಅದ್ಯಾಕೋ ಮನಸ್ಸು ಮಾಡಲಿಲ್ಲ.

ಸುದ್ದಿಗೋಷ್ಠಿಯಲ್ಲಿ ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಇದಲ್ಲದೇ ಇನ್ನೂ ಮೂರು ಶತಕಗಳೂ ಈ ಪಂದ್ಯದಲ್ಲಿ ನಮ್ಮವರಿಂದ ದಾಖಲಾಗಿವೆ. ಅವು ಕೂಡ ಈ ಪಂದ್ಯದ ಸಕಾರಾತ್ಮಕ ಅಂಶಗಳಾಗಿವೆ’ ಎಂದರು.

ಮಾಧ್ಯಮ ಪ್ರತಿನಿಧಿಗಳು ರಿಷಭ್ ಸಾಧನೆಯ ಬಗ್ಗೆ ಮತ್ತೆ ಒತ್ತಿ ಕೇಳಿದಾಗ, ‘ಒಂದೊಮ್ಮೆ ನೀವು ಯಶಸ್ವಿ (ಜೈಸ್ವಾಲ್), ನಾಯಕನಾಗಿ ಪದಾರ್ಪಣೆ ಮಾಡಿದ ಮೊದಲ ಪಂದ್ಯದಲ್ಲಿಯೇ ಶುಭಮನ್ (ಗಿಲ್), ಕೆ.ಎಲ್. (ರಾಹುಲ್) ಅವರು ತಲಾ ಒಂದು ಶತಕ ಮತ್ತು ರಿಷಭ್ ಅವರಿಂದ ಎರಡು ಶತಕಗಳು ದಾಖಲಾಗಿರುವುದರ ಬಗ್ಗೆ ಕೇಳಿದ್ದರೆ ನನಗೆ ಇಷ್ಟವಾಗುತ್ತಿತ್ತು. ಪ್ರಶ್ನೆ ಇನ್ನೂ ಸೂಕ್ತವಾಗುತ್ತಿತ್ತು. ಒಂದೇ ಪಂದ್ಯದಲ್ಲಿ ಐದು ಶತಕಗಳು ದಾಖಲಾಗಿರುವುದು ಟೆಸ್ಟ್ ಸರಣಿಯಲ್ಲಿ ಉತ್ತಮ ಆರಂಭ’ ಎಂದರು.

ಟೆಸ್ಟ್ ರ‍್ಯಾಂಕಿಂಗ್: 7ನೇ ಸ್ಥಾನಕ್ಕೆ ಪಂತ್



ದುಬೈ (ಪಿಟಿಐ): ಭಾರತದ ವಿಕೆಟ್ ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರು ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ಪಟ್ಟಿಯಲ್ಲಿ ಜೀವನಶ್ರೇಷ್ಠ ಏಳನೇ ಸ್ಥಾನಕ್ಕೆ ಜಿಗಿದಿದ್ದಾರೆ. ಇಂಗ್ಲೆಂಡ್ ವಿರುದ್ಧ ಮಂಗಳವಾರ ಲೀಡ್ಸ್‌ನಲ್ಲಿ ಮುಕ್ತಾಯಗೊಂಡ ಮೊದಲ ಟೆಸ್ಟ್‌ನಲ್ಲಿ ಅವರು ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಬಾರಿಸಿ ಅಮೋಘ ಸಾಧನೆ ಪ್ರದರ್ಶಿಸಿದ್ದರು.

ಭಾರತ ಟೆಸ್ಟ್ ತಂಡದ ನೂತನ ನಾಯಕ ಶುಭಮನ್ ಗಿಲ್ ಐದು ಸ್ಥಾನ ಬಡ್ತಿಯೊಡನೆ 20ನೇ ಕ್ರಮಾಂಕ ಪಡೆದಿದ್ದಾರೆ. ಇದೇ ಟೆಸ್ಟ್‌ನಲ್ಲಿ 62 ಮತ್ತು 149 ರನ್ ಬಾರಿಸಿದ್ದ ಇಂಗ್ಲೆಂಡ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಆರಂಭ ಆಟಗಾರ ಬೆನ್ ಡಕೆಟ್ ಐದು ಸ್ಥಾನ ಬಡ್ತಿ ಪಡೆದು ಎಂಟನೇ ಸ್ಥಾನಕ್ಕೆ ಏರಿದ್ದಾರೆ. ಒಲಿ ಪೋಪ್ ಕೂಡ ಅಗ್ರ 20ರೊಳಗೆ (19ನೇ ಸ್ಥಾನ) ಕಾಣಿಸಿಕೊಂಡಿದ್ದಾರೆ.

ಇಂಗ್ಲೆಂಡ್‌ನ ಅನುಭವಿ ಜೋ ರೂಟ್ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ. ಇದೇ ತಂಡದ ಹ್ಯಾರಿ ಬ್ರೂಕ್ ಎರಡನೇ ಕ್ರಮಾಂಕ ಪಡೆದಿದ್ದಾರೆ.

ತಂಡದಿಂದ ಹೊರಬಿದ್ದ ಹರ್ಷಿತ್



ಬರ್ಮಿಂಗ್‌ಹ್ಯಾಮ್ (ಪಿಟಿಐ): ವೇಗದ ಬೌಲರ್ ಹರ್ಷಿತ್ ರಾಣಾ ಅವರನ್ನು ಭಾರತ ಕ್ರಿಕೆಟ್ ತಂಡದಿಂದ ಬಿಡುಗಡೆ ಮಾಡಲಾಗಿದೆ.

ಲೀಡ್ಸ್‌ನಲ್ಲಿ ಮುಕ್ತಾಯವಾದ ಟೆಸ್ಟ್ ವೇಳೆ ಹರ್ಷಿತ್ ಭಾರತದ ಬಳಗದಲ್ಲಿದ್ದರು. ಹೋದ ವರ್ಷ ಆಸ್ಟ್ರೇಲಿಯಾದಲ್ಲಿ ಅವರು ಎರಡು ಟೆಸ್ಟ್‌ಗಳಲ್ಲಿ ಆಡಿದ್ದರಾದರೂ, ಪರಿಣಾಮಕಾರಿಯಾಗಿರಲಿಲ್ಲ. ಈಚೆಗೆ ಇಂಗ್ಲೆಂಡ್ ಲಯನ್ಸ್ ಎದುರಿನ ‘ಟೆಸ್ಟ್’ನಲ್ಲಿ ಆಡಿದ್ದ ಭಾರತ ಎ ತಂಡದಲ್ಲಿಯೂ ಅವರಿದ್ದರು. 27 ಓವರ್‌ಗಳಲ್ಲಿ 99 ರನ್ ಕೊಟ್ಟು ಒಂದು ವಿಕೆಟ್ ಪಡೆದಿದ್ದರು.

‘ಹರ್ಷಿತ್ ರಾಣಾ ಅವರನ್ನು ತಂಡದಿಂದ ಮುಕ್ತಗೊಳಿಸಲಾಗಿದೆ. ಅವರು ಜುಲೈ 2ರಿಂದ ನಡೆಯುವ ಎರಡನೇ ಟೆಸ್ಟ್‌ಗೆ ಲಭ್ಯವಿರುವುದಿಲ್ಲ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಒಸ್ಟ್ರಾವಾದ ಗೋಲ್ಡನ್ ಸ್ಪೈಕ್ ಕೂಟದಲ್ಲಿ ಚಿನ್ನ ಗೆದ್ದ ನೀರಜ್ ಚೋಪ್ರಾ

‘ಪ್ರದರ್ಶನ ಇನ್ನೂ ಉತ್ತಮವಾಗಿರಬೇಕಿತ್ತು..’

ಒಸ್ಟ್ರಾವಾ (ಝೆಕ್ ರಿಪಬ್ಲಿಕ್) (ಪಿಟಿಐ): ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಗೋಲ್ಡನ್ ಸ್ಪೈಕ್ ಅಥ್ಲೆಟಿಕ್ ಕೂಟದ ಪದಾರ್ಪಣೆಯಲ್ಲೇ ಮಂಗಳವಾರ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಆದರೆ ಮಾಜಿ ಒಲಿಂಪಿಕ್ ಚಾಂಪಿಯನ್ ಚೋಪ್ರಾ ಅವರಿಗೆ ಈ ಕೂಟದಲ್ಲಿ ತಮ್ಮ ಪ್ರದರ್ಶನ ತೃಪ್ತಿ ತಂದಿಲ್ಲ.

ಒಂಬತ್ತು ಮಂದಿ ಸ್ಪರ್ಧಿಸಿದ್ದ ಕಣದಲ್ಲಿ ಚೋಪ್ರಾ ಅವರು ಮೂರನೇ ಅವಕಾಶದಲ್ಲಿ 85.29 ಮೀ. ಎಸೆದು ಅಗ್ರಸ್ಥಾನ ಪಡೆದಿದ್ದರು.

‘ಈ ಕೂಟದಲ್ಲಿನ ನನ್ನ ಪ್ರದರ್ಶನ ಸಮಾಧಾನ ತಂದಿಲ್ಲ. ಆದರೆ ಟ್ರೋಫಿ ಗೆದ್ದಿರುವುದು ತುಂಬಾ ಸಂತಸ ತಂದಿದೆ’ ಎಂದು ಚೋಪ್ರಾ ಪ್ರತಿಕ್ರಿಯಿಸಿದರು.

‘ನಾನು ಪುಟ್ಟ ವಯಸ್ಸಿನಲ್ಲಿ ಈ ಕೂಟವನ್ನು ಸಾಕಷ್ಟು ಸಲ ವೀಕ್ಷಿಸಿದ್ದೆ. ಝೆಕ್ ಗಣರಾಜ್ಯದ ದಿಗ್ಗಜ ಯಾನ್ ಝೆಲೆಝ್ನಿ ಮತ್ತು ಸ್ಪ್ರಿಂಟರ್ ಉಸೇನ್ ಬೋಲ್ಟ್ ಅವರು ಗೋಲ್ಡನ್ ಸ್ಪೈಕ್ ಕೂಟಗಳಲ್ಲಿ ಗೆದ್ದಿರುವುದನ್ನೂ ನೋಡಿದ್ದೆ. ನಾನೂ ಇಲ್ಲಿ ಗೆಲ್ಲುವ ಕನಸು ಕಂಡಿದ್ದೆ. ಈಗ ಅದು ಸಾಕಾರವಾಗಿದೆ’ ಎಂದು ಖುಷಿಪಟ್ಟರು.

‘ಝೆಕ್ ಗಣರಾಜ್ಯದಲ್ಲಿ ಜಾವೆಲಿನ್ ಥ್ರೊ ತುಂಬಾ ಜನಪ್ರಿಯ. ಪ್ರೇಕ್ಷಕರಿಂದ ಭಾರಿ ಬೆಂಬಲ ದೊರೆಯುತ್ತಿತ್ತು. ಅವರಿಗಾಗಿಯಾದರೂ ಉತ್ತಮ ಪ್ರದರ್ಶನ ನೀಡಬೇಕಿತ್ತು’ ಎಂದು ಚೋಪ್ರಾ ಹೇಳಿದರು.

ದಕ್ಷಿಣ ಆಫ್ರಿಕಾದ ಡೊವ್ ಸ್ಮಿತ್ ಎರಡನೇ ಯತ್ನದಲ್ಲಿ 84.12 ಮೀ. ದೂರ ಎಸೆದಿದ್ದು ಅವರಿಗೆ ಎರಡನೇ ಸ್ಥಾನ ದಕ್ಕಿಸಿತು. ಗ್ರೆನೇಡಾದ ಆ್ಯಂಡರ್ಸನ್ ಪೀಟರ್ಸ್ (83.63 ಮೀ.) ಮೂರನೇ ಸ್ಥಾನ ಗಳಿಸಿದರು.

ಪ್ರಬಲ ಎದುರಾಳಿ, ಜರ್ಮನಿಯ ಜೂಲಿಯನ್ ವೆಬರ್ ಅವರ ಅನುಪಸ್ಥಿತಿಯಲ್ಲಿ ಚೋಪ್ರಾ ಅವರು ಈ ಕೂಟ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದರು.

ಮೇ ತಿಂಗಳಲ್ಲಿ ದೋಹಾ ಡೈಮಂಡ್ ಲೀಗ್‌ನಲ್ಲಿ ಚೋಪ್ರಾ ಮೊದಲ ಸಲ 90 ಮೀ. ಮೈಲಿಗಲ್ಲು ದಾಟಿದ ಮೇಲೆ ಅವರ ಮೇಲೆ ನಿರೀಕ್ಷೆಯ ಭಾರ ಹೆಚ್ಚಿದೆ.

ಚೋಪ್ರಾ ಮೊದಲ ಯತ್ನದಲ್ಲಿ ಫೌಲ್ ಆದರು. ಎರಡನೇ ಯತ್ನದಲ್ಲಿ 83.45 ಮೀ. ಎಸೆದರು. ಮೂರನೇ ಯತ್ನ ಅವರಿಗೆ ಮುನ್ನಡೆ ದೊರಕಿಸಿತು. ನಂತರದ ಎರಡು ಯತ್ನಗಳಲ್ಲಿ ಕ್ರಮವಾಗಿ 82.17 ಮತ್ತು 81.01 ಮೀ. ಎಸೆದರು. ಆರನೇ ಯತ್ನ ಫೌಲ್ ಆಯಿತು

ಚೋಪ್ರಾ ಅವರ ಮುಂದಿನ ಸ್ಪರ್ಧೆ– ಎನ್‌ಸಿ ಕ್ಲಾಸಿಕ್ ಕೂಟ ಬೆಂಗಳೂರಿನಲ್ಲಿ ಜುಲೈ 5ರಂದು ನಡೆಯಲಿದೆ.



ನೀರಜ್ ಚೋಪ್ರಾ ಎಎಫ್‌ಪಿ ಚಿತ್ರ

ಚೆಸ್: ಲಲಿತ್‌ಬಾಬುಗೆ ಪ್ರಶಸ್ತಿ

ಮುಂಬೈ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಲಲಿತ್ ಬಾಬು ಅವರು ಮುಂಬೈ ಇಂಟರ್‌ನ್ಯಾಷನಲ್ ಗ್ರ್ಯಾಂಡ್‌ಮಾಸ್ಟರ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಉತ್ತಮ ಟೈಬ್ರೇಕ್ ಸ್ಕೋರ್ ಆಧಾರದಲ್ಲಿ ಅವರು ಅರ್ಮೇನಿಯಾದ ಮಮಿಕಾನ್ ಘರಿಬ್ಯಾನ್ ಅವರನ್ನು ಹಿಂದೆಹಾಕಿದರು.

ಬುಧವಾರ ನಡೆದ 9ನೇ ಹಾಗೂ ಅಂತಿಮ ಸುತ್ತಿನ ಪಂದ್ಯದಲ್ಲಿ ಬಾಬು, ಅಗ್ರ ಶ್ರೇಯಾಂಕದ ಜಾರ್ಜಿಯಾದ ಗ್ರ್ಯಾಂಡ್‌ಮಾಸ್ಟರ್ ಲೆವಾನ್ ಪಂಟ್ಸುಲಾಯಿಯ ಅವರನ್ನು ಸೋಲಿಸಿ ಒಟ್ಟು ಎಂಟು ಪಾಯಿಂಟ್ಸ್ ಕಲೆಹಾಕಿದರು.

ಇನ್ನೊಂದು ಪಂದ್ಯದಲ್ಲಿ ಭಾರತದ ಜಿಎಂ ನೀಲೋತ್ಪಲ್ ದಾಸ್ ಅವರನ್ನು ಸೋಲಿಸಿದ ಘರಿಬ್ಯಾನ್ ಕೂಡ ಎಂಟು ಪಾಯಿಂಟ್ಸ್ ಗಳಿಸಿದ್ದರು. ಹೀಗಾಗಿ ಅಗ್ರಸ್ಥಾನ ನಿರ್ಧರಿಸಲು ಟೈಬ್ರೇಕ್ ಬಳಸಲಾಯಿತು. ಇದರಲ್ಲಿ ಬಾಬು 54.5, ಅರ್ಮೇನಿಯಾದ ಗ್ರ್ಯಾಂಡ್‌ಮಾಸ್ಟರ್ 54 ಸ್ಕೋರ್ ಗಳಿಸಿದ್ದರು.

ಲಲಿತ್ ಬಾಬು ಟ್ರೋಫಿ ಜೊತೆ ₹4 ಲಕ್ಷ ನಗದು ಬಹುಮಾನ ಜೇಬಿಗಿಳಿಸಿದರು. ಘರಿಬ್ಯಾನ್ ಅವರು ₹3 ಲಕ್ಷ ಬಹುಮಾನ ತಮ್ಮದಾಗಿಸಿಕೊಂಡರು. ಭಾರತದ ಇನ್ನೊಬ್ಬ ಆಟಗಾರ ದೀಪನ್ ಚಕ್ರವರ್ತಿ ಐದನೇ ಸ್ಥಾನ ಗಳಿಸಿ ₹1.24 ಬಹುಮಾನ ಪಡೆದರು.



ಲಲಿತ್ ಬಾಬು ಅವರು ಅತಿಥಿಗಳಿಂದ ಬಹುಮಾನ ಸ್ವೀಕರಿಸಿದರು. ಎರಡನೇ ಸ್ಥಾನ ಪಡೆದ ಅರ್ಮೇನಿಯಾದ ಪೆಂಟ್ಸುಲಾಯಿಯ (ಎಡಗಡೆ), ಗ್ರ್ಯಾಂಡ್‌ಮಾಸ್ಟರ್ ಪ್ರವೀಣ್ ತಿಪ್ಸೆ (ಬಲಗಡೆ) ಅವರೂ ಪಾಲ್ಗೊಂಡಿದ್ದರು

ಜೂನಿಯರ್ ವಿಭಾಗದಲ್ಲಿ ಭಾರತದ ಮಾಧೇಶ್ ಕುಮಾರ್ ಚಾಂಪಿಯನ್ ಆದರು. ಅಂತಿಮ ಸುತ್ತಿನಲ್ಲಿ ಪ್ರೋಮ್ ಮಲ್ಹೋತ್ರಾ ಅವರನ್ನು ಮಣಿಸಿ ಟ್ರೋಫಿ ಜೊತೆ ₹2 ಲಕ್ಷ ಬಹುಮಾನ ಪಡೆದರು.

ಟಿಟಿ: ತನಿಷ್ಕಾ, ಅಭಿನವ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನಿಷ್ಕಾ ಕಪಿಲ್ ಕಾಲಭೈರವ ಹಾಗೂ ಅಭಿನವ್ ಕೆ. ಮೂರ್ತಿ ಅವರು ಕರ್ನಾಟಕ ಸರ್ಕಾರದ ಸಚಿವಾಲಯ (ಕೆಜಿಎಸ್) ಕ್ಲಬ್ ಆಯೋಜಿಸಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 19 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ನಗರದ ಕೆಜಿಎಸ್ ಕ್ಲಬ್‌ನಲ್ಲಿ ಟೂರ್ನಿಯ ಮೊದಲ ದಿನವಾದ ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ, ಅಭಿನವ್ 11–8, 9–11, 13–11, 16–14, 5–11, 11–4ರಿಂದ ವಿಭಾಸ್ ವಿ.ಜಿ. ಅವರನ್ನು ಸೋಲಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ವಿಭಾಸ್ 11–3, 11–6, 11–9 ರಿಂದ ಗೌರವ್ ಗೌಡ ವಿರುದ್ಧ, ಅಭಿನವ್ 13–11, 11–6, 10–12, 8–11, 12–10 ರಿಂದ ಅಥರ್ವ ನವರಂಗೆ ವಿರುದ್ಧ ಗೆಲುವು ಪಡೆದಿದ್ದರು.

ಬಾಲಕಿಯರ ಫೈನಲ್‌ನಲ್ಲಿ ತನಿಷ್ಕಾ 11–2, 11–4, 11–8, 11–7ರಿಂದ ಮಿಹಿಕಾ ಸುಮೇಧಾ ಕೆ.ಎಸ್. ಭಟ್ ಅವರನ್ನು ಮಣಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಸುಮೇಧಾ 11–3, 9–11, 11–8, 10–12, 11–7 ರಿಂದ ಶಿವಾನಿ ಮಹೇಂದ್ರನ್ ವಿರುದ್ಧ; ತನಿಷ್ಕಾ 11–3, 9–11, 11–4, 7–11, 11–9 ರಿಂದ ನೀತಿ ಅಗರವಾಲ್ ವಿರುದ್ಧ ಜಯ ಪಡೆದಿದ್ದರು.



ಅಭಿನವ್ ಕೆ. ಮೂರ್ತಿ, ತನಿಷ್ಕಾ ಕಪಿಲ್ ಕಾಲಭೈರವ